ಬೇಲೂರು ತಾಲೂಕಿನ ವೀರಭದ್ರ ಪರಂಪರೆ

(೨೦೧೬-೧೭ನೆಯ ಸಾಲಿನ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾದ ಪ್ರಬಂಧ)

ಸಂಶೋಧಕರು

ನೋಂದಣಿ ಸಂಖ್ಯೆ : 160108030022

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೧೭

ಬೇಲೂರು ತಾಲೂಕಿನ ವೀರಭದ್ರ ಪರಂಪರೆ

(೨೦೧೬-೧೭ನೆಯ ಸಾಲಿನ ಎಂ.ಫಿಲ್. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಸಂಪ್ರಬಂಧ)

ನೋಂದಣಿ ಸಂಖ್ಯೆ : ೧೬೦೧೦೮೦೩೦೦೨೨

ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ ಹಂಪಿ.
ವಿದ್ಯಾರಣ್ಯ – ೫೮೩೨೭೬
೨೦೧೭

ಪರಿವಿಡಿ

ಅಧ್ಯಾಯ – ಒಂದು

ಪ್ರಸ್ತಾವನೆ

ಉದ್ದೇಶ, ವ್ಯಾಪ್ತಿ, ಸಮೀಕ್ಷೆ, ವಿಧಾನ, ಸ್ವರೂಪ

ಅಧ್ಯಾಯ : ಒಂದು

ಪ್ರಸ್ತಾವನೆ

ಪ್ರಾಚೀನ ಕಾಲದಿಂದ ಪ್ರಸ್ತುತದವರೆಗೆ ನಮ್ಮ ಹುಟ್ಟು, ವಿಕಾಸ, ಬೆಳವಣಿಗೆ, ಅಭಿವೃದ್ಧಿ, ಕಲೆ, ಪ್ರಭುತ್ವ, ರಾಜಪ್ರಭುತ್ವ, ಹೋರಾಟ, ಸ್ವಾತಂತ್ರ್ಯ, ಪ್ರಜಾಪ್ರಭುತ್ವ ಹೀಗೆ ಮುಂತಾದ ಅಂಶಗಳ ಹಿನ್ನೆಲೆ ಮತ್ತು ವಿಚಾರಗಳನ್ನು ತಿಳಿದುಕೊಳ್ಳಬೇಕಾದರೆ ಇತಿಹಾಸದ ಅಧ್ಯಯನ ಅವಶ್ಯಕವಾಗಿದೆ. ಇತಿಹಾಸವು ಹಲವು ಶತಮಾನಗಳಲ್ಲಿ ಮಾನವನು ನಡೆದುಬಂದ ದಾರಿಯ ಕಿರುನೋಟವನ್ನು ಒದಗಿಸುತ್ತದೆ. ಸಾಂಪ್ರದಾಯಿಕವಾಗಿ ಇತಿಹಾಸವು ಗತಕಾಲದಲ್ಲಿ ನಡೆದಂತಹ ಘಟನೆಗಳನ್ನು ಅಧ್ಯಯನ ಮಾಡುತ್ತದೆ ಎಂದು ಹೇಳಬಹುದು. ಆದರೆ ಇತಿಹಾಸದ ವಿವಿಧ ಪಂಥಗಳ ಇತಿಹಾಸಕಾರರು ಹೇಳುವಂತೆ ಚರಿತ್ರೆಯು ಕೇವಲ ಗತಕಾಲದ ಅಧ್ಯಯನ ಮಾಡುವುದೇ ಅದರ ಅಂತಿಮ ಗುರಿಯಲ್ಲ. ಬದಲಾಗಿ ಚರಿತ್ರೆಕಾರ ವರ್ತಮಾನದಲ್ಲಿದ್ದುಕೊಂಡು ಗತದೊಂದಿಗೆ ಸಂಭಾಷಣೆ ನಡೆಸುತ್ತಿರುತ್ತಾನೆ. ಹೀಗಾಗಿ ಕೊನೆಯವರೆಗೂ ಸಹ ಇತಿಹಾಸವು ಒಂದು ಮುಗಿಯದ ಚರ್ಚೆಯಾಗಿದೆ ಎಂದಿದ್ದಾರೆ. ಇದಕ್ಕೆ ಇತಿಹಾಸಕಾರರ ಸಮರ್ಥನೆ ಎಂದರೆ ಇತಿಹಾಸದಲ್ಲಿ ಗತಕಾಲದ ವಿಚಾರವನ್ನು ಕುರಿತು ದಿನಕ್ಕೊಂದು ಸತ್ಯ, ಮಾಹಿತಿ, ಆಧಾರ ದೊರಕುವುದರಿಂದ ಇದರ ಚರ್ಚೆ ಕೊನೆಯವರೆಗೂ ಮುಗಿಯುವುದಿಲ್ಲ ಎಂದಿದ್ದಾರೆ. ಅಲ್ಲದೇ ಭೂಮಿಯ ಉಗಮದಿಂದ ಹಿಡಿದು ಇಂದಿನವರೆಗೂ ಸಹ ನಡೆದ ಘಟನೆಗಳು ಇತಿಹಾಸದ ಪುಟಕ್ಕೆ ಸೇರಿವೆ. ಮತ್ತು ಮುಂದೆ ಪ್ರತಿನಿತ್ಯ ನಡೆಯುವ ಘಟನೆಗಳನ್ನು ಸಹ ಇತಿಹಾಸವು ತನ್ನ ಮಡಿಲಿಗೆ ಸೇರಿಸಿಕೊಳ್ಳುತ್ತದೆ.

ಇತಿಹಾಸವು ಯುಗ ಯುಗಾಂತರಗಳಿಂದ ಮಾನವನು ಪ್ರಗತಿಹೊಂದಿದ್ದಾನೆಯೋ, ಅವನತಿ ಹೊಂದಿದ್ದಾನೆಯೋ, ಎಂಬುದನ್ನು ಅಳೆಯುವ ಮಾಪಕವಾಗಿದೆ. ಹಿಂದಿನ ಬೆಳಕನ್ನು ಹಾಯಿಸಿ ಗತಕಾಲದ ಘಟನೆಗಳ ಬಗೆಗೆ ಅರಿಯುವುದು ಅವುಗಳ ಮೌಲ್ಯಮಾಪನ, ವರ್ತಮಾನದ ಘಟನೆಗಳನ್ನು ಉತ್ತಮ ಪಡಿಸುವುದು ಹಾಗೂ ಭವಿಷ್ಯತ್ತಿನ ಘಟನೆಗಳನ್ನು ಮುಂಗಾಣುವುದು ಅದರ ಮುಖ್ಯ ಉದ್ದೇಶ. ಅದು ಮನುಷ್ಯನ ಸ್ಮರಣಶಕ್ತಿಯ ಹಾಗೆ ಅದು ಭವಿಷ್ಯತ್ತನ್ನು ಕಟ್ಟುವ ಸಲುವಾಗಿ ಭೂತಕಾಲದ ಅನುಭವವನ್ನು ನೀಡುತ್ತದೆ. ವರ್ತಮಾನವು ಭೂತಕಾಲದ ಫಲವಾಗಿರುವಂತೆ ಭವಿಷ್ಯತ್ತು ವರ್ತಮಾನದ ಫಲ. ಇತಿಹಾಸದ ಕೆಲವು ಪುಟಗಳು ಮಾನವನ ಮನಸ್ಸನ್ನು ಕುರಿತು ಸಂಪುಟಗಟ್ಟಲೇ ತತ್ವಶಾಸ್ತ್ರಕ್ಕಿಂತಲೂ ಹೆಚ್ಚಿನ ಅಂತರ್ದೃಷ್ಟಿಯನ್ನು ಕೊಡುತ್ತದೆ ಎಂದು ಹೇಳಲಾಗಿದೆ. ಭೂತಕಾಲವನ್ನು ಅರಿತುಕೊಳ್ಳದ ದೇಶಕ್ಕೆ ಭವಿತವ್ಯವಿಲ್ಲ ಆದ್ದರಿಂದಲೇ ಇತಿಹಾಸಕ್ಕೆ ಸಮುಚಿತ ಸ್ಥಾನ.[೧]

ಆಧಾರವಿಲ್ಲದೆ ಇತಿಹಾಸವಿಲ್ಲ ಎನ್ನುವಂತೆ ಹಲವು ಆಧಾರಗಳ ಮೇಲೆ ಇತಿಹಾಸವನ್ನು ಕಟ್ಟಲಾಗುತ್ತದೆ. ಯಾವುದೇ ಒಂದು ಚರಿತ್ರೆಯನ್ನು ಕಟ್ಟಬೇಕಾದರೆ ಅದಕ್ಕೆ ಆಧಾರಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಪ್ರಾಚೀನ ಕಾಲದ ಚರಿತ್ರೆಯನ್ನು ಸಮಗ್ರವಾಗಿ ಕಟ್ಟಬೇಕಾದರೆ ಅದಕ್ಕೆ ಆಧಾರಗಳಾಗಿ ಪ್ರಾಚ್ಯಾವಶೇಷಗಳು ದೊರೆಯುತ್ತವೆ. ಹಾಗೆಯೇ ಆಧುನಿಕ ಕಾಲದ ಇತಿಹಾಸ ಕಟ್ಟಲು ಬರವಣಿಗೆ

ದಾಖಲೆಗಳು ಹೆಚ್ಚಾಗಿ ಲಭ್ಯವಾಗುತ್ತವೆ. ಪ್ರಾಚೀನ ಕಾಲದ ಮಾನವನು ಬಳಸಿಬಿಟ್ಟಂತಹ ವಸ್ತುಗಳು, ಕಲೆಯ ಪ್ರತೀಕವಾದ ದೇವಾಲಯಗಳು, ವಿವಿಧ ಭಾಷೆ ಲಿಪಿಗಳನ್ನೊಳಗೊಂಡ ಶಾಸನಗಳು ಮತ್ತು ನಾಣ್ಯಗಳು ಸೇರಿದಂತೆ ಹಲವು ಪ್ರಾಚ್ಯಾವಶೇಷಗಳು ಪ್ರಾಚೀನ ಕಾಲದ ಇತಿಹಾಸ ಕಟ್ಟಲು ಸಹಕಾರಿಯಾಗಿವೆ. ಹಾಗೆಯೇ ಈ ಅವಶೇಷಗಳನ್ನು ಇಟ್ಟುಕೊಂಡು ಪ್ರಾಚೀನ ಇತಿಹಾಸವನ್ನು ಅಧ್ಯಯನ ಮಾಡುವ ಶಾಸ್ತ್ರವನ್ನು ಪ್ರಾಕ್ತನಶಾಸ್ತ್ರ ಎನ್ನುತ್ತಾರೆ. ಪ್ರಾಕ್ತನಶಾಸ್ತ್ರವು ಇತಿಹಾಸದ ಒಂದು ಶಾಖೆಯಾಗಿರುವುದರಿಂದ ಈ ಶಾಸ್ತ್ರವು ಚರಿತ್ರೆ ಕಟ್ಟಲು ಪೂರಕವಾದ ಮಾಹಿತಿಗಳನ್ನು ಒದಗಿಸುತ್ತದೆ.

೪.೬ ಬಿಲಿಯನ್ ವರ್ಷಗಳ ಹಿಂದೆ ಈ ಭೂಮಿಯು ಉಗಮವಾಗಿದ್ದು ಮಾನವನ ಕುರುಹುಗಳು ನಮಗೆ ೫ ಲಕ್ಷ ವರ್ಷಗಳ ಹಿಂದಿನಿಂದ ಕಂಡುಬರುತ್ತದೆ ಎಂದು ಪ್ರಾಕ್ತನಶಾಸ್ತ್ರಜ್ಞರು ತಮ್ಮ ಸಂಶೋಧನೆಯಿಂದ ದೃಢಪಡಿಸಿದ್ದಾರೆ. ಅಲ್ಲದೆ ೫ ಲಕ್ಷ ವರ್ಷಗಳಿಂದ ಕ್ರಿ.ಪೂ. ೮ ಸಾವಿರ ವರ್ಷಗಳವರೆಗೆ ಹಳೆಯ ಶಿಲಾಯುಗವನ್ನು ಗುರುತಿಸಲಾಗಿದ್ದು, ಅಂದಿನ ಮಾನವನು ಅಲೆಮಾರಿಯಾಗಿ ಬೇಟೆಯಾಡಿಕೊಂಡು ಜೀವನ ಸಾಗಿಸುತ್ತಿದ್ದನು. ತದನಂತರ ಹಲವು ವರ್ಷಗಳು ಕಳೆಯುತ್ತಾ ಹೋದಂತೆ ನಿಧಾನವಾಗಿ ಅವನ ಬೌದ್ಧಿಕ, ಮಾನಸಿಕ ಮತ್ತು ಶಾರೀರಿಕ ಬೆಳವಣಿಗೆಯಲ್ಲಿ ಬದಲಾವಣೆ ಕಂಡುಬರುವುದಕ್ಕೆ ಪ್ರಾರಂಭವಾಗುತ್ತದೆ. ನಂತರ ಮಧ್ಯಶಿಲಾಯುಗ (ಕ್ರಿ.ಪೂ. ೮೦೦೦ – ಕ್ರಿ.ಪೂ. ೬೦೦೦) ದ ಹೊತ್ತಿಗೆ ಅವನ ಆಯುಧಗಳಿಂದ ಅವನು ಬದುಕುವ ರೀತಿಯಲ್ಲಿ ಸುಧಾರಣೆ ಕಂಡುಬರುತ್ತದೆ. ನಂತರ ನವಶಿಲಾಯುಗದ ಹೊತ್ತಿಗಾಗಲೇ ಮಾನವನು ಬಹುತೇಕ ನಾಗರೀಕತೆಯತ್ತ ಮುಖಮಾಡಿರುತ್ತಾನೆ. ಅಂದರೆ ಮೊದಲು ಅಲೆಮಾರಿಯಾಗಿದ್ದ ಮಾನವನು ಒಂದು ಕಡೆ ನೆಲೆ ನಿಂತು ಪಶುಪಾಲನೆ ಮಾಡುವುದರೊಂದಿಗೆ ಗ್ರಾಮ ಸಂಸ್ಕೃತಿಯನ್ನು ರೂಢಿಸಿಕೊಂಡಿರುತ್ತಾನೆ. ಅಲ್ಲದೇ ಕೃಷಿಯನ್ನು ಪ್ರಾರಂಭಿಸುವುದರ ಜೊತೆಗೆ ಮಡಕೆ ತಯಾರು ಮಾಡುವ ಕಲೆಯನ್ನು ಕಂಡುಕೊಂಡು ಅವರಿಗೆ ಅವಶ್ಯವಾದ ವಸ್ತುಗಳನ್ನು ಅವರೇ ತಯಾರು ಮಾಡಿಕೊಳ್ಳುವ ಮಟ್ಟಿಗೆ ನಾಗರೀಕರಾಗುತ್ತಾರೆ. ಮತ್ತು ಶವಸಂಸ್ಕಾರ ಪದ್ಧತಿಯನ್ನು ಕೂಡ ಈ ಕಾಲ ಘಟ್ಟದಿಂದಲೆ ಗುರುತಿಸಲಾಗಿದೆ. ಇಲ್ಲಿ ಶವಸಂಸ್ಕಾರ ಇತ್ತು ಎಂದ ಮೇಲೆ ನಿಧಾನವಾಗಿ ಧರ್ಮ ಮತ್ತು ದೇವರ ಪರಿಕಲ್ಪನೆ ಬಂದಿದೆ ಎನ್ನಬಹುದು. ಕಾರಣ ಇವರು ಶವಸಂಸ್ಕಾರವನ್ನು ಗುಂಡಿ ತೆಗೆದು ಮಡಕೆಯಲ್ಲಿ, ಶಿಲಾಗೋರಿಗಳಲ್ಲಿ ಮಾಡುತ್ತಿದ್ದರು ಅಲ್ಲದೆ ಅವರು ಉಪಯೋಗಿಸುತ್ತಿದ್ದ ಕೆಲವು ವಸ್ತುಗಳನ್ನು ಅದರೊಳಗೆ ಇಡುತ್ತಿದ್ದರು, ಇದರಿಂದ ಅವರಲ್ಲಿ ತಮ್ಮ ಪೂರ್ವಜರು ಮತ್ತೆ ಹುಟ್ಟಿ ಬರುತ್ತಾರೆಂಬ ನಂಬಿಕೆ ಇತ್ತು. ಇಂತಹ ನಂಬಿಕೆಯನ್ನೇ ನಾವು ಸಂಪ್ರದಾಯ ಎಂದು ಅರ್ಥೈಸಿಕೊಳ್ಳಬಹುದು.

ಭಾರತೀಯ ಸಂಸ್ಕೃತಿಯು ಹಲವು ಧರ್ಮಗಳ ನೆಲೆಬೀಡು. ಸಿಂಧೂ ಬಯಲಿನಲ್ಲಿ ವಾಸಿಸುತ್ತಿದ್ದ ಜನರು ಕಾಲ ನಂತರ ಹಿಂದೂಗಳಾದರು. ಇವರು ಅನುಸರಿಸುತ್ತಿದ್ದ ಧರ್ಮವು ಹಿಂದೂ ಧರ್ಮವಾಯಿತು. ಹಾಗೂ ಕ್ರಿಸ್ತಪೂರ್ವದಲ್ಲಿಯೇ ಜೈನ ಮತ್ತು ಬೌದ್ಧ ಧರ್ಮಗಳ ಉದಯವಾಗಿ ತದನಂತರ ಕೆಲವು ಧರ್ಮಗಳು ತಮ್ಮ ಅಸ್ತಿತ್ವವನ್ನು ಪಡೆದುಕೊಂಡವು. ಕ್ರಿ.ಶ. ೧೦ನೇ ಶತಮಾನದ ನಂತರ ಭಾರತಕ್ಕೆ ಇಸ್ಲಾಂನ ಪಾದಾರ್ಪಣೆಯಾದರೆ, ಕ್ರಿ.ಶ. ೧೬ನೇ ಶತಮಾನದಲ್ಲಿ ಕ್ರೈಸ್ತ ಧರ್ಮ ತನ್ನ ನೆಲೆಕಂಡುಕೊಂಡಿತು.

ಪ್ರಾಚೀನ ಕಾಲದಲ್ಲಿ ಹಿಂದೂ ಧರ್ಮಕ್ಕೆ ಸಂಬಂಧಿಸಿದ ಧರ್ಮಗ್ರಂಥಗಳು, ಸಂಸ್ಕೃತ ಸಾಹಿತ್ಯಗಳು ರಚನೆಯಾದವು. ಮೊದಲು ಶಿವನ ಆರಾಧಕರೆ ಹೆಚ್ಚಾಗಿದ್ದುದರಿಂದ ಈ ದೈವದ ಅನುಯಾಯಿಗಳನ್ನು ಶೈವರು ಎಂದು ಇವರು ಅನುಸರಿಸುವ ಧರ್ಮವನ್ನು ಶೈವ ಧರ್ಮ ಎಂದು ಕರೆಯಲಾಯಿತು. ಕಾಲಾನಂತರ ಈ ಧರ್ಮಕ್ಕೆ ಸಂಬಂಧಿಸಿದ ಸಾಹಿತ್ಯಗಳು ರಚನೆಯಾದವು. ಇಲ್ಲಿ ಶಿವನೆ ಮೂಲ ಪುರುಷ. ಶಿವನ ಅವತಾರಗಳು ಮತ್ತು ಶಿವನ ಪರಿವಾರಕ್ಕೆ ಸಂಬಂಧಿಸಿದ ಉಲ್ಲೇಖಗಳನ್ನು ಜ್ಞಾನದ ಸಂಕೇತಗಳಾದ ವೇದಗಳು, ಉಪನಿಷತ್ತುಗಳು, ಪುರಾಣಗಳು ಮತ್ತು ಆಗಮಗಳಲ್ಲಿ ಕಾಣಬಹುದು. ಈ ಸಂದರ್ಭದಲ್ಲಿ ಶಿವನ ಅವತಾರಗಳು ಬರವಣಿಗೆಯ ಸ್ವರೂಪ ಪಡೆದುಕೊಂಡು ಆಚರಣೆಗೆ ಸಿದ್ಧವಾದವು. ಇಂತಹ ಶಿವನ ಅವತಾರಗಳಲ್ಲಿ ವೀರಭದ್ರನ ಅವತಾರವೂ ಒಂದು. ನಂತರ ಶೈವ ಧರ್ಮ ಭಾರತದಲ್ಲಿ ಅಗಾಧವಾಗಿ ತನ್ನ ಬೇರನ್ನು ಬಿಟ್ಟಿತು. ೧೨ನೇ ಶತಮಾನದಲ್ಲಿ ಬಸವಾದಿ ಶರಣರಿಂದ ಈ ಶೈವ ಧರ್ಮದ ಶಾಖೆ ಎಂದೇ ಕರೆಯಲಾಗುವ ವೀರಶೈವ ಧರ್ಮವು ಪ್ರಾರಂಭವಾಗುತ್ತದೆ. (ಈ ಕುರಿತು ಕೆಲವು ಭಿನ್ನಾಭಿಪ್ರಾಯಗಳುಂಟು) ಇದು ವೀರಭದ್ರನನ್ನು ತನ್ನ ಪ್ರಮುಖ ಆರಾಧ್ಯ ದೈವವನ್ನಾಗ್ಯೂ ಸಹ ಮಾಡಿಕೊಂಡು ತನ್ನ ಶಿವ ಪರಂಪರೆಯನ್ನು ಹರಡಲು ಮುಂದಾಗುತ್ತದೆ. ಉತ್ತರ ಭಾರತ ಮತ್ತು ದಕ್ಷಿಣ ಭಾರತದ ಎಲ್ಲಾ ಕಡೆಗಳಲ್ಲೂ ಸಹ ಈ ವೀರಭದ್ರ ಪರಂಪರೆ ತನ್ನ ವ್ಯಾಪ್ತಿಯನ್ನು ವಿಸ್ತರಿಸುತ್ತದೆ. ಕಾಲಾನಂತರ ನಮ್ಮ ಜನಪದರು ವೀರಭದ್ರನನ್ನು ಕೇವಲ ಒಬ್ಬ ದೇವರನ್ನಾಗಿ ನೋಡದೆ, ಪುರಾಣ ಪುರುಷನನ್ನಾಗಿ ಪರಿವರ್ತಿಸಿದರು ಮತ್ತು ಒಬ್ಬ ಐತಿಹಾಸಿಕ ವ್ಯಕ್ತಿಯೆಂದೂ ಸಹ ಪರಿಕಲ್ಪಿಸಿಕೊಳ್ಳುತ್ತಾರೆ ಹಾಗೂ ಇವನನ್ನು ವೀರರ ಸಂಕೇತವೆಂದೇ ಹೇಳುವ ಮೂಲಕ ತಮ್ಮ ಮನೆ ದೇವರನ್ನಾಗಿಯೂ ಸಹ ಮಾಡಿಕೊಳ್ಳುತ್ತಾರೆ.೨ ಶಾಸನಗಳಲ್ಲಿ ಕ್ರಿ.ಶ. ೪ನೇ ಶತಮಾನಗಳಿಂದಲೆ ನಮಗೆ ವೀರಭದ್ರನ ಉಲ್ಲೇಖ ದೊರೆಯುತ್ತದೆ. ಆದರೆ ಕರ್ನಾಟಕದಲ್ಲಿ ಕ್ರಿ.ಶ. ೧೧ನೇ ಶತಮಾನದಿಂದ ಈ ವೀರಭದ್ರನ ಹೆಸರು ಶೌರ್ಯ ಪ್ರತೀಕವಾಗಿ ಶಾಸನಗಳಲ್ಲಿ ಕಂಡುಬರುತ್ತದೆ. ಇಂತಹ ವೀರಭದ್ರನ ಆಚರಣೆ ಹೊಯ್ಸಳ ಸಾಮ್ರಾಜ್ಯಕ್ಕೂ ವಿಸ್ತರಿಸುತ್ತದೆ. ಪ್ರಸ್ತುತ ಸಂಶೋಧನಾ ವಿಷಯ 'ಬೇಲೂರು ತಾಲೂಕಿನಲ್ಲಿ ವೀರಭದ್ರ ಪರಂಪರೆ'ಯ ಕುರಿತಾಗಿದ್ದು ವೀರಭದ್ರನ ಆಚರಣೆ ಈ ಪ್ರದೇಶಕ್ಕೆ ಸಾವಿರಾರು ವರ್ಷಗಳ ಹಿಂದೆಯೇ ಪಾದಾರ್ಪಣೆ ಮಾಡಿದೆ. ಅಂದಿನಿಂದಲೇ ನಮಗೆ ಈ ದೈವಕ್ಕೆ ಸಂಬಂಧಿಸಿದ ದೇವಾಲಯಗಳು, ಶಾಸನಗಳು ಕಂಡುಬರುತ್ತವೆ. ವೀರಶೈವ ಲಿಂಗಾಯತರೇ ಹೆಚ್ಚಾಗಿರುವ ಬೇಲೂರಿನಲ್ಲಿ ನಮಗೆ ಈ ದೇವರನ್ನು ಆರಾಧಿಸುವ ವರ್ಗ ಹೆಚ್ಚಾಗಿಯೇ ಇದೆ.

೧.೧ ಅಧ್ಯಯನದ ಉದ್ದೇಶ

ಸಂಶೋಧನೆಯಲ್ಲಿ ಯಾವುದೇ ವಿಷಯದ ಅಧ್ಯಯನಕ್ಕೆ ತೊಡಗಿಕೊಂಡಾಗ ಕೆಲವು ನಿರ್ದಿಷ್ಟ ಉದ್ದೇಶಗಳನ್ನು ಇಟ್ಟುಕೊಂಡು ಅಧ್ಯಯನ ಮಾಡಬೇಕಾಗುತ್ತದೆ. ಅಂತೆಯೇ 'ಬೇಲೂರು ತಾಲೂಕಿನಲ್ಲಿ ವೀರಭದ್ರ ಪರಂಪರೆ' ಎಂಬ ವಿಷಯದ ಅಧ್ಯಯನವೂ ಕೂಡ ಹಲವಾರು ಉದ್ದೇಶಗಳನ್ನೊಳಗೊಂಡು ರೂಪುಗೊಂಡಿರುವಂಥದ್ದು. ಮುಖ್ಯವಾಗಿ ಈ ತಾಲೂಕಿನ ಪ್ರಮುಖ ಆಚರಣೆಯಾಗಿರುವ ವೀರತ್ವದ ಪ್ರತೀಕವಾದ ವೀರಭದ್ರ ಪರಂಪರೆಯನ್ನು ಗುರುತಿಸಿ ಅದರ ಚರಿತ್ರೆಯನ್ನು ಆಮೂಲಾಗ್ರವಾಗಿ ನಿರ್ದಿಷ್ಟ ಅಧ್ಯಯನದೊಂದಿಗೆ ಕಟ್ಟುವುದಾಗಿದೆ.

ಬೇಲೂರು ಹೊಯ್ಸಳರ ರಾಜಧಾನಿಯಾಗಿದ್ದುದರ ಜೊತೆಗೆ ಹನ್ನೆರಡನೇ ಶತಮಾನದ ಸಂದರ್ಭದಲ್ಲಿ ಹಲವು ಧರ್ಮಗಳ ನೆಲೆಬೀಡಾಗಿತ್ತು ಶೈವ, ವೈಷ್ಣವ ಮತ್ತು ಜೈನ ಧರ್ಮಗಳು ಈ ತಾಲೂಕಿನಲ್ಲಿ ತಮ್ಮದೇ ಆದ ಪರಂಪರೆ ಮತ್ತು ಸಂಸ್ಕೃತಿಯನ್ನು ಹುಟ್ಟು ಹಾಕಿದ್ದು ಅದರ ಪ್ರತೀಕವಾಗಿ ಈ ಪರಿಸರದಲ್ಲಿ ಹಲವು ದೇವಾಲಯಗಳನ್ನು ಕಾಣುತ್ತೇವೆ. ಆದರೂ ಕೆಲವು ಮತ ಪಂಥಗಳ ನಡುವೆ ವ್ಯತ್ಯಾಸಗಳಿರುವುದನ್ನು ಗಮನಿಸಬಹುದು. ಹಳೇಬೀಡಿನಲ್ಲಿ ಜೈನರು ಮತ್ತು ಜೈನ ಬಸದಿಗಳ ಮೇಲೆ ಹನ್ನೊಂದು ಮತ್ತು ಹನ್ನೆರಡನೆಯ ಶತಮಾನದಲ್ಲಿ ಕಾಳಾಮುಖರು ತಮ್ಮ ಪ್ರಭಾವವನ್ನು ಬೀರುವ ಪ್ರಯತ್ನವನ್ನು ಮಾಡಿದ್ದುಂಟು. ಆದರೆ ಶೈವರು ಮತ್ತು ವೈಷ್ಣವರ ನಡುವೆ ಅಂಥ ಪ್ರಮುಖ ಭಿನ್ನಾಭಿಪ್ರಾಯಗಳು ತಲೆದೋರಿರುವ ಸಂಗತಿಗಳು ಈ ಪರಿಸರದಲ್ಲಿ ಅತ್ಯಂತ ವಿರಳವೆಂದೇ ಪರಿಭಾವಿಸಬಹುದು. ಈ ಎರಡೂ ಮತ ಪಂಥಗಳಲ್ಲಿ ಅನ್ಯೋನ್ಯತೆ ಇರುವ ಉದಾಹರಣೆಗಳು ಕಂಡುಬರುತ್ತದೆ. ಇದಕ್ಕೆ ನಮಗೆ ತ್ರಿಕೂಟ ದೇವಾಲಯಗಳಲ್ಲಿ ಸಿಗುವ ಮೂರ್ತಿ ಶಿಲ್ಪಗಳೇ ಉತ್ತರಿಸುತ್ತವೆ. ಹೊಯ್ಸಳರ ಕಾಲದಲ್ಲಿ ಈ ಧರ್ಮಗಳು ಮತ್ತು ದೇವಾಲಯಗಳಿಗೆ ಹೆಚ್ಚಿನ ಪ್ರೋತ್ಸಾಹ ಹಾಗೂ ಮನ್ನಣೆ ದೊರಕುತ್ತದೆ. ಇದೇ ಸಮಯದಲ್ಲಿ ಶೈವ ಧರ್ಮದ ವೀರಶೈವ ಪರಂಪರೆಯ ಪ್ರಮುಖ ಆಚರಣೆಯಾದ ವೀರಭದ್ರನ ಆರಾಧನೆಯೂ ಸಹ ಬೇಲೂರು ಪರಿಸರದಲ್ಲಿ ತನ್ನ ಪ್ರಾಬಲ್ಯವನ್ನು ಕಂಡುಕೊಳ್ಳುತ್ತದೆ. ತಾಲೂಕಿನಲ್ಲಿ ಈ ಪರಂಪರೆ ೧೨ ಮತ್ತು ೧೩ ನೇ ಶತಮಾನದ ನಂತರ ಕಂಡು ಬಂದಿದ್ದು, ಅಂದಿನಿಂದ ಇಂದಿನವರೆಗೂ ಅದು ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿದೆ. ಮೊದಲು ಶೈವ ಧರ್ಮದ ಸಾರವನ್ನು ತಿಳಿಸಿ ನಂತರ ವೀರಭದ್ರ ಪರಂಪರೆಯನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ. ಈ ದೈವದ ದೇವಾಲಯಗಳು ಎಲ್ಲಿ ಕಂಡು ಬರುತ್ತವೆ ಅವುಗಳ ವಾಸ್ತು ವಿನ್ಯಾಸಗಳೇನು ಮತ್ತು ಅದರ ಆಚರಣೆಗಳೇನು, ತಾಲೂಕಿನಲ್ಲಿ ವೀರಭದ್ರನನ್ನು ಯಾರು ಹೆಚ್ಚಾಗಿ ಆರಾಧನೆ ಮಾಡುತ್ತಾರೆ, ವೀರಭದ್ರರ ಕುರಿತು ಭಕ್ತಿ ಹೇಗೆ ವ್ಯಾಪಿಸಿದೆ ಎಂಬುವುದನ್ನು ಕ್ಷೇತ್ರಕಾರ್ಯದ ಮೂಲಕ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಗಿದೆ. ಜೊತೆಗೆ ಅಲ್ಲಿನ ಸಂಪ್ರದಾಯಗಳು ಆಧಾರಗಳೊಂದಿಗೆ ಈ ಪರಂಪರೆಗೆ ದೊರೆತ ರಾಜಾಶ್ರಯದ ಪ್ರೋತ್ಸಾಹವನ್ನು ಕುರಿತು ಅಧ್ಯಯನದಲ್ಲಿ ಚರ್ಚಿಸುವ ಪ್ರಯತ್ನಮಾಡಲಾಗಿದೆ.

೧.೨ ಅಧ್ಯಯನದ ವ್ಯಾಪ್ತಿ

ಸಂಶೋಧನಾತ್ಮಕ ಅಧ್ಯಯನದ ವಿಷಯವು ಉತ್ತಮವಾದ ಫಲಿತಗಳನ್ನು ಕಂಡುಕೊಳ್ಳಬೇಕಾದರೆ ಅದಕ್ಕೆ ಒಂದು ನಿರ್ದಿಷ್ಟ ಚೌಕಟ್ಟು ಮುಖ್ಯವಾಗುತ್ತದೆ. ಹಾಗೆಯೇ ಪ್ರಸ್ತುತ ಅಧ್ಯಯನದ ವ್ಯಾಪ್ತಿಯು ವಿಷಯದ ದೃಷ್ಟಿಯಿಂದ ಬೇಲೂರು ತಾಲೂಕಿನಲ್ಲಿನ ವೀರಭದ್ರ ಪರಂಪರೆಗೆ ಮಾತ್ರ ಸೀಮಿತವಾಗಿದೆ. ಹಾಗೂ ಕಾಲಾವಧಿಯ ಹಿನ್ನೆಲೆಯಲ್ಲಿ ೧೨ನೇ ಶತಮಾನದಿಂದ ಪ್ರಸ್ತುತ ಕಾಲಘಟ್ಟದ ವರೆಗೂ ನಿಗದಿಪಡಿಸಿಕೊಳ್ಳಲಾಗಿದೆ. ಈ ಪರಂಪರೆ ಮುಖ್ಯವಾಗಿ ತಾಲೂಕಿನ ೨೩ ಹಳ್ಳಿಗಳಲ್ಲಿ ಹೆಚ್ಚು ಪ್ರಭಾವವನ್ನು ಹೊಂದಿದ್ದು ಅಲ್ಲಿನ ದೇವಾಲಯಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಿಕೊಳ್ಳಲಾಗಿದೆ.

ವೀರಭದ್ರ ಪರಂಪರೆ ಬೇಲೂರು ಸುತ್ತಮುತ್ತಲಿನ ಅರಸೀಕೆರೆ, ಮೂಡಿಗೆರೆ, ಆಲೂರು, ಸಕಲೇಶಪುರ, ಹಾಸನ ಮತ್ತು ಚಿಕ್ಕಮಗಳೂರು ತಾಲೂಕುಗಳಲ್ಲಿಯೂ ಸಹ ಕಂಡುಬರುತ್ತದೆ. ಆದರೆ ಪ್ರಸ್ತುತ ಅಧ್ಯಯನ

ವಿಷಯಕ್ಕೆ ಪೂರಕವಾಗಿ ಈ ತಾಲೂಕುಗಳ ಕೆಲವೊಂದು ಉದಾಹರಣೆಗಳನ್ನು ಮಾತ್ರ ಸಾಂದರ್ಭಿಕವಾಗಿ ಬಳಸಿಕೊಳ್ಳಲಾಗಿದೆ.

೧.೩ ಅಧ್ಯಯನದ ಸಮೀಕ್ಷೆ

ಕರ್ನಾಟಕದಲ್ಲಿ ವೀರಭದ್ರ ಪರಂಪರೆಯ ಕುರಿತು ಅಧ್ಯಯನಗಳಾಗಿರುವುದು ಕಂಡುಬರುತ್ತದೆ. ಆದರೆ ಬೇಲೂರು ತಾಲೂಕಿನಲ್ಲಿ ಈ ಪರಂಪರೆಯ ಕುರಿತು ನಿರ್ದಿಷ್ಟ ಅಧ್ಯಯನಗಳಾಗಿರುವುದಿಲ್ಲ. ಆಗಿದ್ದರೂ ಕೂಡ ಅವುಗಳು ಬಿಡಿ ಲೇಖನಗಳ ರೂಪದಲ್ಲಿವೆ. ಇವುಗಳೆಲ್ಲವೂ ಸಹ ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿರುವ ಆಕರಗಳಾಗಿದ್ದು ಅವುಗಳನ್ನು ಈ ಕೆಳಕಂಡಂತೆ ಗುರುತಿಸಲಾಗಿದೆ.

ಮುಖ್ಯವಾಗಿ ಎಂ.ಜಿ. ನಾಗರಾಜ್ ಅವರ 'ಮಹಾವೀರಭದ್ರ' ಎಂಬ ಗ್ರಂಥವು ವೀರಭದ್ರನ ಹಿನ್ನೆಲೆ ಮತ್ತು ಈ ದೈವದ ಕುರಿತು ಆರಂಭದಿಂದ ಇರುವ ಉಲ್ಲೇಖಗಳ ಜೊತೆಗೆ ಪ್ರಾದೇಶಿಕವಾಗಿ ವೀರಭದ್ರ ದೇವರ ಆಚರಣೆಗಳ ಬಗ್ಗೆ ವಿವರಿಸುತ್ತದೆ. ಕೊಟ್ಟೂರು ಬಸವೇಶ್ವರ ಶಿವಾಚಾರ್ಯ ಜುಕ್ತಿ ಹಿರೇಮಠ ಅವರು ಸಂಪಾದಿಸಿರುವ ರಾಷ್ಟ್ರೀಯ ವಿಚಾರ ಸಂಕಿರಣದ ಲೇಖನಗಳ ಸೂಚಿಯಾದ 'ವೀರಭದ್ರ ಪರಂಪರೆ ಮತ್ತು ಸಂಸ್ಕೃತಿ' ಎಂಬ ಕೃತಿಯು ಕರ್ನಾಟಕದಲ್ಲಿರುವ ವಿವಿಧ ವೀರಭದ್ರ ಆಚರಣೆಗಳು ಮತ್ತು ಸಾಂಸ್ಕೃತಿಕತೆಯನ್ನು ಒಳಗೊಂಡ ಹೆಚ್ಚಿನ ಮಾಹಿತಿ ನೀಡುತ್ತದೆ. ಇದರಲ್ಲೂ ವೇದಗಳ ಕಾಲದ ವೀರಭದ್ರ ಆಚರಣೆಯನ್ನು ಒಳಗೊಂಡು ಪ್ರಸ್ತುತ ಕಾಲದ ವೀರಭದ್ರನಿಗೆ ಸಂಬಂಧಿಸಿದಂತೆ ರಚನೆಯಾದ ಪ್ರಾದೇಶಿಕ ಮೂರ್ತಿ, ಚರಿತ್ರೆ ಮತ್ತು ಪ್ರಾಚೀನ ಸಾಹಿತ್ಯ ಆಕರಗಳಲ್ಲಿ ಈ ದೇವರ ಕುರಿತು ವಿವರಿಸುವ ಉಲ್ಲೇಖಗಳನ್ನು ಒಳಗೊಂಡ ಲೇಖನಗಳಿವೆ. ತೆಲ್ಲೂರಿನ ಸಿದ್ದೇಶ್ವರ ಶಾಸ್ತ್ರಿಗಳು ಬರೆದಿರುವ 'ವೀರಭದ್ರೇಶ್ವರ ಪುರಾಣ ಮತ್ತು ಚರಿತ್ರೆ' ಎಂಬ ಕೃತಿಯು ವೀರಶೈವ ಧರ್ಮದಲ್ಲಿ ವೀರಭದ್ರರ ಸ್ಥಾನ ಹಾಗೂ ಆಚರಣೆ ಮತ್ತು ಸಂಪ್ರದಾಯಗಳ ಕುರಿತು ಮಾಹಿತಿ ನೀಡುತ್ತದೆ. ಎನ್.ಎಂ. ಕೊಟ್ರಸ್ವಾಮಿ ಅವರ 'ಹಾಲಕೆರೆ ಶ್ರೀ ವೀರಭದ್ರ ಸ್ವಾಮಿ' ಕೃತಿಯು ವೀರಭದ್ರರ ಇಂದಿನ ಪ್ರಾದೇಶಿಕ ಆಚರಣೆಯನ್ನು ಕುರಿತು ಮಾಹಿತಿ ನೀಡುತ್ತವೆ. ಎಂ.ಎಂ. ಕನಕೇರಿ ಅವರ 'ವಿರಾಟ್ ಜ್ಯೋತಿ ವೀರಭದ್ರ' ಕೃತಿಯು ವೀರಭದ್ರರ ಪರಂಪರೆ ಮತ್ತು ಸಂಸ್ಕೃತಿಯ ಸಂಕ್ಷಿಪ್ತ ಮಾಹಿತಿಯನ್ನು ವಿವರಿಸುವುದು.

ಶಾ.ಮಂ. ಕೃಷ್ಣರಾಯರು ಬರೆದಿರುವ 'ಬೇಲೂರು ಹಳೇಬೀಡು' ಕೃತಿಯು ನೇರವಾಗಿ ಬೇಲೂರಿನ ಇತಿಹಾಸ, ಪರಂಪರೆ ಮತ್ತು ಹೊಯ್ಸಳರ ಕಾಲದ ಧಾರ್ಮಿಕತೆಯನ್ನು ಕುರಿತು ಹೆಚ್ಚಿನ ಮಾಹಿತಿಯನ್ನು ನೀಡುತ್ತದೆ. ಗೊರೂರು ಅನಂತರಾಜು ರವರ 'ಹಾಸನ ಜಿಲ್ಲೆಯ ದೇವಾಲಯ ದರ್ಶನ' ಎಂಬ ಕೃತಿಯು ಹಾಸನ ಜಿಲ್ಲೆಯ ಹಲವು ದೇವಾಲಯಗಳ ಮಾಹಿತಿಯನ್ನು ಒಳಗೊಂಡಿದ್ದು, ಅದರಲ್ಲಿ ಈ ತಾಲೂಕಿನ ಕೆಲವು ವೀರಭದ್ರ ದೇವಾಲಯಗಳ ಉಲ್ಲೇಖವಿದೆ. ಉದಯಗಿರಿ ಅವರು ಬರೆದಿರುವ 'ಹಾಸನ ಜಿಲ್ಲಾ ವೈಶಿಷ್ಟ್ಯ' ಎಂಬ ಕೃತಿಯು ಪ್ರವಾಸ ಕಥನವಾಗಿದ್ದು, ಇದು ಬೇಲೂರಿನ ಭೌಗೋಳಿಕತೆ ಹಾಗೂ ಕೆಲವು ಧಾರ್ಮಿಕ ಆಚರಣೆಗಳನ್ನು ಕುರಿತು ಮಾಹಿತಿ ನೀಡುತ್ತದೆ. ತಿಮ್ಮೇಗೌಡ ಹಂಪನಹಳ್ಳಿ ಅವರ 'ಹಿರಿಮೆಯ ಹಾಸನ' ಕೃತಿಯು ಕೂಡ ಒಂದು ಪ್ರವಾಸಿ ಕಥನವಾಗಿದ್ದು ಬೇಲೂರಿನ ಐತಿಹಾಸಿಕತೆಯ ಕುರಿತು ಮಾಹಿತಿ ನೀಡುತ್ತದೆ. ಕುಮಾರ ಅವರ 'ಹಾಸನ ಸೀಮೆಯ ಐತಿಹ್ಯಗಳು' ಎಂಬ ಕೃತಿಯಲ್ಲಿ

ಜಿಲ್ಲೆಗೆ ಸಂಬಂಧಿಸಿದ ಪ್ರಾಚೀನ ಶಾಸನಗಳು ಮತ್ತು ಮೌಖಿಕ ದಾಖಲೆಗಳ ಮಾಹಿತಿ ಇದ್ದು ಇದು ಕೂಡ ಅಧ್ಯಯನಕ್ಕೆ ಪೂರಕವಾಗಿದೆ. ವಸಂತಲಕ್ಷ್ಮೀ ಕೆ. ಅವರ 'ಹಾಸನ ಜಿಲ್ಲೆಯ ಹೊಯ್ಸಳರ ಬಸದಿಗಳು' ಕೃತಿಯು ಬೇಲೂರಿನ ಬಸದಿಗಳು ಹಾಗೂ ರೂಪಾಂತರಗೊಂಡ ಬಸದಿಗಳ ಕುರಿತು ಮಾಹಿತಿ ನೀಡುತ್ತದೆ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು ಬರೆದಿರುವ 'ವೀರಶೈವ ಪಂಚಪೀಠ ಪರಂಪರೆ' ಕೃತಿಯು ಬಾಳೆಹೊನ್ನೂರು ಮಠದ ವೀರಭದ್ರ ದೇವರ ಕುರಿತು ಮಾಹಿತಿಯನ್ನು ನೀಡುತ್ತದೆ ಹಾಗೂ ಕರ್ನಾಟಕದ ವೀರಶೈವ ಪಂಚಪೀಠಗಳ ವೀರಭದ್ರನ ಆಚರಣೆಗಳ ಬಗ್ಗೆಯೂ ಮಾಹಿತಿಯನ್ನು ನೀಡುತ್ತದೆ. ಹಿ.ಚಿ. ಶಾಂತವೀರಯ್ಯ ಅವರು ಬರೆದಿರುವ 'ಪುಷ್ಪಗಿರಿ ಮಹಾಸಂಸ್ಥಾನ' ಕೃತಿಯು ಪುಷ್ಪಗಿರಿ ಬೆಟ್ಟದಲ್ಲಿರುವ ವೀರಭದ್ರ ದೇವಾಲಯದ ಕುರಿತು ಮಾಹಿತಿ ನೀಡುತ್ತದೆ.

ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ ೯ ರಲ್ಲಿ ಬೇಲೂರು ತಾಲೂಕಿಗೆ ಸಂಬಂಧಿಸಿದ ವೀರಭದ್ರರ ಕುರಿತಾದ ಶಾಸನಗಳ ಮಾಹಿತಿ ಇದೆ. ಇತಿಹಾಸ ದರ್ಶನ ಸಂಪುಟಗಳು ಮತ್ತು ಜಿಲ್ಲೆಗೆ ಸಂಬಂಧಿಸಿದ ಗೆಜೆಟಿಯರ್ ಗ್ರಂಥವು ಸಹ ಅಧ್ಯಯನಕ್ಕೆ ಪೂರಕವಾದ ಮಾಹಿತಿಗಳನ್ನು ನೀಡುತ್ತವೆ. ಇಂತಹ ಆಕರಗಳನ್ನು ಅಧ್ಯಯನಕ್ಕೆ ಪೂರಕವಾಗಿ ಬಳಸಿಕೊಂಡು ಪ್ರಸ್ತುತ ಅಧ್ಯಯನವನ್ನು ಪೂರ್ಣಗೊಳಿಸುವ ಪ್ರಯತ್ನ ಮಾಡಲಾಗಿದೆ.

೧.೪ ಅಧ್ಯಯನದ ವಿಧಾನ

ಯಾವುದೇ ಒಂದು ವಿಷಯವನ್ನು ಅಧ್ಯಯನ ಮಾಡಬೇಕಾದರೆ ಅದಕ್ಕೆ ಒಂದು ಶಿಸ್ತು ಮತ್ತು ಕ್ರಮವನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಅಂದರೆ ಸಂಶೋಧನೆಯನ್ನು ಹೇಗೆ? ಮತ್ತು ಯಾವ ರೀತಿ ಅಧ್ಯಯನ ಮಾಡಬೇಕೆಂಬ ಯೋಜನೆಯನ್ನು ಸಿದ್ದಪಡಿಸಿಕೊಂಡು ಅದರ ನಿರ್ದೇಶನದಂತೆ ನಾವು ಅಧ್ಯಯನಕ್ಕೆ ಮುಂದಾಗಬೇಕಾಗುತ್ತದೆ. ಮೊದಲು ನಾವು ಬೇಲೂರು ತಾಲೂಕಿನಲ್ಲಿ ವೀರಭದ್ರ ಪರಂಪರೆ ಎಂಬ ವಿಷಯದ ಅಧ್ಯಯನಕ್ಕೆ ಪ್ರಾಥಮಿಕವಾಗಿ ಅದಕ್ಕೆ ಸಂಬಂಧಿಸಿದ ಆಕರಗಳನ್ನು ಸಂಗ್ರಹ ಮಾಡಲಾಯಿತು, ಆ ಆಕರಗಳನ್ನು ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳೆಂದು ವಿಭಾಗಿಸಿ ಅಧ್ಯಯನ ಮಾಡಲಾಯಿತು. ಈ ಪರಂಪರೆಗೆ ಸಂಬಂಧಿಸಿದ ಪ್ರಕಟಗೊಂಡ ಶಾಸನಗಳನ್ನು ಸಂಗ್ರಹಿಸಿ ಅದರಲ್ಲಿ ಕಂಡು ಬರುವ ಸ್ಥಳಗಳು, ಕಾಲ, ರಾಜ, ರಾಜಮನೆತನ, ದಾನದತ್ತಿ, ಆಚರಣೆಗಳು, ಮತ್ತು ದೇವಾಲಯಗಳನ್ನು ಪ್ರತ್ಯೇಕ ಪಟ್ಟಿಕೆಗಳಲ್ಲಿ ಇಟ್ಟುಕೊಂಡು ವಸ್ತುನಿಷ್ಠವಾಗಿ ಅಧ್ಯಯನ ಮಾಡಲಾಯಿತು. ತಾಲೂಕಿನಲ್ಲಿ ದೊರಕಿರುವ ೫೦೭ ಶಾಸನಗಳ ಪೈಕಿ ೮ ಶಾಸನಗಳು ಮಾತ್ರ ವೀರಭದ್ರ ದೇವರಿಗೆ ನೇರವಾಗಿ ಸಂಬಂಧಿಸಿದ್ದಾಗಿವೆ.

ಬೇಲೂರು ತಾಲೂಕು ಕಛೇರಿಗೆ ಭೇಟಿ ನೀಡಿ ಅಲ್ಲಿನ ಮುಜರಾಯಿ ಇಲಾಖೆ ಅಧಿಕಾರಿಯನ್ನು ಸಂಪರ್ಕಿಸಿ ವೀರಭದ್ರ ದೇವಾಲಯಗಳು ಕಂಡುಬರುವ ೨೩ ಹಳ್ಳಿಗಳ ಮಾಹಿತಿ ಪಡೆದು ನಂತರ ಕ್ಷೇತ್ರಕಾರ್ಯ ಕೈಗೊಳ್ಳಲಾಯಿತು. ಕ್ಷೇತ್ರಕಾರ್ಯದ ವೇಳೆ ವೀರಭದ್ರ ದೇವಾಲಯಗಳ ವಾಸ್ತು ರಚನೆ, ಮೂರ್ತಿ ಶಿಲ್ಪಗಳು, ಅಲ್ಲಿನ ಶಾಸನಗಳು ಮತ್ತು ವೀರಗಲ್ಲುಗಳ ಛಾಯಾಚಿತ್ರಗಳನ್ನು ತೆಗೆದುಕೊಳ್ಳಲಾಯಿತು. ಆಚರಣೆಗಳು ಮತ್ತು ಇತರ ಮಾಹಿತಿಗಳನ್ನು ಸಹ ದಾಖಲಿಸಲಾಯಿತು. ಹಾಗೂ ಅವುಗಳ ಇಂದಿನ ಸ್ಥಿತಿಗತಿ, ನಂಜಿಕೆ ಮತ್ತು ಸಂಪ್ರದಾಯಗಳಿಗೆ ಸಂಬಂಧಿಸಿದ ವಿಷಯಗಳನ್ನು ಸಂದರ್ಶನದ ಮೂಲಕ ತಿಳಿದುಕೊಂಡು ಅದಕ್ಕೆ ಸಂಬಂಧಿಸಿದಂತೆ ಮಾಹಿತಿಗಳನ್ನು ಸಂಗ್ರಹಿಸಲಾಯಿತು.

೧.೫ ಅಧ್ಯಯನದ ಸ್ವರೂಪ

ಪ್ರಸ್ತುತ ಅಧ್ಯಯನವನ್ನು ವಿಶ್ಲೇಷಣೆಯ ದೃಷ್ಟಿಯಿಂದ ಆರು ಅಧ್ಯಾಯಗಳಾಗಿ ವಿಭಾಗಿಸಿಕೊಳ್ಳಲಾಗಿದೆ. ಪ್ರತಿಯೊಂದು ಅಧ್ಯಾಯವು ಅಗತ್ಯಕ್ಕೆ ಅನುಗುಣವಾಗಿ ಉಪಭಾಗಗಳನ್ನು ಒಳಗೊಂಡಿರುವುದು. ಪ್ರಸ್ತುತ ಅಧ್ಯಯನವು ಆರು ಅಧ್ಯಾಯಗಳನ್ನು ಒಳಗೊಂಡಿದೆ. ಅವುಗಲ ಸ್ವರೂಪ ಈ ರೀತಿ ನಿರ್ಧರಿಸಿಕೊಳ್ಳಲಾಗಿದೆ.

ಮೊದಲನೆಯ ಅಧ್ಯಾಯವು ಪ್ರಸ್ತಾವನೆ, ಉದ್ದೇಶ, ವ್ಯಾಪ್ತಿ, ಸಮೀಕ್ಷೆ, ವಿಧಾನ ಮತ್ತು ಸ್ವರೂಪವನ್ನು ಒಳಗೊಂಡಿದೆ. ಈ ಅಧ್ಯಯನದ ಮೂಲಕ ಸಂಶೋಧನೆಯನ್ನು ಹೇಗೆ? ಯಾವ ದೃಷ್ಟಿಕೋನದಿಂದ, ಯಾವ ಉದ್ದೇಶಗಳನ್ನು ಇಟ್ಟುಕೊಂಡು ಅಧ್ಯಯನ ಮಾಡಲಾಗಿದೆ ಎಂಬುದರ ಬಗ್ಗೆ ತಿಳಿಸಲಾಗಿದೆ.

ಎರಡನೆಯ ಅಧ್ಯಾಯವು ಬೇಲೂರು ತಾಲೂಕಿನ ಭೌಗೋಳಿಕತೆ ಮತ್ತು ಐತಿಹಾಸಿಕ ಹಿನ್ನೆಲೆಯನ್ನು ಒಳಗೊಂಡಿದೆ. ಅಂದರೆ ಈ ಪರಿಸರದ ಭೌಗೋಳಿಕ ಪರಿಚಯವನ್ನು ಮಾಡಿಕೊಟ್ಟು ಅದರ ಸ್ಥಳ ಪುರಾಣವನ್ನು ತಿಳಿಸಿಕೊಡಲಾಗಿದೆ ಮತ್ತು ಬೇಲೂರು ಪರಿಸರದ ಪ್ರಾಗೈತಿಹಾಸ ಹಿನ್ನೆಲೆಯ ಜೊತೆಗೆ ಇಲ್ಲಿಯ ರಾಜಕೀಯ ಇತಿಹಾಸವನ್ನು ಮೌರ್ಯರ ಕಾಲದಿಂದ ಮೈಸೂರು ಒಡೆಯರ ಕಾಲದವರೆಗೆ ಸಂಕ್ಷಿಪ್ತವಾಗಿ ವಿವರಿಸುವ ಪ್ರಯತ್ನ ಮಾಡಲಾಗಿದೆ.

ಮೂರನೆಯ ಅಧ್ಯಾಯವು ವೀರಭದ್ರ ಪರಂಪರೆಯಾಗಿದ್ದು ಇಲ್ಲಿ ಶೈವ ಧರ್ಮದ ಹಿನ್ನಲೆ, ಅದರಿಂದ ಕವಲೊಡೆದ ವೀರಭದ್ರನ ಆಚರಣೆಯ ಹಿನ್ನಲೆ, ಪ್ರಾಚೀನ ಸಾಹಿತ್ಯ ಆಕರಗಳಾದ ವೇದೋಪನಿಷತ್ತುಗಳಲ್ಲಿ, ಪುರಾಣಗಳಲ್ಲಿ ಮತ್ತು ಆಗಮಗಳಲ್ಲಿ ಹೇಗೆ? ಈ ಪರಂಪರೆಯು ದಾಖಲಾಗಿದೆ ಎಂಬುದರ ಪರಿಚಯದ ಜೊತೆಗೆ ೧೨ನೇ ಶತಮಾನದ ವಚನ ಸಾಹಿತ್ಯದಲ್ಲಿ ಮತ್ತು ಪ್ರಾರಂಭಿಕ ಶಾಸನಗಳಲ್ಲಿ ವೀರಭದ್ರನ ಉಲ್ಲೇಖಗಳು ಯಾವ ರೀತಿಯಾಗಿದೆ ಎಂಬುದನ್ನು ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಹಾಗೂ ಅಧ್ಯಾಯದ ಕೊನೆಯ ಉಪ ವಿಭಾಗದಲ್ಲಿ ಬೇಲೂರು ಪರಿಸರಕ್ಕೆ ಈ ಆಚರಣೆ ಹೇಗೆ ಬಂತು ಇದಕ್ಕೆ ಸಿಕ್ಕ ರಾಜಾಶ್ರಯ ಪ್ರೋತ್ಸಾಹ ಹೇಗಿತ್ತು ಮತ್ತು ಜನಸಮುದಾಯವು ಈ ಪರಂಪರೆಯನ್ನು ಹೇಗೆ ಸ್ವೀಕರಿಸಿದವು ಎಂಬುದರ ಜೊತೆಗೆ ತಾಲೂಕಿನ ಯಾವ ಯಾವ ಪ್ರದೇಶಗಳಲ್ಲಿ ಈ ಪರಂಪರೆ ಮತ್ತು ದೇವಾಲಯಗಳು ಕಂಡು ಬರುತ್ತವೆ ಎಂಬುದನ್ನು ವಿವರಿಸಲಾಗಿದೆ.

ನಾಲ್ಕನೆಯ ಅಧ್ಯಾಯವು ಬೇಲೂರು ತಾಲೂಕಿನ ವೀರಭದ್ರ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಸಂಬಂಧಿಸಿದೆ. ಈ ಅಧ್ಯಾಯದಲ್ಲಿ ತಾಲೂಕಿನಲ್ಲಿ ಕಂಡುಬಂದ ವೀರಭದ್ರ ದೇವಾಲಯಗಳನ್ನು ವಾಸ್ತುಶಿಲ್ಪದ ಹಿನ್ನೆಲೆಯಲ್ಲಿ ವಿವರಿಸಲಾಗಿದೆ. ಇದೇ ಅಧ್ಯಾಯದಲ್ಲಿ ಮೂರ್ತಿ ಶಿಲ್ಪ, ವೀರಗಲ್ಲು ಮತ್ತು ಶಾಸನಗಳ ಕುರಿತಾಗಿಯೂ ಸಹ ವಿಶ್ಲೇಷಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ಈ ಪರಂಪರೆಗೆ ಸಂಬಂಧಿಸಿದ ನಂಬಿಕೆ ಮತ್ತು ಆಚರಣೆಗಳ ಬಗ್ಗೆ ಚರ್ಚಿಸಲಾಗಿದೆ. ಅನಾದಿ ಕಾಲದಿಂದ ಪ್ರಸ್ತುತ ಸಂದರ್ಭಗಳವರೆಗೂ ನಡೆದುಕೊಂಡು ಬಂದಿರುವ ಆಚರಣೆ ಮತ್ತು ಸಂಪ್ರದಾಯಗಳನ್ನು ಕ್ಷೇತ್ರಕಾರ್ಯದಲ್ಲಿ ದಾಖಲಿಸಿಕೊಂಡು ಆ ಕುರಿತಿರುವ ಮೌಖಿಕ ಅಂಶಗಳನ್ನು ಪರಾಮರ್ಶಿಸಿ ವಿಶ್ಲೇಷಿಸುವ ಪ್ರಯತ್ನ ಮಾಡಲಾಗಿದೆ.

ಆರನೆಯ ಅಧ್ಯಾಯವು ಸಮಾರೋಪವಾಗಿದ್ದು ಸಂಶೋಧನೆಯಲ್ಲಿ ಕಂಡು ಕೊಂಡ ಒಟ್ಟು ಫಲಿತಗಳನ್ನು ಹೇಳಲಾಗಿದೆ. ಅನುಬಂಧದಲ್ಲಿ ಗ್ರಂಥಋಣ, ತಲವಿನ್ಯಾಸ, ನಕ್ಷೆಗಳು ಮತ್ತು ಛಾಯಾಚಿತ್ರಗಳನ್ನು ನೀಡಲಾಗಿದೆ. ಒಟ್ಟಾರೆ ಈ ತಾಲೂಕಿನಲ್ಲಿ ವಿಸ್ತರಿಸಿಕೊಂಡಿರುವ ವೀರಭದ್ರ ಪರಂಪರೆಯ ಕುರಿತು ಚಾರಿತ್ರಿಕ ಮತ್ತು ಸಾಂಸ್ಕೃತಿಕ ಒಳನೋಟಗಳನ್ನು ಚರ್ಚಿಸಿ ಸಾದರಪಡಿಸುವ ಪ್ರಯತ್ನವನ್ನು ಸಂಶೋಧನಾ ಪ್ರಬಂಧದಲ್ಲಿ ಪೂರೈಸಲಾಗಿದೆ.

ಕೊನೆ ಟಿಪ್ಪಣಿ

೧. ಷೇಕ್ ಅಲಿ ಬಿ (ಪ್ರ. ಸಂ) ಸೆಬಾಸ್ಟಿಯನ್ ಜೋಸೆಫ್ (ಸಂ. ಸಂ), ೨೦೦೨, **ಕರ್ನಾಟಕ ಚರಿತ್ರೆ ಸಂಪುಟ–೬**, ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨. ಅಡಗೂರಿನ ಕ್ಷೇತ್ರಕಾರ್ಯದಲ್ಲಿ ಲಭ್ಯವಾದ ಮಾಹಿತಿ.

ಅಧ್ಯಾಯ – ಎರಡು

ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನೆಲೆ

ಅಧ್ಯಾಯ – ಎರಡು

ಭೌಗೋಳಿಕ ಮತ್ತು ಐತಿಹಾಸಿಕ ಹಿನ್ನೆಲೆ

೨.೧ ಭೌಗೋಳಿಕತೆ

ಪ್ರಸ್ತುತ ಅಧ್ಯಯನ ಕೈಗೊಂಡಿರುವ ಶಿಲ್ಪ ಕಲೆಗಳ ತವರೂರಾದ ಬೇಲೂರು ಪಟ್ಟಣ ಪ್ರಾಚೀನ ಸಿಂಹಾಸನಪುರಿ ಎಂದೇ ಪ್ರಸಿದ್ಧಿಯಾಗಿರುವ ಹಾಸನ ಜಿಲ್ಲೆಯಲ್ಲಿ ಕೇಂದ್ರಿಕೃತಗೊಂಡಿದೆ. ಯಗಚಿ ನದಿಯ ದಂಡೆಯ ಮೇಲಿರುವ ಬೇಲೂರು, ಜಿಲ್ಲೆಯ ಪ್ರಮುಖ ತಾಲೂಕುಗಳಲ್ಲಿ ಒಂದು. ಇದು ಬೆಂಗಳೂರಿನಿಂದ ೨೨೨ ಕಿ.ಮೀ, ಮೈಸೂರಿನಿಂದ ೧೪೯ ಕಿ.ಮೀ. ಹಾಗೂ ಜಿಲ್ಲಾ ಕೇಂದ್ರ ಹಾಸನದಿಂದ ೩೭ ಕಿ.ಮೀ. ದೂರದಲ್ಲಿದೆ. ಪುರಸಭೆಯನ್ನು ಹೊಂದಿರುವ ಈ ತಾಲೂಕು ಕಸಬಾ, ಅರೆಹಳ್ಳಿ, ಹಳೇಬೀಡು, ಮಾದಿಹಳ್ಳಿ ಹಾಗೂ ಬಿಕ್ಕೋಡು ಸೇರಿದಂತೆ ೫ ಹೋಬಳಿಗಳನ್ನು ಒಳಗೊಂಡಿದ್ದು ೩೮೪ ಹಳ್ಳಿಗಳನ್ನು ಹೊಂದಿದೆ. ಇವು ಮಲೆನಾಡು ಪ್ರದೇಶದಿಂದ ಕೂಡಿದ್ದರೂ ಸಹ ಹಳೇಬೀಡು, ಮಾದಿಹಳ್ಳಿ ಹೋಬಳಿಗಳು ಅರೆ ಮಲೆನಾಡು ಪ್ರದೇಶವಾಗಿವೆ.

ಪ್ರಸ್ತುತ ಬೇಲೂರು ತಾಲೂಕು ಮೈಸೂರು ಕಂದಾಯ ವಿಭಾಗ ಹಾಗೂ ಸಕಲೇಶಪುರ ಉಪ ವಿಭಾಗಕ್ಕೆ ಸೇರಿದ್ದು, ದಕ್ಷಿಣ ಕರ್ನಾಟಕ ಪ್ರಸ್ಥ ಭೂಮಿಯ ೬೦೦ ಮೀ. ಸರ್ವೋನ್ನತ ರೇಖೆಯಿಂದ ಆವೃತವಾಗಿದೆ. ಈ ಪ್ರಾಂತ್ಯವು ಸಮುದ್ರ ಮಟ್ಟದಿಂದ ೯೭೫ ಮೀ. ಎತ್ತರದಲ್ಲಿದೆ. ಅಲ್ಲದೆ ಇದು ಉತ್ತರ ಅಕ್ಷಾಂಶ ೧೩೦ ೧೬' ಮತ್ತು ೧೬೦ ೨೯', ಪೂರ್ವ ರೇಖಾಂಶ ೭೫೦ ೮೫' ಮತ್ತು ೭೪೦ ೭೧' ಇವುಗಳ ನಡುವೆ ಪಸರಿಸಿದೆ.[೧]

ಬೇಲೂರಿನ ಉತ್ತರಕ್ಕೆ ಚಿಕ್ಕಮಗಳೂರು, ದಕ್ಷಿಣಕ್ಕೆ ಆಲೂರು, ಪೂರ್ವಕ್ಕೆ ಅರಸೀಕೆರೆ, ಆಗ್ನೇಯಕ್ಕೆ ಹಾಸನ ಮತ್ತು ಪಶ್ಚಿಮಕ್ಕೆ ಸಕಲೇಶಪುರ ಹಾಗೂ ಮೂಡಿಗೆರೆ ತಾಲೂಕುಗಳು ಕಂಡುಬರುತ್ತವೆ. ಮತ್ತು ಬೇಲೂರು ತಾಲೂಕಿನ ಸಮಯ ವಲಯ ಐ.ಎಸ್.ಟಿ ಯು.ಟಿ: ಓ=೫.೩೦ ಆಗಿದೆ. ಬೇಲೂರು ಒಂದು ವಿಧಾನಸಭಾ ಕ್ಷೇತ್ರವಾಗಿದ್ದು ರಾಜಕೀಯವಾಗಿಯೂ ಪ್ರಾಬಲ್ಯ ಹೊಂದಿದೆ.

೨.೧.೧ ವಾಯುಗುಣ

ಕರ್ನಾಟಕದ ದಕ್ಷಿಣ ಒಳನಾಡು ಪ್ರದೇಶವಾಗಿರುವ ಬೇಲೂರು ತಾಲೂಕಿನಲ್ಲಿ ಮಾನ್ಸೂನ್ ಕಾಲದಲ್ಲಿ ಅಂದರೆ ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಅಧಿಕ ಮಳೆ ಬೀಳುತ್ತದೆ. ಜನವರಿಯಿಂದ ಫೆಬ್ರವರಿಯವರೆಗೆ ಚಳಿಗಾಲ ಮತ್ತು ಅದರ ಹಿಂದೆಯೇ ಮಾರ್ಚ್‌ನಿಂದ ಮೇ ತಿಂಗಳವರೆಗೆ ಬೇಸಿಗೆ ಕಾಲ ಅನುಸರಿಸಿ

ಬರುತ್ತವೆ. ಅಕ್ಟೋಬರ್ ನಿಂದ ಡಿಸೆಂಬರ್ ವರೆಗೆ ಮಾನ್ಸೂನ್ ನಂತರದ ಋತುಮಾನವಿರುತ್ತದೆ. ಅದರಲ್ಲೂ ಅಕ್ಟೋಬರ್ ತಿಂಗಳಿನಿಂದ ಮಾರ್ಚ್ ತಿಂಗಳ ವರೆಗಿನ ಅವಧಿ ಎಂದರೆ ಮಾನ್ಸೂನ್ ನಂತರದ ಮತ್ತು ಚಳಿಗಾಲದ ಋತು ಸೇರಿದಂತೆ ಇದ್ದು ಈ ಅವಧಿಯಲ್ಲಿ ಬೇಲೂರು ಪ್ರದೇಶ ಹಿತಕರವಾದ ಹವಾಗುಣದಿಂದ ಕೂಡಿರುತ್ತದೆ. ಈ ಪ್ರದೇಶದ ಉಷ್ಣತೆ ಗರಿಷ್ಠ ೩೫.೦ ಮತ್ತು ಕನಿಷ್ಠ ೧೧.೬ ಉಷ್ಣತೆ ಇರುತ್ತದೆ.[೨]

ಬೇಲೂರು ತಾಲೂಕಿನ ಭೂ ಪ್ರದೇಶವು ಕೆಂಪು, ಬೂದು ಮತ್ತು ಕಪ್ಪು ಬಣ್ಣದ ಮಣ್ಣು ಹೊಂದಿದ್ದು ಹೆಚ್ಚು ಫಲವತ್ತಾಗಿದೆ. ಈ ಪ್ರದೇಶದಲ್ಲಿ ಹೆಚ್ಚಾಗಿ ಆಲೂಗಡ್ಡೆ, ರಾಗಿ, ಭತ್ತ, ಜೋಳ, ಕಬ್ಬು, ತೆಂಗು, ಕಾಫಿ ಕಪ್ಪು ಮೆಣಸು ಸೇರಿದಂತೆ ವಿವಿಧ ತರಕಾರಿ ಬೆಳೆಗಳನ್ನು ಬೆಳೆಯಲಾಗುತ್ತದೆ.

೨.೧.೨ ಯಗಚಿ ನದಿ

ಹೊಯ್ಸಳ ಸಾಮ್ರಾಜ್ಯದ ಪ್ರಮುಖ ಪಟ್ಟಣವಾಗಿದ್ದ ಬೇಲೂರು ಯಗಚಿ ನದಿಯ ದಂಡೆಯ ಮೇಲಿದೆ, ಈ ನದಿಯನ್ನು ಬೇಲೂರಿನ ಜೀವನದಿ ಎಂದು ಕರೆಯಲಾಗುತ್ತದೆ. ಐತಿಹ್ಯದ ಪ್ರಕಾರ ಋಷ್ಯಶೃಂಗ ಋಷಿಯು ತೀರ್ಥಯಾತ್ರೆಯಲ್ಲಿ ಭಾರತ ಪುಣ್ಯ ನದಿಗಳ ತೀರ್ಥವನ್ನು ತನ್ನ ಕಮಂಡಲದಲ್ಲಿ ಸಂಗ್ರಹಿಸುತ್ತ ಬಂದು ವನಸ್ಪತಿ ಸಮೃದ್ಧವಾದ ಚಂದ್ರದ್ರೋಣ ಪರ್ವತದ ಎಲಚೀ (ಬೋರೆ ಹಣ್ಣು) ಮರದ ಬುಡದಲ್ಲಿ ವಿಶ್ರಮಿಸುತ್ತಿದ್ದರು. ಆಕಸ್ಮಿಕವಾಗಿ ಆ ಕಮಂಡಲವು ಅಲ್ಲಿ ಉರುಳಿ ಸರ್ವ ಪುಣ್ಯತೀರ್ಥಗಳ ನೀರು ಆ ಎಲಚಿ ಮರದ ಬುಡದಿಂದ ಹರಿದು ಅದೇ ಎಲಚಿ ನದಿಯಾಗಿದೆ ಎಂಬ ಪ್ರತೀತಿ ಇದೆ. ಎಲಚಿ, ಯಗಚಿ ಎಂದು ಕ್ರಮೇಣ ರೂಪಾಂತರವಾಗಿದೆ. ಎಲಚಿಗೆ ಸಂಸ್ಕೃತದಲ್ಲಿ ಬದರಿ ಎಂಬ ಹೆಸರಿದೆ. ಆದ್ದರಿಂದ ಇದು ಹೆಸರಿಗೆ ಬದರಿ ನದಿಯಾಗಿದ್ದರೂ ಸಹ ಯಗಚಿ ಎಂದೇ ಜನಪ್ರಿಯವಾಗಿದೆ.[೩]

ಯಗಚಿ ನದಿಯು ಬೇಲೂರಿನ ೮ ಪವಿತ್ರ ತೀರ್ಥಗಳಲ್ಲಿ ಒಂದಾಗಿದೆ. ಈ ನದಿಯು ಬಾಬಾ ಬುಡನ್‌ಗಿರಿಯಿಂದ ಇಳಿದು ದಕ್ಷಿಣಾಭಿಮುಖವಾಗಿ ಬೇಲೂರಿನ ಮೇಲೆ ಹರಿದು ಮುಂದೆ ಹೇಮಾವತಿ ನದಿ ಸೇರುತ್ತದೆ. ೧೩ನೇ ಶತಮಾನದಲ್ಲಿಯೇ ಈ ನದಿಗೆ ಪಶ್ಚಿಮವಾಹಿನಿ ಬಳಿ ಅಣೆಕಟ್ಟು ಕಟ್ಟಿ ಇದರ ನೀರನ್ನು ನಾಲೆಯ ಮೂಲಕ ದೋರಸಮುದ್ರ ನಗರಕ್ಕೆ ಸರಬರಾಜು ಮಾಡಲಾಗುತಿತ್ತು. ಈ ಪುರಾತನ ಅಣೆಕಟ್ಟಿನ ಅವಶೇಷಗಳನ್ನು ಇಂದೂ ಕಾಣುತ್ತೇವೆ. ೨೦೦೧ ರಲ್ಲಿ ಈ ನದಿಗೆ ಬೇಲೂರಿನ ಉತ್ತರಬದಿಯಲ್ಲಿ ಆಧುನಿಕವಾಗಿ ಅಣೆಕಟ್ಟು ನಿರ್ಮಿಸಲಾಗಿದೆ ಹಾಗೂ ಇತ್ತೀಚೆಗೆ ಕೃಷಿಯನ್ನು ಉತ್ತೇಜಿಸುವ ದೃಷ್ಟಿಯಿಂದ ಯಗಚಿ ಜಲಾಶಯದಿಂದ ನೀರಾವರಿ ಸೌಕರ್ಯವನ್ನು ಒದಗಿಸಲಾಗಿದೆ. ಜಿಲ್ಲೆಯ ೩ ತಾಲೂಕುಗಳ ೫೩ ಸಾವಿರ ಎಕರೆ ಜಮೀನಿಗೆ ಯಗಚಿ ನದಿಯಿಂದಲೇ ನೀರಾವರಿ ಸೌಲಭ್ಯ ಒದಗಿಸಲಾಗಿದೆ. ಅಲ್ಲದೆ ಚಿಕ್ಕಮಗಳೂರು ನಗರ ಮತ್ತು ಬೇಲೂರು ಪಟ್ಟಣಕ್ಕೆ ಕುಡಿಯುವ ನೀರನ್ನು ಇಲ್ಲಿಂದಲೇ ಪೂರೈಸಲಾಗುತ್ತದೆ. ಪ್ರವಾಸೋಧ್ಯಮದಿಂದ ತಾಲೂಕಿಗೆ ಹೆಚ್ಚಿನ ಆದಾಯ ಬರುವುದನ್ನು ಗಮನಿಸಿ ಈ ಜಲಾಶಯದ ಮುಂಭಾಗದಲ್ಲಿ ಅಂತರ ರಾಷ್ಟ್ರೀಯ ಮಟ್ಟದ ಹೋಟಲ್ ಒಂದನ್ನು ಪ್ರವಾಸೋದ್ಯಮ ಇಲಾಖೆ ನಿರ್ಮಾಣ ಮಾಡುತ್ತಿದೆ.

ಬೇಲೂರು ಕೋಟೆಯ ದಕ್ಷಿಣ ಬದಿಯ ಇಳಿಜಾರಿನಲ್ಲಿ ವಿಷ್ಣು ಸಮುದ್ರ ಎಂಬ ದೊಡ್ಡ ಕೆರೆ ಇದೆ. ಇದಕ್ಕೆ ಬಿಟ್ಟಿ ಸಮುದ್ರ, ಬಿಚ್ಚಮ್ಮನ ಕೆರೆ, ದೊಡ್ಡ ಕೆರೆ ಮುಂತಾದ ಹೆಸರುಗಳು ಇವೆ. ಈ ಕುರಿತು ಅನೇಕ ಜನಪದ ಕಥೆಗಳುಂಟು. ವಿಷ್ಣುವರ್ಧನನ ಮಗಳಿಗೆ ಹಿಡಿದ ಪಿಶಾಚಿ ಬಿಟ್ಟಿದ್ದು ಹಾಗೂ ಗರುಡನು ಆಕಾಶದಲ್ಲಿ ಅಮೃತವನ್ನು ಒಯ್ಯುವಾಗ ಅಮೃತದ ಹನಿಬಿದ್ದು ಈ ಕೆರೆಯಾದದ್ದು ಹೀಗೆ ಹಲವಾರು ಕಥೆಗಳು ಇದರ ಸುತ್ತ ಹೆಣೆದುಕೊಂಡಿವೆ. ಇದಲ್ಲದೆ ದಮಯಂತಿ ಹೊಂಡ, ತೋಪಿನ ಹೊಂಡ, ಸತ್ಯಕ್ಕನ ಕೊಳ, ಮೆಟ್ಟಿನ ಹೊಂಡ, ವೇದಾವತಿ ಹಳ್ಳ ಹೀಗೆ ಹಲವಾರು ನೀರಿನ ಮೂಲಗಳು ಇಲ್ಲಿವೆ.

೨.೧.೩ ವಿಸ್ತೀರ್ಣ ಮತ್ತು ಜನಸಂಖ್ಯೆ

ಮಲೆನಾಡು ಪ್ರದೇಶವಾಗಿರುವ ಬೇಲೂರು ತಾಲೂಕು ೪೯೩೦.೭ ಚ.ಕಿ.ಮೀ ವಿಸ್ತೀರ್ಣವನ್ನು ಹೊಂದಿದೆ. ೨೦೧೧ ರ ಜನಗಣತಿಯ ಪ್ರಕಾರ ತಾಲೂಕಿನ ಜನಸಂಖ್ಯೆ ೧.೮೪.೪೫೮ ಇದ್ದು ಜನಸಂಖ್ಯಾ ಬೆಳವಣಿಗೆ ದರ ೩.೧೭% ಇದೆ. ಇದರಲ್ಲಿ ಪುರುಷರ ಸಂಖ್ಯೆ ೯೧.೩೦೬ ಇದ್ದರೆ, ಮಹಿಳೆಯರು ೯೩.೧೫೨ ಇರುವುದು ಕಂಡುಬರುತ್ತದೆ. ಹಾಗೂ ಬೇಲೂರು ತಾಲೂಕಿನ ಸಾಕ್ಷರತ ಪ್ರಮಾಣ ೭೬.೭% ಇದ್ದು ಅದರಲ್ಲಿ ೭೫.೬೨% ಪುರುಷ ಮತ್ತು ೬೩.೫೮% ಮಹಿಳಾ ಸಾಕ್ಷರರಿದ್ದಾರೆ. ತಾಲೂಕಿನ ಒಟ್ಟು ಜನಸಂಖ್ಯೆಯಲ್ಲಿ ೧೨.೨% ಜನರು ನಗರವಾಸಿಗಳಾಗಿದ್ದರೆ, ೮೭.೮% ಜನರು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಅಲ್ಲದೆ ಲಿಂಗಾನುಪಾತ ೧೦೦೦ ಕ್ಕೆ ೧೦೨೦ ಇದೆ.[೪]

೨.೧.೪ ಸಾರಿಗೆ ಮತ್ತು ಸಂಪರ್ಕ

ಸಾಂಸ್ಕೃತಿಕ ದೃಷ್ಟಿಯಿಂದ ಪ್ರಾಚೀನ ಪ್ರಮುಖ ಪ್ರವಾಸಿ ತಾಣವಾಗಿರುವ ಬೇಲೂರಿಗೆ ಸಾರಿಗೆ ಸಂಪರ್ಕ ಉತ್ತಮವಾಗಿದೆ. ಹಾಸನ ಚಿಕ್ಕಮಗಳೂರು ರಸ್ತೆಯಲ್ಲಿ ಈ ತಾಲೂಕು ಕಂಡುಬರುವುದರಿಂದ ಮತ್ತು ಅತೀ ಹೆಚ್ಚಿನ ಪ್ರವಾಸಿಗರು ಬೇಲೂರಿಗೆ ಆಗಮಿಸುವುದರಿಂದ ಬಸ್ಸಿನ ಸಂಪರ್ಕ ಪ್ರತಿ ೫ ನಿಮಿಷಕ್ಕೊಮ್ಮೆ ಇದೆ. ಹಾಗೂ ಇದು ತಾಲೂಕು ಕೇಂದ್ರವಾಗಿರುವುದರಿಂದ ಇಲ್ಲಿಂದ ಚಿಕ್ಕಮಗಳೂರು, ಹಾಸನ ಬೆಂಗಳೂರು, ಮೂಡಿಗೆರೆ, ಧರ್ಮಸ್ಥಳ, ಹಳೇಬೀಡು, ಸಕಲೇಶಪುರ, ಮಂಗಳೂರು ಸೇರಿದಂತೆ ಹಲವು ಪಟ್ಟಣಗಳಿಗೆ ಬಸ್ಸಿನ ಸೌಕರ್ಯವಿದೆ. ಬೇಲೂರು ತಾಲೂಕು ಯಾವುದೇ ರೈಲ್ವೆ ನಿಲ್ದಾಣವನ್ನು ಹೊಂದಿಲ್ಲ ಆದರೆ ತಾಲೂಕಿಗೆ ಸಂಪರ್ಕ ಕಲ್ಪಿಸುವ ಹತ್ತಿರದ ರೈಲ್ವೆ ನಿಲ್ದಾಣಗಳೆಂದರೆ ಹಾಸನ (೩೦ ಕಿ.ಮೀ) ಮತ್ತು ಅರಸೀಕೆರೆ (೩೫ ಕಿ.ಮೀ) ಹಾಗೂ ಬಾಣಾವರ (೨೫ ಕಿ.ಮೀ) ನಿಲ್ದಾಣಗಳಾಗಿವೆ. ಸಕಲೇಶಪುರದಿಂದಲೂ ಸಹ ರೈಲ್ವೇ ಸಂಪರ್ಕವಿದ್ದು ಅಲ್ಲಿಂದ ಬೇಲೂರಿಗೆ ಇತರೆ ವಾಹನಗಳ ಮೂಲಕ ಬರಬಹುದಾಗಿದೆ. ಬೇಲೂರಿಗೆ ಸಂಪರ್ಕ ನೀಡುವ ಹತ್ತಿರ ವಿಮಾನ ನಿಲ್ದಾಣಗಳು ಬಜ್ಪೇ ವಿಮಾನ ನಿಲ್ದಾಣ (ಮಂಗಳೂರು ೧೫೦ ಕಿ.ಮೀ). ಮತ್ತು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ.

೨.೨ ಪ್ರಾಗೈತಿಹಾಸ

ಬೇಲೂರು ತಾಲೂಕಿನ ಪುರಾತನ ಕಾಲವನ್ನು ಅವಲೋಕಿಸಿದಾಗ ಆ ಕಾಲದಲ್ಲಿಯೂ ಜನವಸತಿ ಇತ್ತು ಎಂಬುದನ್ನು ಗುರುತಿಸಲಾಗಿದೆ. ಇದಕ್ಕೆ ಸಾಕ್ಷಿ ರೂಪವಾಗಿ ಬೇಲೂರು ತಾಲೂಕಿನ ಸಮೀಪವಿರುವ

ಮತ್ತು ಇಂದು ಹಾಸನ ತಾಲೂಕಿಗೆ ಸೇರಿದ ಕರಡಿಗುಡ್ಡದ ಗವಿಗಳಲ್ಲಿ ಆದಿಮಾನವರು ವಾಸಿಸುತ್ತಿದ್ದರೆಂಬ ಕುರುಹುಗಳು ದೊರೆತಿವೆ.[೫] ಜೊತೆಗೆ ಹೇಮಾವತಿ ನದಿ ತೀರಗಳಲ್ಲಿ, ಯಗಚಿ ನದಿಯ ದಡದಲ್ಲಿ ಹಾಗೂ ಪಕ್ಕದ ತಾಲೂಕಾದ ಅರಸೀಕೆರೆಯ ಹಲವು ಸ್ಥಳಗಳಲ್ಲಿ ಸೂಕ್ಷ್ಮಶಿಲಾಯುಗ, ಬೃಹತ್ ಶಿಲಾಯುಗ ಹಾಗೂ ನವಶಿಲಾಯುಗದ ಕಾಲದ ಅವಶೇಷಗಳು ಪತ್ತೆಯಾಗಿವೆ.[೬] ಮತ್ತು ಬೇಲೂರು ತಾಲೂಕಿನ ಹಳೇಬೀಡಿನಲ್ಲಿ ಪ್ರಾಗೈತಿಹಾಸ ಕಾಲದ ನೆಲೆಯನ್ನು ಗುರುತಿಸಲಾಗಿದೆ.[೭]

೨.೩ ರಾಜಕೀಯ ಇತಿಹಾಸ

ಬೇಲೂರು ಪ್ರದೇಶದಲ್ಲಿ ಕೆಲವು ರಾಜಮನೆತನಗಳು ಆಳ್ವಿಕೆ ಮಾಡಿರುವುದನ್ನು ಕಾಣುತ್ತೇವೆ. ಇಲ್ಲಿಯ ರಾಜಕೀಯ ಇತಿಹಾಸವನ್ನು ಮೌರ್ಯರ ಕಾಲದಿಂದ ಮೈಸೂರು ಒಡೆಯರ ಕಾಲದವರೆಗೆ ಗುರುತಿಸಬಹುದಾಗಿದೆ.

ಮೌರ್ಯರು

ಕರ್ನಾಟಕದ ಇತಿಹಾಸವು ಸ್ಪಷ್ಟ ಆಧಾರಗಳೊಂದಿಗೆ ಪ್ರಾರಂಭಗೊಳ್ಳುವುದೆ ಮೌರ್ಯರ ಕಾಲದಿಂದ. ಕ್ರಿ.ಪೂ. ೪–೩ ನೇ ಶತಮಾನಗಳಲ್ಲಿ ಕರ್ನಾಟಕವು ಮೌರ್ಯ ಸಾಮ್ರಾಜ್ಯದ ಒಂದು ಭಾಗವಾಗಿತ್ತು. ಅದರಲ್ಲೂ ಕರ್ನಾಟಕದ ಬ್ರಹ್ಮಗಿರಿ, ಸಿದ್ದಾಪುರ, ಜಟ್ಟಿಂಗರಾಮೇಶ್ವರ, ಮಸ್ಕಿ, ಕೊಪ್ಪಳ, ಉದಯಗೋಳಂ, ನಿಟ್ಟೂರು ಮತ್ತು ಸನ್ನತಿಗಳಲ್ಲಿ ಶಾಸನಗಳು ಲಭ್ಯವಾಗಿವೆ. ಇದರಿಂದ ಗುಲ್ಬರ್ಗಾ, ರಾಯಚೂರು, ಬಳ್ಳಾರಿ, ಚಿತ್ರದುರ್ಗ ಜಿಲ್ಲೆಗಳಲ್ಲಿ ಮೌರ್ಯ ಆಳ್ವಿಕೆಯ ಪ್ರಭಾವ ಇರುವುದನ್ನು ಈ ಶಾಸನಗಳು ದೃಢೀಕರಿಸುತ್ತವೆ.

ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳು ಅಶೋಕನ ಕಾಲಕ್ಕಿಂತ ಮೊದಲೇ ಜೈನರಾಗಮನದ ಕಾಲಕ್ಕೆ ಅಂದರೆ ಚಂದ್ರಗುಪ್ತನ ಆಡಳಿತ ಅವಧಿಯಲ್ಲಿಯೇ ಮೌರ್ಯ ಸಾಮ್ರಾಜ್ಯ ಭಾಗವಾಗಿತ್ತು ಎಂದು ಉಲ್ಲೇಖಿಸಲಾಗಿದೆ.[೮] ಈ ಪ್ರದೇಶವು ಆ ಕಾಲದಲ್ಲಿ ಕುಂತಳ ರಾಜ್ಯದ ಭಾಗವು ಆಗಿತ್ತೆಂದು ಶಾಸನ ಆಧಾರಗಳಿಂದ ತಿಳಿಯಬಹುದು.[೯] ಇದಕ್ಕೆ ಪುಷ್ಟೀಕರಿಸುವಂತೆ ಚಂದ್ರಗುಪ್ತನ ಆಳ್ವಿಕೆಯ ಕೊನೆಯಲ್ಲಿ ಉತ್ತರ ಭಾರತದಲ್ಲಿ ಭೀಕರ ಕ್ಷಾಮ ತಲೆದೊರಿತ್ತು. ಅಂತಹ ಸಮಯದಲ್ಲಿ ಚಂದ್ರಗುಪ್ತನು ತನ್ನ ಮಗ ಬಿಂದುಸಾರನಿಗೆ ಅಧಿಕಾರ ಬಿಟ್ಟುಕೊಟ್ಟು ತನ್ನ ಗುರುವಾದ ಶೃತಕೇವಲಿಯರಲ್ಲಿ ಕೊನೆಯವರಾದ ಜೈನಮುನಿ ಭದ್ರಬಾಹುನೊಂದಿಗೆ ದಕ್ಷಿಣಕ್ಕೆ ಬಂದು ಈಗಿನ ಶ್ರವಣಬೆಳಗೊಳ (ಹಿಂದಿನ ಕಾಥವಪುರಿ, ಕಟವಪ್ರ, ಕಳ್ಬಪ್ಪು) ದಲ್ಲಿ ಜೈನ ಸನ್ಯಾಸಿಯಾಗಿ ನೆಲೆಸಿ, ಜೈನ ಸಂಪ್ರದಾಯದಂತೆ ಸಲ್ಲೇಖನವ್ರತ ಕೈಗೊಂಡು ಬೆಟ್ಟದ ಮೇಲೆ ಮಡಿದಿರುವುದನ್ನು ಜೈನರ ಸಂಪ್ರದಾಯಗಳು ಮತ್ತು ದಂತಕಥೆಗಳು ಹೇಳುತ್ತವೆ.[೧೦] ಕೆಲ ಇತಿಹಾಸಕಾರರು ರಾಜ ಅಶೋಕನ ಮೊಮ್ಮಗನ ಮಗನಾದ ಸಂಪ್ರತಿ ಚಂದ್ರಗುಪ್ತನೂ ಇಲ್ಲಿಗೆ ಆಗಮಿಸಿದ್ದನು ಎನ್ನುವ ಮೂಲಕ ಗೊಂದಲ ಸೃಷ್ಟಿಸಿದ್ದಾರೆ.[೧೧] ಅದೇನೆ ಇದ್ದರೂ ಇಂದಿಗೂ ಸಹ ಶ್ರವಣಬೆಳಗೊಳದಲ್ಲಿ ಚಂದ್ರಗುಪ್ತನ ಹೆಸರಿನಲ್ಲಿ ಒಂದು ಬಸದಿ ಇರುವುದನ್ನು ಕಾಣಬಹುದು. ಇದರಿಂದ ಕರ್ನಾಟಕಕ್ಕೆ ಜೈನರ ಪ್ರವೇಶ ಕ್ರಿ.ಪೂ. ೩ನೇ ಶತಮಾನದಷ್ಟು ಹಿಂದೆಯೇ ಆಗಿದೆ. ಚಂದ್ರಗುಪ್ತನ ವಂಶಾವಳಿಯ ಬಗ್ಗೆ ಏನೇ

ಇದ್ದರು ಶ್ರವಣಬೆಳಗೊಳವು ಅಂದಿನಿಂದ ಜೈನರ ಒಂದು ಪ್ರಮುಖ ಶ್ರದ್ಧಾ ಕೇಂದ್ರವಾಗಿತ್ತು ಎಂಬುದು ನಿರ್ವಿವಾದ. ಈ ಪ್ರದೇಶದ ಪರಿಸರದಲ್ಲಿಯೇ ಬೇಲೂರು ಇರುವುದರಿಂದ ಸಹಜವಾಗಿ ಮೌರ್ಯರ ಆಳ್ವಿಕೆ ಪ್ರಭಾವ ಈ ತಾಲೂಕಿನಲ್ಲಿದೆ.

ಬನವಾಸಿಯ ಕದಂಬರು

ಕದಂಬರು ಕರ್ನಾಟಕವನ್ನು ಸ್ವತಂತ್ರವಾಗಿ ಆಳ್ವಿಕೆ ಮಾಡಿದ ಕನ್ನಡದ ಮೊದಲ ರಾಜವಂಶ . ಬಂಧುಷೇಣನ ಮಗ ಮಯೂರವರ್ಮನೊಂದಿಗೆ ಕ್ರಿ.ಶ. ೩೪೫ರಲ್ಲಿ ಕದಂಬರ ಆಳ್ವಿಕೆ ಪ್ರಾರಂಭವಾಗುತ್ತದೆ. ಕ್ರಿ.ಶ. ೫ನೇ ಶತಮಾನದಲ್ಲಿ ಕದಂಬರ ಆಳ್ವಿಕೆಗೆ ಬೇಲೂರು ಒಳಪಟ್ಟಿರುವುದು ಕಾಕುತ್ಸವರ್ಮನ ಕ್ರಿ.ಶ ೪೫೦ರ ಹಲ್ಮಿಡಿ ಶಾಸನ ಮತ್ತು ಕಿರುಕೂಡಲೂರಿನ ಶಾಸನಗಳಿಂದ ತಿಳಿಯುತ್ತದೆ. ಬೇಲೂರು ಪರಿಸರದಲ್ಲಿ ಕದಂಬರಿಗೆ ಸಂಬಂಧಿಸಿದ ಒಟ್ಟು ೬ ಶಾಸನಗಳು ಕಂಡುಬಂದಿವೆ. ಶಾಸನಗಳ ಪ್ರಕಾರ ಈ ಪ್ರದೇಶವನ್ನು ಆಳಿದವರಲ್ಲಿ ರಾಜರಾಜ ಕೃಷ್ಣವರ್ಮ, ದೇವವರ್ಮ, ವಿಷ್ಣುವರ್ಮ, ಸಿಂಹವರ್ಮ, ವಿಜಯಶಿವ ಕೃಷ್ಣವರ್ಮ, ದೋಷರಾಶಿವವರ್ಮ, ಅಜವರ್ಮ, ಭೋಗಿವರ್ಮ, ಕಾಕುತ್ಸವರ್ಮ ಮುಂತಾದ ಕದಂಬ ಅರಸರು ಪ್ರಮುಖರಾಗಿದ್ದಾರೆ.

ತಲಕಾಡಿನ ಗಂಗರು

ಬೇಲೂರು ಪ್ರದೇಶದಲ್ಲಿ ಗಂಗರು ಆಳ್ವಿಕೆ ನೆಡೆಸಿದ್ದಕ್ಕೂ ಶಾಸನಾಧಾರಗಳಿವೆ. ಕ್ರಿಶ ೩೫೦ರಲ್ಲಿ ರಾಜ್ಯಭಾರ ಆರಂಭಿಸಿದ ಗಂಗರು ಹಾಸನ ಹಾಗೂ ಚಿಕ್ಕಮಗಳೂರುಗಳ ಭಾಗಗಳನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡಿದ್ದರು. ಈಗಿನ ಬೇಲೂರಿನಲ್ಲಿ ದೇವಾಳ್ಗೇ ವಿಷಯಕ್ಕೆ ಸೇರಿದ ಕಿರುಮುಂಡನೂರಿನ ವರ್ತಕರ ಆದಾಯದಿಂದ .??೧/೧೦? ಕಂದಾಯ ಸಂಗ್ರಹಿಸುವ ಅಧಿಕಾರವನ್ನು ಬ್ರಾಹ್ಮಣರಿಗೆ ನೀಡಿರುವ ವಿಷಯ ಶಾಸನದಲ್ಲಿ ಪ್ರಸ್ತಾಪವಾಗಿದೆ.[೧೨] ಅಂದು ಗಂಗರ ಗಂಗವಾಡಿ ೯೬ ಸಾವಿರ ಎಂಬ ಆಡಳಿತ ಘಟಕವಿದ್ದು[೧೩] ಅದರಲ್ಲಿ ೯೬ ಸಾವಿರ ಗ್ರಾಮಗಳಿದ್ದವು. ಗಂಗವಾಡಿಯಲ್ಲಿ ಬೇಲೂರು ಪ್ರದೇಶವು ಸೇರಿತ್ತು ಎಂದು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಾಣವಾದ ದಬ್ಬೆ ಅಗ್ರಹಾರ ಶಾಸನ ವು ನಿರೂಪಿಸುತ್ತದೆ.[೧೪] ಈ ಪರಿಸರದಲ್ಲಿ ಗಂಗರ ಆರು ಶಾಸನಗಳು ದೊರೆತಿವೆ ಅವುಗಳೆಂದರೆ ಪೊಲವೀರನ ಕ್ರಿ.ಶ. ೬ನೇ ಶತಮಾನದ ತಗರೆಯ ತಾಮ್ರ ಶಾಸನ೧೫, ಕ್ರಿ.ಶ. ೮ನೇ ಶತಮಾನದ ಶ್ರೀಪುರುಷನ ಸಹವಾಸಿಹಳ್ಳಿಯ ಶಾಸನ,೧೬ ಎರಡನೇ ಬೂತುಗನ ಕ್ರಿ.ಶ. ೯೫೪ರ ಬಸ್ತಿಹಳ್ಳಿಯ ಜೈನರ ದಾನ ಶಾಸನ,೧೭ ಎರಡನೇ ಮಾರಸಿಂಹನ ಕ್ರಿ.ಶ. ೯೭೧ರ ಕರಗಡ ಶಾಸನ೧೮ ಹಾಗೂ ಕ್ರಿ.ಶ ೧೧ನೇ ಶತಮಾನದ ಕೋಗೋಡಿನ ವೀರಗಲ್ಲು ಶಾಸನಗಳಾಗಿದೆ.೧೯ ಇವುಗಳ ಆಧಾರದಿಂದ ಗಂಗರ ಆಡಳಿತಕ್ಕೆ ಬೇಲೂರು ಪ್ರದೇಶ ಒಳಪಟ್ಟಿರುವುದನ್ನು ಗುರುತಿಸಬಹುದಾಗಿದೆ.

ಬಾದಾಮಿ ಚಾಲುಕ್ಯರು

ಅಖಂಡ ಕರ್ನಾಟಕವನ್ನು ಒಂದೇ ಮನೆತನದ ಆಳ್ವಿಕೆಗೆ ಒಳಪಡಿಸಿದವರೆಂದರೆ ಬಾದಾಮಿ ಚಾಲುಕ್ಯರು. ಇವರ ಶಾಸನಗಳಲ್ಲಿ ಬಾದಾಮಿಯನ್ನು 'ವಾತಾಪಿ' ಎಂದು ಕರೆಯಲಾಗಿದೆ. ಇವರು ಇಂದಿನ ಕರ್ನಾಟಕ.

ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ ಹಾಗೂ ಆಂಧ್ರದ ಬಹುಭಾಗಗಳು ಸೇರಿದಂತೆ ಒರಿಸ್ಸಾ ಮತ್ತು ತುಳುನಾಡಿನ ಕೆಲವು ಭಾಗಗಳಲ್ಲಿ ಅಧಿಕಾರ ಹೊಂದಿದ್ದರು. ಇವರ ಇತಿಹಾಸದ ನಿರೂಪಣೆಗೆ ಶಾಸನಗಳೇ ಮುಖ್ಯ ಆಧಾರಗಳಾಗಿವೆ. ಕ್ರಿ.ಶ. ೬–೭ನೇ ಶತಮಾನದಲ್ಲಿ ಬೇಲೂರು ಸಹ ಇವರ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದು ಇವರ ಸಾಮ್ರಾಜ್ಯದ ಭೂನಕ್ಷೆಯಿಂದ ತಿಳಿದುಬರುತ್ತದೆ. ಜಯಸಿಂಹ, ಒಂದನೇ ಪುಲಕೇಶಿ, ಒಂದನೇ ಕೀರ್ತಿವರ್ಮ, ಮಂಗಳೇಶ, ಎರಡನೆಯ ಪುಲಕೇಶಿ ಮತ್ತು ಒಂದನೇ ವಿಕ್ರಮಾದಿತ್ಯ ಮುಂತಾದ ರಾಜರು ಬಾದಾಮಿ ಚಾಲುಕ್ಯರ ಪ್ರಮುಖ ಅರಸರಾಗಿದ್ದರು.

ರಾಷ್ಟ್ರಕೂಟರು

ಬಾದಾಮಿ ಚಾಲುಕ್ಯರ ಸಾಮಂತರಾಗಿದ್ದ ರಾಷ್ಟ್ರಕೂಟರು ಚಾಲುಕ್ಯರನ್ನು ಪದಚ್ಯುತಗೊಳಿಸಿ ಕ್ರಿ.ಶ ೮ನೇ ಶತಮಾನದ ಮಧ್ಯಭಾಗದಿಂದ ಕ್ರಿ.ಶ ೧೦ನೇ ಶತಮಾನದ ಅಂತ್ಯದವರೆಗೆ ದಕ್ಷಿಣ ಭಾರತದಲ್ಲಿಯೇ ಪ್ರಬಲರಾಗಿ ಆಳ್ವಿಕೆ ನಡೆಸಿದರು. ರಾಷ್ಟ್ರಕೂಟರ ಆಡಳಿತಕ್ಕೆ ಸಂಬಂಧಿಸಿದ ಶಾಸನಗಳು ಬೇಲೂರು ಪರಿಸರದಲ್ಲಿ ಕಂಡುಬರುವುದಿಲ್ಲವಾದರು ನೆರೆಯ ಶ್ರವಣಬೆಳಗೊಳದಲ್ಲಿ ಕಂಡುಬಂದಿವೆ. ಪಾರ್ಶ್ವನಾಥ ಬಸದಿಯ ಬಲಗಡೆ ಬಂಡೆಯ ಮೇಲೆ ೩೭ನೇ ಶಾಸನಗಳ ಕೆಳಗೆ ಇವರ ೮ನೇ ಶತಮಾನದ ಶಾಸನವಿದೆ.[೨೦]

ಕಲ್ಯಾಣದ ಚಾಲುಕ್ಯರು

ಬಾದಾಮಿ ಚಾಲುಕ್ಯರ ವಂಶಜರೆಂದು ತಮ್ಮನ್ನು ಕರೆದುಕೊಂಡಿರುವ ಇವರು ರಾಷ್ಟ್ರಕೂಟರನ್ನು ಪದಚ್ಯುತಗೊಳಿಸಿ ಅಧಿಕಾರಕ್ಕೆ ಬಂದರು. ಹೊಯ್ಸಳರು ಇವರ ಮಾಂಡಳಿಕರಾಗಿದ್ದರಿಂದ ಇಂದಿನ ಬೇಲೂರು ಪ್ರಾಂತ್ಯವು ಸಹಜವಾಗಿಯೇ ಕಲ್ಯಾಣ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತ್ತೆಂದು ತಿಳಿಯಬಹುದು. ಇವರ ಕಾಲದ ೮ ಶಾಸನಗಳು ಬೇಲೂರು ಪರಿಸರದಲ್ಲಿ ಸಿಕ್ಕಿವೆ. ಅವುಗಳಲ್ಲಿ ೭ ಶಾಸನಗಳು ಚಾಳುಕ್ಯ ತ್ರಿಭುವನಮಲ್ಲ ಅಥವಾ ೬ನೇ ವಿಕ್ರಮಾದಿತ್ಯನ ಕಾಲದವುಗಳಾಗಿವೆ. ತಾಲೂಕಿನಲ್ಲಿ ದೊರೆತ ಇವರ ಕಾಲದ ಪ್ರಾಚೀನ ಶಾಸನವೆಂದರೆ ೧೦೯೯ರ ದಬ್ಬೆ ಅಗ್ರಹಾರ ಶಾಸನ.[೨೧] ಇದು ೬ನೇ ವಿಕ್ರಮಾದಿತ್ಯನ ಕಾಲದಾಗಿದ್ದು, ಈ ಶಾಸನವು ಚಾಳುಕ್ಯ ಅರಸರ ಬಿರುದಾವಳಿಗಳ ಜೊತೆಗೆ ಕೋಬೇಶ್ವರ ದೇವರಿಗೆ ಹೊಯ್ಸಳ ಅರಸರಾದ ೧ನೇ ಬಲ್ಲಾಳ ಮತ್ತು ಎರೆಯಂಗರು ದಾನ ನೀಡಿದ ಮಾಹಿತಿಯನ್ನು ಒಳಗೊಂಡಿದೆ. ಹಾಗೂ ಈ ಶಾಸನದಲ್ಲಿ ಹೊಯ್ಸಳ ಅರಸರು ಚಾಳುಕ್ಯರನ್ನು ಅಧಿರಾಜರೆಂದು ಒಪ್ಪಿಕೊಂಡಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಕ್ರಿ.ಶ. ೧೧೦೦–೦೧ರ ಕೋಡಿಹಳ್ಳಿ ಮತ್ತು ಕೊಂಡಿಯ ಶಾಸನಗಳು ೬ನೇ ವಿಕ್ರಮಾಧಿತ್ಯನ ಆಳ್ವಿಕೆಗೆ ಸಂಬಂಧಿಸಿವೆ. ತ್ರಿಭುವನಮಲ್ಲ ಪೊಯ್ಸಳ ದೊರೆಯ ಜೊತೆ ಜೊತೆಗೆ ಅವನ ಪಾದಪದ್ಮೋಪ ಜೀವಿಯಾಗಿದ್ದ ಸಮಧಿಗತ ಪಂಚಮಹಾಸಬುದ, ಮಹಾಸಾಮಂತ, ಗಂಗಕುಳಕಮಳಮಾರ್ತ್ತಂಡ ಪರಮಮಹೇಶ್ವರ ಮುಂತಾಗಿ ಹಲವು ಪ್ರಮುಖ ಬಿರುದುಗಳನ್ನು ಧರಿಸಿದ್ದ. ಕಾಳೆಯಂಮನ ವಂಶಸ್ಥ 'ಚಿಂಣ್ಣಗೌಡ' ಎಂಬ ಗಂಗವಂಶದ ಮಾಂಡಳಿಕನ ಉಲ್ಲೇಖವಿದೆ. ಈ ಚಿಣ್ಣಗೌಡ ಹಾಗೂ ಇನ್ನೊಬ್ಬ ಸಾಮಾಂತನಾದ 'ಕರಿಕ ಸಾಮಂತ' ಎಂಬುವನ ಮತ್ರ ಅಹಿತರಂಕು ಸೆಟ್ಟಿ ಸೇರಿ ದೇವಾಲಯವನ್ನು, ಕೆರೆಯನ್ನು ಕಟ್ಟಿಸಿದರು ಮತ್ತು ಕೊಂಡಿ/ ಕೊಂಡಲಿ/ ಕೋಡಿಯ ಮೂಲಸ್ತಂಭರಾದ ಚಂದ್ರಭೂಷಣ ಪಂಡಿತರಿಗೆ ಸ್ಥಾನಿಕ ಪದವಿಯಲ್ಲಿ ವಿರಾಜಮಾನರಾದವರಿಗೆ ದತ್ತಿಯನ್ನು

ಕೊಟ್ಟರು ಎಂಬ ಉಲ್ಲೇಖವಿದೆ.೨೨ ಈ ಆಧಾರಗಳಿಂದ ಕಲ್ಯಾಣದ ಚಾಲುಕ್ಯ ಅರಸರು ಮಾಂಡಳಿಕರ ಬಗ್ಗೆ ಬಿಗಿಯಾದ ಹಿಡಿತ ಹೊಂದಿದ್ದರು ಎಂದು ತಿಳಿದುಬರುತ್ತದೆ.

ಈ ತಾಲೂಕಿನ ಹಳೇಬೀಡು ಶಾಸನವು ೬ನೇ ವಿಕ್ರಮಾಧಿತ್ಯನ ಆಳ್ವಿಕೆಯ ಕಾಲದಲ್ಲಿ ಅವನ ಮಾಂಡಳಿಕನಾದ ವಿಷ್ಣುವರ್ಧನ ವೀರಗಂಗ ಹೊಯ್ಸಳ ದೇವನು ದತ್ತಿಬಿಟ್ಟ ಸಂಗತಿಯನ್ನು ದಾಖಲಿಸಿದೆ. ಅವನು ೬ನ್ೀ ವಿಕ್ರಮಾದಿತ್ಯನ ಪಾದಪದ್ಮೋಪ ಜೀವಿಯಾಗಿದ್ದ ಎಂಬುದನ್ನು ಶಾಸನದಲ್ಲಿ ಬರೆದಿದೆ.[೨೩] ಇಲ್ಲಿನ ಭೈರೇದೇವರ ಗುಡ್ಡದ ಶಾಸನವನ್ನು ಕ್ರಿ.ಶ ೧೨೧೧ ನವೆಂಬರ್ ೨೮ ಸೋಮವಾರದಂದು ಬರೆಸಲಾಗಿದೆ. ಚಿಕ್ಕತಮ್ಮಣ್ಣ ಎಂಬ ವ್ಯಕ್ತಿ ತಮ್ಮ ತಂದೆ, ಕೊಲೆಂಯು ತಂಮುರನು 'ಸೋಯಿದೇವರಾಯತ್ಥಾಪನಾಚಾರ್ಯ' ಎಂಬ ಬಿರುದನ್ನು ಧರಿಸಿದುದಾಗಿ ತಿಳಿಸಿದ್ದಾನೆ.[೨೪] ಹಾಗೂ ಕ್ರಿ.ಶ ೧೦೨೨ರ ಕೊಂಡಿಯ ಶಾಸನ ಚಾಳುಕ್ಯ ಅನ್ವಯವನ್ನು ಮತ್ತು ಪೆಮ್ಮಾಡಿದೇವ (ಪೆರ್ಮ್ಮಾಡಿ) ಎಂಬ ರಾಜನನ್ನು ಉಲ್ಲೇಖಿಸುತ್ತದೆ. ಇಷ್ಟಲ್ಲದೇ ಇದರಲ್ಲಿ ಹೆಚ್ಚಿನ ವಿವರಗಳಿಲ್ಲ.[೨೫] ಈ ಎಲ್ಲಾ ಆಧಾರಗಳನ್ನು ಅವಲೋಕಿಸಿದಾಗ ಬೇಲೂರು ಚಾಲುಕ್ಯರ ಆಡಳಿತದ ಭಾಗವಾಗಿರುವುದು ದೃಢಪಡುತ್ತದೆ.

ಹೊಯ್ಸಳರು

ಹತ್ತನೆಯ ಶತಮಾನದ ಮಧ್ಯಭಾಗದಿಂದ ೧೪ನೇ ಶತಮಾನದ ಮಧ್ಯಭಾಗದವರೆಗೆ ವಿಶೇಷವಾಗಿ ದಕ್ಷಿಣ ಕರ್ನಾಟಕವನ್ನು ಆಳಿದ ರಾಜಮನೆತನ ಇದಾಗಿದೆ. ಇವರು ದ್ವಾರಸಮುದ್ರ ಅಂದರೆ ಈಗಿನ ಹಳೇಬೀಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದರು. ಹೊಯ್ಸಳರ ಪ್ರಾರಂಭದ ರಾಜಧಾನಿ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲೂಕಿನ ಸೊಸೆವೂರು ನಂತರ ಬೇಲೂರು ಕೆಲಕಾಲ ರಾಜಧಾನಿಯಾಗಿ ಕಾರ್ಯನಿರ್ವಹಿಸುತ್ತದೆ. ೧೩೧೧ರಲ್ಲಿ ದ್ವಾರಸಮುದ್ರದ ಮೇಲೆ ಮಲ್ಲಿಕಾಫರನ ದಾಳಿಯಾದಾಗ ಬೇಲೂರು ಮತ್ತೆ ರಾಜಧಾನಿಯ ಸ್ಥಾನಪಡೆಯುತ್ತದೆ.[೨೬] ಅಂದು ಹೊಯ್ಸಳ ಅರಸರ ಕಾಲದಲ್ಲಿ ಬೇಲೂರಿನ ಚೆನ್ನಕೇಶವ (ವಿಜಯನಾರಾಯಣ), ಹಳೆಬೀಡಿನ ಹೊಯ್ಸಳೇಶ್ವರ ಸೇರಿದಂತೆ ನೂರಾರು ಸುಂದರ ದೇವಾಲಯಗಳು ನಿರ್ಮಾಣವಾದವು.

ಹೊಯ್ಸಳರ ಕಾಲದಲ್ಲಿ ಬೇಲೂರು ಧಾರ್ಮಿಕತೆ ಮತ್ತು ಶಿಲ್ಪಕಲೆಯಿಂದ ವೈಭವಯುತವಾಗಿ ಮೆರೆಯಿತು. ಹೊಯ್ಸಳರ ನಾಡು ಹಲವು ಧರ್ಮಗಳ ಆಶ್ರಯ ತಾಣವು ಆಗಿತ್ತು. ಇಲ್ಲಿ ಶೈವ, ವೈಷ್ಣವ, ಜೈನ ಧರ್ಮಗಳು ಆಶ್ರಯ ಪಡೆದಿದ್ದವು. ರಾಜಗುರು ಸುದತ್ತಾಚಾರ್ಯರು ಹೊಯ್ಸಳ ರಾಜ್ಯ ನಿರ್ಮಾಣದಲ್ಲಿ ಭಾಗಿಯಾಗಿದ್ದರೆಂದು ನಂಬಲಾಗಿದೆ. ಹಾಗೆಯೇ ವೈಷ್ಣವ ಗುರು ರಾಮಾನುಜಾಚಾರ್ಯರು ಮೇಲುಕೋಟೆಯಲ್ಲಿ ತಂಗಿದ್ದರು. ಅವರು ವಿಷ್ಣುವರ್ಧನನಿಗೆ ಧರ್ಮದ ವಿಚಾರದಲ್ಲಿ ಮಾರ್ಗದರ್ಶಿಗಳಾಗಿದ್ದರು. ಅವರ ಪ್ರಭಾವದಿಂದ ರಾಜ ವಿಷ್ಣುವರ್ಧನರು ವೈಷ್ಣವ ಧರ್ಮಕ್ಕೆ ಮತಾಂತರಗೊಂಡಿದ್ದರೂ ಕೂಡ ಅವನ ಪತ್ನಿ ಶಾಂತಳೆ ಮಾತ್ರ ಜೈನಳಾಗಿ ಉಳಿದಿದ್ದಳು. ಇದು ವಿಷ್ಣುವರ್ಧನನ ಧಾರ್ಮಿಕ ಸಹಿಷ್ಣುತೆಯನ್ನು ಎತ್ತಿ ಹಿಡಿಯುತ್ತದೆ. ತಾಲೂಕಿನಲ್ಲಿ ಇವರಿಗೆ ಸಂಬಂಧಿಸಿದ ೨೦೦ಕ್ಕೂ ಹೆಚ್ಚು ಶಾಸನಗಳು ಲಭ್ಯವಾಗಿವೆ. ಬೇಲೂರಿನಲ್ಲಿ ಹೊಯ್ಸಳರಿಗೆ ಸಂಬಂಧಿಸಿದ ಶಾಸನಗಳ ಪೈಕಿ ಮಾರೆಯನ ಶಾಸನವೇ

ಮೊದಲನೆಯದಾಗಿದೆ.[೨೭] ಈ ಶಾಸನದಲ್ಲಿ ಶಕವರ್ಷವನ್ನು ಹೇಳಿಲ್ಲ ಮತ್ತು 'ಚಂಗನಾಡಗೋವಂ' ಎಂಬ ಬಿರುದನ್ನು ಬಿಟ್ಟರೆ ಇನ್ನೇನು ವಿಶೇಷವಿಲ್ಲ. ಇಲ್ಲಿ ಉಕ್ತವಾದ ಸಂವತ್ಸರ 'ಅಂಗಿರಸ' ಲಿಪಿಶಾಸ್ತ್ರದ ದೃಷ್ಟಿಯಿಂದ ಕ್ರಿ.ಶ. ೯೭೨ರಲ್ಲಿ ಬಂದ ಅಂಗಿರಸ ಸಂವತ್ಸರವಾಗಿರಬಹುದು. ನೃಪಕಾಮನಿಗೆ ಸಂಬಂಧಿಸಿದ ಶಾಸನಗಳು ಸಕಲೇಶಪುರದಲ್ಲಿ ಮಾತ್ರ ಸಿಕ್ಕಿವೆ. ಹಳೇಬೀಡು[೨೮] ಮತ್ತು ತೊಳಲಿನ[೨೯] ಕ್ರಿ.ಶ. ೧೦೬೨–೬೩ ರ ಶಾಸನಗಳು ಶುಭಕೃತ ಸಂವತ್ಸರದಲ್ಲಿ ಬರೆಯಲ್ಪಟ್ಟಿದ್ದು ವಿನಯಾದಿತ್ಯನ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿವೆ. ಹಳೇಬೀಡಿನ ಶಾಸನವು ದೋರಸಮುದ್ರದಿಂದ ಆಳುತ್ತಿದ್ದ ವಿನಯಾದಿತ್ಯನನ್ನು 'ನೃಪಕಾಮಪೊಯ್ಸಳನನನ್ದನಂ' ಎಂದು ವಿವರಿಸಿ, ತಂದೆ ಮಕ್ಕಳ ಸಂಬಂಧವನ್ನು ತಿಳಿಸುವ ಮಹತ್ವದ ದಾಖಲೆಯಾಗಿದೆ. ಇದಲ್ಲದೆ ಇನ್ನು ಮೂರು ಶಾಸನಗಳು ವಿನಯಾಧಿತ್ಯನ ಆಳ್ವಿಕೆಗೆ ಸಂಬಂಧಿಸಿದ್ದು ಅವರ ಶೌರ್ಯದಾರ್ಯಗಳನ್ನು ವಿವರಿಸಿವೆ. ಆತನ ಪುತ್ರ ಎರೆಯಂಗನ ಉಲ್ಲೇಖ ದೇವಿಹಳ್ಳಿ ಶಾಸನ,[೩೦] ದಬ್ಬೆ ಅಗ್ರಹಾರದ ಶಾಸನ[೩೧] ಸೇರಿದಂತೆ ಅನೇಕ ಶಾಸನಗಳಲ್ಲಿ ಬರುತ್ತದೆ. ೧ನೇ ಬಲ್ಲಾಳನಿಗೆ ಸಂಬಂಧಿಸಿದಂತೆ ೧೨ನೇ ಶತಮಾನದ ಬೇಲೂರಿನ ಶಾಸನಗಳು ವಿವರಿಸುತ್ತವೆ. ಬೇಲೂರಿನ ಸೌಮ್ಯನಾಯಕಿ ಅಮ್ಮನ ದೇವಾಲಯದಲ್ಲಿರುವ ಒಂದು ಶಾಸನವು ಎರೆಯಂಗ ಹಾಗೂ ಆತನ ಪುತ್ರ ಬಲ್ಲಾಳನು ಮಾಡಿದ ಯುದ್ಧಗಳನ್ನು ವರ್ಣಿಸುತ್ತ. 'ವೆಲ್ಲೂರು' ಹಾಗೂ 'ಬಳಯಪಟ್ಟಣ' ಗಳನ್ನು ತೆಗೆದುಕೊಂಡ ಸಂಗತಿಯನ್ನು ಮತ್ತು ಜಗದ್ದೇವನನ್ನು ಓಡಿಸಿದ ಸಂಗತಿಯನ್ನು ವಿವರಿಸಿದೆ.[೩೨] ಬೇಲೂರು ತಾಲೂಕಿನಲ್ಲಿ ಹೊಯ್ಸಳ ದೊರೆ ವಿಷ್ಣುವರ್ಧನನಿಗೆ ಸಂಬಂಧಿಸಿದಂತೆ ೨೨ ಶಾಸನಗಳಿವೆ.[೩೩] ಚೆನ್ನಕೇಶವ ದೇವಾಲಯದ ಕೈಬಕ್ಕಸದ ಗೋಡೆಯ ಮೇಲಿರುವ ಕ್ರಿಶ ೧೧೧೭ರ ಶಾಸನ ವಿಷ್ಣುವರ್ಧನನ ವಿಜಯಗಳನ್ನು ವಿವರವಾಗಿ ತಿಳಿಸುವ ಮೊದಲ ಶಾಸನ.[೩೪] ಆತನ ಕಾಂಭೋಜಕುದುರೆ ದಂಡು ನೆಲವನ್ನು ತೊತ್ತಳೆದುಳಿಯಿತು. "ಕಾಂಭೋಜವಾಜಿರಾಜಿ ಸಂಚರಿಸಿ ತರಳಧರಣೀವಳಯ" ಎನ್ನಿಸಿಕೊಂಡ. ಆತ ಕಾವೇರಿಯಿಂದ ಪೆರ್ದೊರೆ (ಕೃಷ್ಣ ನದಿ) ಯವರೆಗೆ ವ್ಯಾಪಿಸಿದ ಭೂಭಾಗಕ್ಕೆ ಪತಿಯಾಗಿ ಮಹಾಮಂಡಳೇಶ್ವರನಾಗಿದ್ದ ಎಂದು ಈ ಶಾಸನ ಉಲ್ಲೇಖಿಸುತ್ತದೆ.

ವಿಷ್ಣುವರ್ಧನನ ಆಳ್ವಿಕೆಯ ಕಾಲದ ಕ್ರಿ.ಶ. ೧೨೨೦ರ ಘಟ್ಟದಹಳ್ಳಿಯ ಶಾಸನವು ಕೇತಮಲ್ಲ ಎಂಬ ವ್ಯಕ್ತಿ ತನ್ನೊಡೆಯ ವಿಷ್ಣುವರ್ಧನನ ಮೇಲಿನ ಭಕ್ತಿಯಿಂದ ದೋರಸಮುದ್ರದಲ್ಲಿ 'ಶಿವನ ಮಹಾಭವನ' ಒಂದನ್ನು ಮಾಡಿಸಿ ಅದಕ್ಕೆ 'ವಿಷ್ಣುವರ್ಧನ ಪೊಯ್ಸಳೇಶ್ವರಂ' ಎಂಬ ಹೆಸರಿಟ್ಟಿದುದನ್ನು ದಾಖಲಿಸಿದೆ.[೩೫] ಇದೇ ಈಗಿನ ಹಳೇಬೀಡಿನ "ಹೊಯ್ಸಳೇಶ್ವರ" ದೇವಾಲಯವಾಗಿದೆ.

ಕ್ರಿ.ಶ ೧೧೩೩ರಲ್ಲಿ ಬರೆಯಲ್ಪಟ್ಟ ಬಸ್ತಿಹಳ್ಳಿಯ ಶಾಸನ[೩೬] ವಿಷ್ಣುವರ್ಧನನ ಜೀವನ ಚರಿತ್ರೆಯಲ್ಲಿ ಒಂದು ಮಹತ್ವದ ಶಾಸನ. ಆ ಸಂದರ್ಭದಲ್ಲಿ ವಿಷ್ಣುವರ್ಧನನು ಬಂಕಾಪುರದಲ್ಲಿ ಬೀಡುಬಿಟ್ಟಿದ್ದ. ಆಗ ಹಳೇಬೀಡಿನಿಂದ ಅದೇ ಹೊಚ್ಚ ಹೊಸದಾಗಿ ಕಟ್ಟಿಸಿದ ದ್ರೋಹಘರಟ್ಟಜಿನಾಲಯದ ಅರ್ಚಕರು (ಇಂದ್ರರು) ಜಿನಬಿಂಬವನ್ನು ಪ್ರತಿಷ್ಠಾಪಿಸಿದ ಶುಭದಾಯಕವಾದ ಸಂದರ್ಭದ ಪ್ರಸಾದವನ್ನು ತಲುಪಿಸಲು ಬಂಕಾಪುರಕ್ಕೆ ಹೋದರು. ಇಂದ್ರರು ಪ್ರಸಾದದೊಂದಿಗೆ ತಲುಪಿದ ಸಮಯದಲ್ಲಿ ಸಂತೋಷದ ಎರಡು ಶುಭವಾರ್ತೆಗಳು ಬಂದ ವಿವರವಿದೆ. ಕ್ರಿಶ ೧೧೭೩ರಲ್ಲಿ ಬರೆಯಲಾದ ಹೊಸಹಳ್ಳಿಯ ಶಾಸನವು[೩೭] ಒಂದನೆಯ ನರಸಿಂಹನನ್ನು ಮಹಾರಾಜಾಧಿರಾಜ ಎಂದು ಕರೆದಿರುವುದನ್ನು ದಾಖಲಿಸಿದೆ. ಕೂಡಲೂರು ಶಾಸನವನ್ನು ಕ್ರಿ.ಶ ೧೧೭೭–

[೩೮] ರಲ್ಲಿ ಬಂದ ಹೇವಳಂಬಿ ಸಂವತ್ಸರದಲ್ಲಿ ಬರೆಯಲಾಗಿದೆ. ಇಮ್ಮಡಿ ವೀರಬಲ್ಲಾಳನಿಗೆ "ಸಾಮ್ರಾಜ್ಯ ಪಟ್ಟಮಂ ಕಟ್ಟಿಸಿ" ಹೆಮಾಂಡಿದೇವನ್ನು ಪ್ರಧಾನನಾದ ಸಂಗತಿಯನ್ನು ಇದು ವಿವರಿಸಿದೆ.[೩೯]

ಕ್ರಿ.ಶ. ೧೨೦೭ರ ಬೆಳವಾಡಿಯ ಶಾಸನವು[೪೦] ಬಲ್ಲಾಳನ ವರೆಗಿನ ವಂಶಾವಳಿಯನ್ನು ವಿವರಿಸುತ್ತದೆ ಮತ್ತು ಹೊಯ್ಸಳರ ಪ್ರಥಮ ರಾಜಧಾನಿ 'ಶಶಕಪುರ' ಎಂಬುದು ಹೇಗೆ ನಿರ್ಮಾಣವಾಯಿತೆಂಬುದರ ಬಗೆಗಿನ ಐತಿಹ್ಯವನ್ನು ನಿರೂಪಿಸಿದೆ. ಕ್ರಿ.ಶ. ೧೨೧೭ರಲ್ಲಿ ಬರೆಯಲಾಗಿರುವ ಇಬ್ಬೀಡಿನ ಶಾಸನ[೪೧] ಇಮ್ಮಡಿ ವೀರಬಲ್ಲಾಳನಿಗೆ 'ವೈಷ್ಣವ ಚಕ್ರವರ್ತಿ' ಎಂಬ ಬಿರುದಿದ್ದುದನ್ನು ತಿಳಿಸಿದೆಯಲ್ಲದೆ ಆತನಿಗೊಬ್ಬ ಪೆರುಮಾಳು ಮಹಾಮಂತ್ರಿ ಎಂಬ ಮಂತ್ರಿ ಇದ್ದುದನ್ನು ದಾಖಲಿಸಿದೆ. ಈ ಪೆರುಮಾಳುದೇವ ಈ ಲೋಕದ ಬೃಹಸ್ಪತಿಯಂತೆ ಇದ್ದನೆಂದು ಈ ಶಾಸನದಲ್ಲಿ ಹೇಳಲಾಗಿದೆ.

ಇಮ್ಮಡಿ ನರಸಿಂಹನ ಆಳ್ವಿಕೆಗೆ ಸಂಬಂಧಿಸಿದಂತೆ ೧೭ ಶಾಸನಗಳು ಬೇಲೂರಿನಲ್ಲಿ ಲಭ್ಯವಾಗಿದೆ.[೪೨] ಅಮೃತೇಶ್ವರ ದೇವಾಲಯದ ಶಾಸನವು[೪೩] ನರಸಿಂಹನು ಕ್ರಿಶ ೧೨೨೦ ರ ಏಪ್ರಿಲ್ ೩ ರಂದು ಪ್ರತಾಪ ಚಕ್ರವರ್ತಿ ಆಗಿದ್ದನೆಂದು ದಾಖಲಿಸಿದೆ. ಈ ಪ್ರದೇಶದಲ್ಲಿ ಮುಮ್ಮಡಿ ನರಸಿಂಹನಿಗೆ ಸಂಬಂಧಿಸಿದ ೩೬ ಶಾಸನಗಳು ದೊರತಿವೆ.[೪೪] ಇವನು ಕುಮಾರನಾಗಿದ್ದಾಗಲೇ ದಾನದತ್ತಿ ಕೊಟ್ಟಿದ್ದನೆಂಬುದನ್ನು ಬೇಲೂರಿನ ಒಂದು ತಾಮ್ರಶಾಸನ ತಿಳಿಸುತ್ತದೆ.[೪೫] ಈ ದಾನಶಾಸನವನ್ನು ಚಕ್ರವರ್ತಿ ಸೋಮೇಶ್ವರನಿಂದಲೇ ಕ್ರಿಶ ೧೨೫೪ರಲ್ಲಿ ಬಂದ ಆನಂದ ಸಂವತ್ಸರದ ಚೈತ್ರಮಾಸದಲ್ಲಿ ಬರೆಯಿಸಿ ಕೊಡಲ್ಪಟ್ಟಿದೆ. ಮುಮ್ಮಡಿ ಬಲ್ಲಾಳನಿಗೆ ಸಂಬಂಧಿಸಿದ ೧೧ ಶಾಸನಗಳು ಈ ಪ್ರದೇಶದಲ್ಲಿವೆ.೪೬

ವಿಜಯನಗರ ಅರಸರು

ಕರ್ನಾಟಕದಲ್ಲಿ ಹೊಯ್ಸಳ ಸಾಮ್ರಾಜ್ಯ ಕಣ್ಮರೆಯಾದ ನಂತರ ಅವರ ಸಾಮಾಂತರಾಗಿದ್ದ ವಿಜಯನಗರದ ಅರಸರು ಅಧಿಕಾರಕ್ಕೆ ಬಂದರು. ಹೊಯ್ಸಳರ ರಾಜ್ಯ ಅವನತಿ ಹೊಂದಿದಾಗ ವಾರಂಗಲ್ಲಿನ ಕಾಕತೀಯರು ಮತ್ತು ದೇವಗಿರಿಯ ಸೇವುಣರು ಸಹ ಅವನತಿಯ ಹಾದಿಯಲ್ಲಿದ್ದರು. ಆ ಸಮಯದಲ್ಲಿ ದಕ್ಷಿಣ ಭಾಗದಲ್ಲಿ ಯಾವುದೇ ಬಲಿಷ್ಠ ಸಾಮ್ರಾಜ್ಯವಿರಲಿಲ್ಲ ಹಾಗೂ ಟರ್ಕೋ‍ಆಫ್ಘನ್ ದೊರೆಗಳು ದಕ್ಷಿಣ ಭಾರತದ ಮೇಲೆ ದಾಳಿ ಮಾಡಲು ಪ್ರಾರಂಭಿಸಿದರು, ಅವರ ಕ್ರೂರ ದಾಳಿಗಳಿಂದ ಈ ಭಾಗವು ಸಂಕಷ್ಟಗಳಿಗೆ ಗುರಿಯಾಗಿತ್ತು.

ಉತ್ತರದ ದಾಳಿಗಳಿಂದ ಜರ್ಝರಿತವಾಗಿದ್ದ ದಕ್ಷಿಣ ಭಾರತದಲ್ಲಿ ಕ್ರಿ.ಶ. ೧೩೩೬ರಲ್ಲಿ ಹರಿಹರ ಮತ್ತು ಬುಕ್ಕರಾಯ ಎಂಬ ಸಹೋದರರು ವಿಜಯನಗರ ಸಾಮ್ರಾಜ್ಯವನ್ನು ಸ್ಥಾಪಿಸಿದರು. ದಕ್ಷಿಣ ಭಾರತದಲ್ಲಿ ಪ್ರಬಲ ಹಾಗೂ ಸಂಪದ್ಭರಿತವಾಗಿದ್ದ ವಿಜಯನಗರ ಸಾಮ್ರಾಜ್ಯ ಸುಮಾರು ೨೩೦ ವರ್ಷಗಳ ಕಾಲ ಆಡಳಿತ ನಡೆಸಿತು, ವಿಜಯನಗರವು ಹಿಂದಿನ ಸಾಂಸ್ಕೃತಿಕ ಪರಂಪರೆಯನ್ನು ಯಶಸ್ವಿಯಾಗಿ ಮುಂದುವರಿಸಿತು. ವಿಜಯನಗರ (ಇಂದಿನ ಹಂಪೆ) ಈ ಸಾಮ್ರಾಜ್ಯದ ರಾಜಧಾನಿಯಾಗಿತ್ತು.

ಹೊಯ್ಸಳರ ನಂತರ ವಿಜಯನಗರದ ಅರಸರು ಬೇಲೂರನಲ್ಲಿ ಆಳ್ವಿಕೆ ಮಾಡಿದ್ದಾರೆ. ಈ ಮನೆತನದ ಅರಸರು ತಾಲೂಕಿನ ಹಲವು ದೇವಾಲಯಗಳಿಗೆ ದಾನದತ್ತಿಗಳನ್ನು ನೀಡಿದ್ದಾರೆ ಅದರಲ್ಲಿ ವೀರಭದ್ರ ದೇವಾಲಯಗಳು ಸಹ ಸೇರಿವೆ ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿರುವ ಪುಷ್ಪಗಿರಿಯ ವೀರಭದ್ರ

ದೇವಾಲಯಕ್ಕೂ ಸಹ ವಿಜಯನಗರ ಅರಸರು ದಾನದತ್ತಿಗಳನ್ನು ನೀಡಿದ್ದಾರೆ.[೪೬] ತಾಲೂಕಿನಲ್ಲಿ ಇವರಿಗೆ ಸಂಬಂಧಿಸಿದ ೪೯ ಶಾಸನಗಳಿದ್ದು, ಅವುಗಳಲ್ಲಿ ದಾನ ಶಾಸನಗಳೇ ಹೆಚ್ಚಾಗಿವೆ. ೧೩೪೬ ರಲ್ಲಿ ವಿರೂಪಾಕ್ಷ ಬಲ್ಲಾಳನ ಮರಣದ ನಂತರ ಇಡೀ ಹೊಯ್ಸಳ ಸಾಮ್ರಾಜ್ಯವು ಸಂಗಮ ವಂಶದ ಹರಿಹರನ ಆಳ್ವಿಕೆಗೆ ಸಂಪೂರ್ಣವಾಗಿ ಒಳಗಾಗುತ್ತದೆ.

ತಗರೆ ನಾಯಕರು

ಬೇಲೂರು ಪರಿಸರವನ್ನು ಆಳ್ವಿಕೆ ಮಾಡಿದ ಪ್ರಮುಖ ಸ್ಥಳೀಯ ಆಡಳಿತ ಮನೆತನವೆಂದರೆ ತಗರೆ ನಾಯಕರ ಮನೆತನ. ಬೇಲೂರು ಮತ್ತು ಮಂಜರಾಬಾದ್ ಮುಖ್ಯರಸ್ತೆಯಲ್ಲಿರುವ ತಗರೆಯು ಇಂದು ಒಂದು ಸಣ್ಣ ಗ್ರಾಮವಾಗಿದೆ. ಆದರೆ ಇದು ತಗರೆ ವಿಷಯ, ತಗರೆ ಗ್ರಾಮ, ತಗರೆ ೧೨, ಮತ್ತು ತಗರೆ೭೦ ಆಗಿ ಕದಂಬರ ಕಾಲದಿಂದ ಹಿಡಿದು ಮೈಸೂರು ಅರಸರ ಕಾಲದವರೆಗೂ ಪ್ರಮುಖವಾದ ಆಡಳಿತ ಘಟಕವಾಗಿ ಪ್ರಸಿದ್ಧಿಯಾಗಿತ್ತು.[೪೭]

ರಾಜಧಾನಿ ಬೇಲೂರಿಗೆ ತೀರ ಹತ್ತಿರವಾಗಿದ್ದ ತಗರೆ ನಾಡು, ಪ್ರಸ್ತುತ ಹಾಸನ ಜಿಲ್ಲೆಯ ಭೌಗೋಳಿಕ ವ್ಯಾಪ್ತಿಯಲ್ಲಿದೆ. ಈ ಪ್ರದೇಶ ಮುಖ್ಯವಾದ ಯುದ್ಧನೆಲೆಯಾಗಿ ಹಾಗೂ ಸೈನ್ಯದ ನೆಲೆಯಾಗಿಯೂ ಇದು ಪ್ರಸಿದ್ದವಾಗಿತ್ತು. ಕ್ರಿ.ಶ. ೬೦೬ ರಿಂದ ಹಿಡಿದು ೧೭೦೮ ರವರೆಗಿನ ಶಾಸನಗಳು ತಗರೆನಾಡನ್ನು ಕುರಿತು ಮಾಹಿತಿಯನ್ನು ಒದಗಿಸುತ್ತವೆ.[೪೮] ಈ ಎಲ್ಲಾ ಕಾಲದ ಶಾಸನಗಳಲ್ಲಿಯೂ ಗ್ರಾಮನಾಮವಾದ ತಗರೆಯನ್ನು ಇದೇ ಹೆಸರಿನಿಂದ ಕರೆಯಲಾಗಿದೆಯೇ ವಿನಃ ವ್ಯತ್ಯಾಸಗಳಾಗಿಲ್ಲ.[೪೯] ಕದಂಬರು, ಗಂಗರು, ಹೊಯ್ಸಳರು, ವಿಜಯನಗರದ ಅರಸರು, ತಗರೆ ನಾಯಕರು, ಬೇಲೂರಿನ ನಾಯಕರು ಹಾಗೂ ಮೈಸೂರಿನ ಅರಸರ ಆಡಳಿತಕ್ಕೆ ಈ ನಾಡು ಸೇರಿತ್ತಾದರೂ ಸ್ಥಳೀಯ ಆಡಳಿತವೇ ಪ್ರಮುಖವಾಗಿತ್ತು.

ವಿಜಯನಗರದ ಅರಸರು ತಮಗೆ ಅಮರದಣ್ಣಾಯಕತನಕ್ಕೆ ತಗರೆ ನಾಡನ್ನು ಒಪ್ಪಿಸಿದರೆಂದು ಹೇಳಿಕೊಳ್ಳುವ ತಗರೆನಾಯಕರ[೫೦] ೬ ಶಾಸನಗಳು ಬೇಲೂರು ಪ್ರದೇಶದಲ್ಲಿ ಸಿಕ್ಕಿವೆ. ಈ ಮನೆತನದ ಅರಸರಲ್ಲಿ ಲಖ್ಖಣ್ಣ ನಾಯಕ ಪ್ರಸಿದ್ಧವಾದ ಅರಸ. ಮುತ್ತುಗದ ಹಾಳೆ ಮಧುವರಸ ನಾಯಕನ ಮಗನದ ಲಖ್ಖಣ್ಣನಾಯಕನ ೧೪೮೨ ಮತ್ತು ೧೪೮೫ರ ಕಾಲದ ಶಾಸನಗಳು ಅವನು ಬೇಲೂರಿನ ಚೆನ್ನಕೇಶವ ದೇವರಿಗೆ ನೀಡಿರುವ ದಾನಗಳ ಕುರಿತು ಹೇಳುತ್ತವೆ.[೫೧]

ಮಧುವರಸನನ್ನು ನಾಯಕನೆಂದು ಕರೆದಿರುವುದರಿಂದ ಈತನು ತಗರೆಯ ನಾಯಕನಿರಬೇಕು, ಆದರೆ ಈತನ ಕಾಲದ ಯಾವುದೇ ಶಾಸನಗಳು ಸಿಕ್ಕಿಲ್ಲ, ಇವನ ಮಗನಾದ ಲಖ್ಖಣ್ಣನಾಯಕನ ೫ ಶಾಸನಗಳಲ್ಲಿಯೂ ಮುತ್ತುಗದ ಹಾಳೆ ಮಧುವರಸನಾಯಕನ ಮಕ್ಕಳಾದ ಲಖ್ಖಣ್ಣನಾಯಕ ಎಂದಿದೆ.[೫೨] ಈ ಮಧುವರಸನ ನಾಯಕನ ಪತ್ನಿ ಹೆಸರು ನಾಗಾಂಬಿಕೆ ಎಂದಿದೆ.೫೩ ಮುತ್ತುಗನ್ನಿಯ ಕ್ರಿ.ಶ ೧೪೮೨ರ ಶಾಸನವು (ಬೇಲೂರು ೨೨೭) ಈ ಮಧುವರಸ ನಾಯಕನ ಇನ್ನೊಬ್ಬ ಮಗನಾದ ಉಂಣಿನಾಯಕನನ್ನು ಪ್ರಸ್ತಾಪಿಸುತ್ತದೆ.೫೪ ಈ ಮನೆಯವರು ಬೇಲೂರು ತಾಲೂಕಿನ ಮುತ್ತುಗದ ಹಾಳದವರು. ಈ ತಗರೆ ನಾಯಕರ ಅತೀ ಪ್ರಾಚೀನ ಶಾಸನ ಕ್ರಿ.ಶ. ೧೪೮೨ರ ಮುತ್ತುಗನ್ನಿಯ ಶಾಸನ. ಮುತ್ತುಗದ ಹಾಳೆ

ಮಧುವರಸನಾಯಕನ ಮಕ್ಕಳಾದ ಉಂಣಿನಾಯಕರು ದಕ್ಷಿಣ ವಾರಣಾಸಿಯಾದ ವೇಲಾಪುರಿಯ ಚೆನ್ನಯ್ಯನ (ಚೆನ್ನಕೇಶವ ದೇವರು) ಬೋನದ ಅರಸರ ಹರಿವಾಣದ ನೇವೆದ್ಯಕ್ಕೆ ಮುತ್ತುಗಾನೆಯ (ಮುತ್ತುಗನ್ನಿ) ಗ್ರಾಮವನ್ನು ದಾನವಾಗಿ ನೀಡರುವುದನ್ನು ಉಲ್ಲೇಖಿಸಿದೆ. ಹಾಗೂ ಇವನ ಇದೊಂದೆ ಶಾಸನ ಉಪಲಬ್ಧವಿರುವುದು.[೫೫]

ಬೇಲೂರು ಪಾಳೆಯಗಾರರು

ವಿಜಯನಗರ ಅರಸರು ಆಡಳಿತದ ಅನುಕೂಲಕ್ಕಾಗಿ ತಮ್ಮ ಅಧೀನದಲ್ಲಿದ್ದ ಭೂ ಪ್ರದೇಶದ ವ್ಯಾಪ್ತಿಯನ್ನು ಅನೇಕ ಆಡಳಿತ ಘಟಕಗಳಾಗಿ ವಿಭಾಗಿಸಿದ್ದರು. ಈ ಘಟಕಗಳು ರಾಜನಿಂದ ನೇಮಿಸಲ್ಪಟ್ಟ ಒಬ್ಬೊಬ್ಬ ರಾಜಪ್ರತಿನಿಧಿಯ ಅಧೀನದಲ್ಲಿರುತ್ತಿತ್ತು. ಕೇಂದ್ರ ಪ್ರಭುತ್ವ ಸಾಮ್ರಾಜ್ಯದ ದೂರದ ಪ್ರದೇಶಗಳನ್ನು ನಿಯಂತ್ರಿಸುವುದು ಕಷ್ಟಸಾಧ್ಯವಾದುದರಿಂದ ಆಡಳಿತದ ಅನುಕೂಲಕ್ಕಾಗಿ ಘಟಕಗಳಾಗಿ ವಿಂಗಡಿಸಿದರು. ಅದರ ಉಸ್ತುವಾರಿಯನ್ನು ನೋಡಿಕೊಳ್ಳಲು ನೇಮಿಸುತ್ತಿದ್ದ ಅಧೀನ ಅಧಿಕಾರಿಗಳು ಅಮರನಾಯಕರು, ಪಾಳೆಗಾರರು, ನಾಯಕರು, ಒಡೆಯರು, ಗೌಡ, ಪ್ರಭು ಎಂದು ಪ್ರಸಿದ್ಧರಾಗಿದ್ದರು. ಇವರು ರಾಜನ ನಿಯಂತ್ರಣದಲ್ಲಿದ್ದರೂ ತಮ್ಮ ತಮ್ಮ ಪ್ರಾಂತ್ಯಗಳಲ್ಲಿ ಸ್ವತಂತ್ರರಾಗಿ ವರ್ತಿಸಿ ಮುಂದೆ ಜನಬೆಂಬಲದ ಕಾರಣಕ್ಕಾಗಿ ಹಾಗೂ ಕೇಂದ್ರ ಪ್ರಭುತ್ವದ ಸಾರ್ವಭೌಮತ್ವ ಕಣ್ಮರೆಯಾದ ಪರಿಣಾಮದಿಂದ ಅವರು ಸ್ವತಂತ್ರ ಆಡಳಿತಗಾರರಾಗಿ ಪಾಳೆಗಾರಶಾಹಿ ಎಂಬ ಹೆಸರಿನಿಂದ ಪ್ರಾಬಲ್ಯಗೊಂಡರು.

ವಿಜಯನಗರದ ಉತ್ತರಾಧಿಕಾರಿ ಸಾರ್ವಭೌಮತ್ವ ಪೆನುಗೊಂಡೆಯಲ್ಲಿ ೧೬೬೮ ರವರೆಗೆ ಅಸ್ತಿತ್ವದಲ್ಲಿತ್ತು. ಅಧಿಕಾರಕ್ಕೆ ಬಂದಿದ್ದ ಅರವೀಡು ವಂಶದ ರಾಜರು ಅಸಮರ್ಥರಾದ ಕಾರಣದಿಂದಾಗಿ ತಮ್ಮ ಅಧೀನದ ಸಾಮಂತ ರಾಜ್ಯಗಳು, ಪಾಳೆಪಟ್ಟುಗಳು, ನಾಡುಗಳು, ಮೊದಲಾದ ಸಂಸ್ಥಾನಗಳನ್ನು ಅವರು ಹತೋಟಿಯಲ್ಲಿಟ್ಟುಕೊಳ್ಳಲಾಗದೇ ಹೋದರು. ಅರವೀಡು ಮನೆತನದ ಕೊನೆಯ ಅರಸ ೩ನೇ ರಂಗರಾಯ ಕೆಳದಿ ಶಿವಪ್ಪನಾಯಕನ ಆಶ್ರಯದಲ್ಲುಳಿದನು. ನಂತರ ಬೇಲೂರನ್ನು ಜಾಗೀರಾಗಿ ಪಡೆದು ಅಲ್ಲಿಯೇ ಅಂತ್ಯಗೊಂಡರು.

ಇಂತಹ ಸಂದರ್ಭದಲ್ಲಿ ಬೇಲೂರಿನ ಆಡಳಿತ ನೋಡಿಕೊಳ್ಳುತ್ತಿದ್ದ ಅಧಿಕಾರಿಗಳು, ಪಾಳೆಗಾರರು, ನಾಯಕರು ತಮ್ಮ ಹೆಸರಿನೊಂದಿಗೆ ಈ ಪ್ರದೇಶವನ್ನು ೧೬ನೇ ಶತಮಾನದಿಂದ ೧೮ನೇ ಶತಮಾನದ ವರೆಗೆ ಆಳ್ವಿಕೆ ನೆಡೆಸಿದರು. ೧೮ನೇ ಶತಮಾನದಲ್ಲಿ ಬೇಲೂರು ಒಂದು ಪುಟ್ಟ ಊರು. ಆದರೂ ಸ್ವತಂತ್ರವಾದ ಪಾಳೆಪಟ್ಟಾಗಿದ್ದಿತ್ತು. ಬೇಲೂರು ಪ್ರದೇಶ ಕೆಲವು ಶಾಸನಗಳು ಹಾಗೂ ಸಾಹಿತ್ಯ ಆಕರಗಳಲ್ಲಿ ಬಲಂ, ಐಗೂರು, ಮಂಜರಾಬಾದ್ ಎಂಬೆಲ್ಲಾ ಹೆಸರುಗಳಿಂದ ಕರೆಯಲ್ಪಟ್ಟಿದೆ.[೫೬] ಬೇಲೂರು ಮತ್ತು ಹೊಳೆ ನರಸೀಪುರದ ನಾಯಕರು ಒಂದೇ ಮನೆತನದವರು ಎಂದು ಹೇಳಿಕೊಂಡಿದ್ದರೂ ಕೂಡ ಅದಕ್ಕೆ ಸ್ಪಷ್ಟ ಆಧಾರವಿಲ್ಲ. ಅಲ್ಲದೇ ಈ ಎರಡು ನಾಯಕ ಮನೆತನದವರು ವಿಜಯನಗರದ ಕೃಷ್ಣದೇವರಾಯ ರಾಜ್ಯಪ್ರಧಾನ ಮಾಡಿದರೆಂದು ಹೇಳಿಕೊಂಡಿದ್ದಾರೆ.[೫೭]

ಬೇಲೂರು ಪರಿಸರದಲ್ಲಿ ಈ ನಾಯಕರಿಗೆ ಸಂಬಂಧಪಟ್ಟ ೧೬ ಶಾಸನಗಳು ದೊರೆತಿವೆ.[೫೮] ಅವುಗಳಲ್ಲಿ

ಹೆಚ್ಚು ಶಾಸನಗಳು ಈ ಮನೆತನದ ಚರಿತ್ರೆಯನ್ನು ತಿಳಿಸುತ್ತವೆ. ಈ ಮನೆತನದ ಆಳ್ವಿಕೆ ಬಯ್ಯಪ್ಪ ನಾಯಕನ ಪುತ್ರ ಎರಕೃಷ್ಣಪ್ಪ ನಾಯಕನಿಂದ ಆರಂಭವಾಗುತ್ತದೆ. ಇದಕ್ಕೆ ಕಾರಣ ಬೇಲೂರ ಅರೆಮಾಗಣೆಯನ್ನು ಕೃಷ್ಣದೇವರಾಯರು ಎರಕೃಷ್ಣಪ್ಪ ನಾಯಕನಿಗೆ ಮೊದಲ ಬಾರಿಗೆ ದಯಪಾಲಿಸಿದ್ದು ಎನ್ನಬಹುದು.[೫೯] ಪೊಟ್ಟಪ್ಪನಾಯಕ, ಎರಕೃಷ್ಣಪ್ಪನಾಯಕ, ಲಕ್ಷ್ಮಪ್ಪ ನಾಯಕ, ನರಸಿಂಹ ನಾಯಕ, ವೆಂಕಟಾದ್ರಿ ನಾಯಕ ಸೇರಿದಂತೆ ಈ ಮನೆತನದ ಸುಮಾರು ೧೩ಜನ ನಾಯಕರು ಪಾಳೆಗಾರರಾಗಿ ಬೇಲೂರನ್ನು ಆಳ್ವಿಕೆಮಾಡಿದ್ದಾರೆ.

ನಂತರ ಮೈಸೂರು ಸೈನ್ಯ ೧೮೦೨ರ ಫೆಬ್ರವರಿ ೧೯ ರಂದು ವೆಂಕಟಾದ್ರಿ ನಾಯಕನನ್ನು ಬಂಧಿಸಿ ಅವನ ರಾಜಧಾನಿಯನ್ನು ವಶಪಡಿಸಿಕೊಂಡಿತು. ೧೦ ದಿನಗಳ ನಂತರ ವೆಂಕಟಾದ್ರಿ ನಾಯಕನನ್ನು ಗಲ್ಲಿಗೇರಿಸಲಾಯಿತು.[೬೦] ಅನೇಕ ದಶಕಗಳಿಂದ ಮೈಸೂರಿಗೆ ಶರಣಾಗದೆ ಸ್ವತಂತ್ರವಾಗಿ ಉಳಿದಿದ್ದ ಬಲಂ ಪಾಳೆಪಟ್ಟು ಕೊನೆಗೊಂಡು ಮೈಸೂರು ರಾಜ್ಯದಲ್ಲಿ ವಿಲೀನಗೊಂಡಿತು.

ಕೆಳದಿ ನಾಯಕರು

ವಿಜಯನಗರದ ಪತನದ ನಂತರ ಕೆಲ ಕಾಲ ಬೇಲೂರನ್ನು ಕೆಳದಿ ಅರಸರು ಆಳ್ವಿಕೆ ಮಾಡಿದ್ದಾರೆ. ಈ ಕುರಿತು ಮೆಕೆಂಝಿ ಸಂಗ್ರಹದಲ್ಲಿ ಉಲ್ಲೇಖವಿದೆ. ಶಾಲಿವಾಹನ ಶಕ ವರ್ಷ ೧೫೬೮ ಅಂದರೆ ಕ್ರಿ.ಶ ೧೬೪೬ ಪಾರ್ಥೀವ ಸಂವತ್ಸರದಲ್ಲಿ ಶಿವಪ್ಪನಾಯಕನಿಗೆ ಪಟ್ಟವಾಗಿರುವುದನ್ನು ಕೆಳದಿ ನೃಪವಿಜಯ ಉಲ್ಲೇಖಿಸುತ್ತದೆ. ಒಂದು ಶಾಸನವು ಬೇಲೂರು ಪ್ರದೇಶದಲ್ಲಿ ಕ್ರಿ.ಶ ೧೬೪೩ ರಿಂದ ೧೬೫೪ರ ಅವಧಿಯಲ್ಲಿ ಕೃಷ್ಣಪ್ಪ ನಾಯಕ ಮತ್ತು ಕ್ರಿ.ಶ ೧೬೫೫ ರಿಂದ ೧೬೭೨ ರವರೆಗೆ ವೆಂಕಟಾದ್ರಿ ನಾಯಕರು ಆಡಳಿತ ನಡೆಸಿರುವುದನ್ನು ತಿಳಿಸುತ್ತದೆ.[೬೧] ಇದರಿಂದ ಬೇಲೂರಿನಲ್ಲಿ ಅಲ್ಪಕಾಲ ಶಿವಪ್ಪನಾಯಕ ಆಳ್ವಿಕೆ ನೆಡೆಸಿದ್ದನೆಂದು ಗುರುತಿಸಬಹುದು. ಅಲ್ಲದೆ ಕೆಳದಿ ಇತಿಹಾಸದಲ್ಲಿ ಹಾಸನ ಜಿಲ್ಲೆಯ ಕೆಲ ಪ್ರದೇಶಗಳ ಉಲ್ಲೇಖವನ್ನು ಕಾಣಬಹುದಾಗಿದೆ. ಈ ಕುರಿತು ಕೆಳದಿ ನೃಪವಿಜಯ, ಶಿವತತ್ವ ರತ್ನಾಕರ, ಶಾಸನಗಳು, ಮೆಕೆಂಝಿ ಸಂಗ್ರಹ, ಐತಿಹಾಸಿಕ ದಾಖಲೆಗಳು, ಕೃಷ್ಣದೇವರಾಯರ ದಿನಚರಿ, ಚಿಕ್ಕದೇವರಾಯರ ವಂಶಾವಳಿ, ಮೈಸೂರು ದೊರೆಗಳ ಪೂರ್ವೋದಯ ಮತ್ತು ಹಯವದನರಾಯರ ಮೈಸೂರು ಚರಿತ್ರೆ ಮೊದಲಾದ ಕೃತಿಗಳಲ್ಲಿ ಹಾಸುಹೊಕ್ಕಾಗಿ ಬಂದಿರುವುದನ್ನು ಗಮನಿಸಬಹುದು. ಹಾಸನ ಜಿಲ್ಲೆಯ ಬೇಲೂರಿಗೆ ವೇಲಾಪುರ ಮತ್ತು ಬೇಲೂಹೂರು ಎಂಬ ಹೆಸರಿತ್ತೆಂದು ಕೆಳದಿ ಬಸವರಾಯರ ಶಿವತತ್ವರತ್ನಾಕರ ಕೃತಿಯಿಂದ ತಿಳಿಯುತ್ತದೆ.[೬೨] ಹಾಗೂ ಶಿವಪ್ಪ ನಾಯಕನು ಬೇಲೂರು ಸೀಮೆಯನ್ನು ಆನೆಗೊಂದಿಯ ಶ್ರೀರಂಗರಾಯನಿಗೆ ಒಪ್ಪಿಸಿದ ವಿವರಣೆ ವಸುಧಾರೆ ಕೈಫಿಯತ್ತಿನಲ್ಲಿ ಕಂಡುಬರುತ್ತದೆ.[೬೩]

ಮೈಸೂರು ಒಡೆಯರು

ವಿಜಯನಗರದ ಮಾಂಡಳಿಕರಾಗಿದ್ದ ಮೈಸೂರು ಒಡೆಯರು ಅವರ ಅವನತಿಯ ನಂತರ ಸ್ವತಂತ್ರವಾಗಿ ಆಳ್ವಿಕೆ ನಡೆಸಿದರು. ೧೭೬೧ ರಿಂದ ೧೭೯೯ರ ವರೆಗೆ ಹೈದರಾಲಿ ಮತ್ತು ಟಿಪ್ಪುವಿನ ಆಳ್ವಿಕೆಗೆ ಮೈಸೂರು ಪ್ರಾಂತ್ಯ ಒಳಪಟ್ಟಿತ್ತು. ಆ ವೇಳೆ ಬೇಲೂರನ್ನು ಪಾಳೆಗಾರರು ಆಳ್ವಿಕೆ ಮಾಡುತ್ತಿದ್ದು. ಮುಮ್ಮಡಿ ಕೃಷ್ಣರಾಜ ಒಡೆಯರಿಗೆ ಅಧಿಕಾರ ಹಸ್ತಾಂತರವಾದ ನಂತರ ೧೮೦೨ರಲ್ಲಿ ಮೈಸೂರು ಸೈನ್ಯ ಈ ಪ್ರದೇಶವನ್ನು

ವಶಪಡಿಸಿಕೊಂಡಿತು. ನಂತರ ೯ ಜಿಲ್ಲೆಗಳಾಗಿ ಮೈಸೂರನ್ನು ವಿಭಾಗಿಸಿಕೊಂಡು ಆಳ್ವಿಕೆ ಮಾಡಲಾಗುತ್ತದೆ. ಅದರಲ್ಲಿ ಬೇಲೂರು ಪ್ರಾಂತ್ಯವು ಸಹ ಜಿಲ್ಲೆಯ ಪ್ರಮುಖ ಭಾಗವಾಗಿತ್ತು.

ಕ್ರಿ. ಶ ೧೮೬೨ ರಲ್ಲಿ ಹಾಸನ ಜಿಲ್ಲೆಯು ಅಷ್ಟಗ್ರಾಮವಾಗಿ ವಿಭಾಗವಾಯಿತು. ಪುನಃ ೧೮೮೧ ರಲ್ಲಿ ಮೈಸೂರು ಪ್ರಾಂತ್ಯ ಪುನರ್ ವಿಂಗಡಣೆಯಾದ ಸಂದರ್ಭದಲ್ಲಿ ಅಷ್ಟಗ್ರಾಮವನ್ನು ರದ್ದುಪಡಿಸಿ ೧೮೮೨ರಲ್ಲಿ ಈ ಜಿಲ್ಲೆಯನ್ನು ಕಡೂರು ಸಬ್ ಡಿವಿಜನ್ ಆಗಿ ಪರಿವರ್ತಿಸಲಾಯಿತು. ಆಗ ಹಾಸನ, ಅರಸೀಕೆರೆ, ಬೇಲೂರು ಮತ್ತು ಮಂಜರಾಬಾದ್ ಎಂಬ ೪ ತಾಲೂಕುಗಳಿದ್ದವು.[೬೪] ಮುಂದೆ ಕ್ರಿ.ಶ ೧೮೮೬ ರಲ್ಲಿ ಹಾಸನವನ್ನು ಪುನಃ ಜಿಲ್ಲೆಯನ್ನಾಗಿ ಪರಿವರ್ತಿಸಿ ೭ ತಾಲೂಕುಗಳನ್ನಾಗಿ ಮಾರ್ಪಡಿಸಲಾಯಿತು. ಮೊದಲು ಇದ್ದ ನಾಲ್ಕು ತಾಲೂಕುಗಳ ಜೊತೆಗೆ ಅರಕಲಗೂಡು, ಹೊಳೆನರಸೀಪುರ, ಚೆನ್ನರಾಯಪಟ್ಟಣಗಳು, ಹೊಸದಾಗಿ ಸೇರಲ್ಪಟ್ಟವು. ಹಾಸನ ತಾಲೂಕಿನ ಉಪ ತಾಲೂಕುಗಳಾಗಿ ಆಲೂರು ಮತ್ತು ಶಾಂತಿಗ್ರಾಮಗಳು ಕಾರ್ಯನಿರ್ವಹಿಸುತ್ತಿದ್ದವು. ಮುಂದೆ ೧೯೪೧ರಲ್ಲಿ ಆಲೂರನ್ನು ಸ್ವತಂತ್ರ ತಾಲೂಕಾಗಿ ಘೋಷಿಸಲಾಯಿತು. ಪ್ರಸ್ತುತ ಜಿಲ್ಲೆಯಲ್ಲಿ ೮ ತಾಲೂಕುಗಳು ಕಾರ್ಯನಿರ್ವಹಿಸುತ್ತಿವೆ. ಜಿಲ್ಲೆಯಲ್ಲಿ ೩೭ ಹೋಬಳಿಗಳು, ೨೩೭೧ ಜನವಸತಿ ಇರುವ ೧೯೯ ಜನವಸತಿ ಇಲ್ಲದ ಗ್ರಾಮಗಳಿವೆ. ಬೇಲೂರು ತಾಲೂಕಿನಲ್ಲಿ ೩೮೪ ಹಳ್ಳಿಗಳಿದ್ದು ೫ ಹೋಬಳಿಗಳಿವೆ.

೧೯೪೭ರ ಸ್ವಾತಂತ್ರ್ಯದ ನಂತರ ಮೈಸೂರು ಸಂಸ್ಥಾನ ಭಾರತದ ಒಕ್ಕೂಟ ವ್ಯವಸ್ಥೆಯಲ್ಲಿ ವಿಲೀನಗೊಂಡಿತು. ತದನಂತರ ಮುಂದೆ ಮೈಸೂರು ರಾಜ್ಯದ ಆಡಳಿತ ವ್ಯಾಪ್ತಿಗೆ ಬೇಲೂರು ಪ್ರದೇಶ ಸೇರ್ಪಡೆಗೊಂಡಿರುವುದು ಕಂಡುಬರುತ್ತದೆ.

೨.೪ ಸ್ಥಳಪುರಾಣ

ಕೆಲಕಾಲ ಹೊಯ್ಸಳರ ರಾಜಧಾನಿಯಾಗಿದ್ದ ಬೇಲೂರು ಪಟ್ಟಣವು ಅವರ ಕಲೆ ಮತ್ತು ವಾಸ್ತು ಚಟುವಟಿಕೆಯ ತಾಣವಾಗಿತ್ತು, ಇದನ್ನು ವೇಲಾಪೂರ, ವೇಲೂರು, ದಕ್ಷಿಣ ವಾರಣಾಸಿ ಹಾಗೂ ಅಭಿನವಕ್ಷೋಣಿ ವೈಕುಂಠ ಎಂದು ಶಾಸನಗಳಲ್ಲಿ ಉಲ್ಲೇಖಿಸಲಾಗಿದೆ.[೬೫] ವೇಲೂರು ಅಥವಾ ವೇಲಾಪುರ ಎನ್ನುವುದು ಸಂಸ್ಕೃತಕ್ಕೆ ಅನುಕರಣಗೊಂಡ ಬೇಲೂರು ಪದವೆ ಆಗಿದೆ. ಕ್ರಿ.ಶ ೧೦೦೩ ರ ಶಾಸನದಲ್ಲಿ ಈ ಪಟ್ಟಣವನ್ನು ಬೆಲುಹೂರು[೬೬] ಎಂದು ಕರೆಯಲಾಗಿದೆ. ವಿನಯಾದಿತ್ಯನ ಕಾಲಕ್ಕೆ ಹೊಯ್ಸಳರು ತಮ್ಮ ರಾಜಧಾನಿಯನ್ನು ಸೊಸೆವೂರಿನಿಂದ ಬೆಲುಹುರ (ಬೇಲೂರು) ಸ್ಥಳಕ್ಕೆ ವರ್ಗಾಹಿಸುತ್ತಾರೆ. ಇದನ್ನು ನಾಗಮಂಗಲದ ಒಂದು ಶಾಸನವು ಶ್ರೀ ಮದ್ರಾಜಧಾನಿ ಬೆಲಹುರ ಬೀಡಿನೊಳು ರಾಜ್ಯಂಗೆಯ್ಯುತ್ತ ಮಿರ್ದು. ಎಂದು ಉಲ್ಲೇಖಿಸುತ್ತದೆ.[೬೭]

ಭಾಷಿಕವಾಗಿ ವೇಲಾ+ಪುರಿ ಮೊದಲನೆಯ ಪದ ವೇಲಾಕ್ಕೆ ವನ ಸಮುದ್ರದ ಅಂಚಿನಲ್ಲಿರುವ ವನ ಅಥವಾ ಕಾನನ ಎಂದಿದೆ. ವೇಲಾ>ಬೇಲಾ ತದ್ಬವವಾಗಿ ಬೇಲದ ಮರಗಳಿಂದ ಕೂಡಿರುವ ಬೇಲೂರಾಗಿದೆ. ಪುರಿ ಸಂಸ್ಕೃತ ರೂಪ ಮುಂದೆ ಪುರವಾಗಿ ತದನಂತರ ‘ಊರು’ ಎಂಬ ವಾಸ್ತವ್ಯ ಸೂಚಕ ಪದವಾಗಿ ಕಂಡು ಬಂದಿದೆ. ಪುರಿ/ಪುರ>ಹುರ ಮತ್ತು ಊರುಗಳು ಭಾಷಿಕವಾಗಿ ಸ್ಥಳನಾಮ ವಾಸ್ತವ್ಯ

ಸೂಚಕಗಳಾಗಿವೆ.[೧೭] ಜನಪದ ನಿಷ್ಪತ್ತಿಯ ಪ್ರಕಾರ ವಿಷ್ಣುವಿನ ದೇವಾಲಯವನ್ನು ಹರಿಜನ ಕೇರಿಯಲ್ಲಿ ಕಟ್ಟುವಲ್ಲಿ ಪ್ರಮುಖ ಪಾತ್ರವಹಿಸಿದ ಹರಿಜನ ನಾಯಕನಾದ ವೇಲನ ಹೆಸರಿನಲ್ಲಿ ಈ ಊರಿಗೆ ವೇಲಾಪುರಿ ಎಂದೂ, ಚೆನ್ನನ ಹೆಸರಿನಲ್ಲಿ ಪ್ರತಿಷ್ಠೆ ಮಾಡಿದ ವಿಷ್ಣು ಮೂರ್ತಿಯನ್ನು ಚೆನ್ನಕೇಶವನೆಂದು ರಾಮಾನುಜಾಚಾರ್ಯರು ಕರೆದದ್ದರಿಂದ ಅದೇ ಹೆಸರು ಮುಂದುವರೆದುಕೊಂಡು ಬಂದಿತೆಂದು ಹೇಳಲಾಗಿದೆ.

ಕೊನೆ ಟಿಪ್ಪಣಿ

೧. ಬೇಲೂರು ವಿಕಿಪೀಡಿಯಾ ಗೂಗಲ್ ಅಂತರ್ಜಾಲ ತಾಣ.

೨. ಅದೇ.

೩. ಶಾ. ಮಂ ಕೃಷ್ಣರಾಯ (ಪ್ರ. ಸಂ), ಗಿರಿಜಾದಿನಕರ (ಲೇ), ಬೇಲೂರು ಹಳೆಬೀಡು, ಪು.ಸಂ. ೧೧.

೪. ಜನಗಣತಿ ೨೦೧೧, ಗೂಗಲ್ ಅಂತರಜಾಲ ತಾಣ.

೫. ಗೋಪಾಲ್ ಆರ್. ಪೂರ್ವೋಕ್ತ, ಪು. ಸಂ, ೬೪೫.

೬. ಅದೇ, ಪು. ಸಂ, ೬೪೬.

೭. ಅದೇ, ಪು. ಸಂ, ೬೪೭.

೮. ಗೋಪಾಲ್ ಆರ್, ಪೂರ್ವೋಕ್ತ, ಪು, ಸಂ, ೪೮.

೯. ಅದೇ, ಪು. ಸಂ, ೪೮.

೧೦. ಗೋಪಾಲ್ ಆರ್, ಪೂರ್ವೋಕ್ತ, ಪು. ಸಂ, ೪೩.

೧೧. ಅದೇ, ಪು. ಸಂ, ೪೬.

೧೨. ಮ. ಸಕಲೇಶ, ಪೂರ್ವೋಕ್ತ, ಪು. ಸಂ, ೪೪.

೧೩. ಎಪಿಗ್ರಾಫಿಯಾ ಕರ್ನಾಟಿಕ, ಸಂ–೯ (ಪರಿಷ್ಕೃತ ಶಾಸನ ಸಂಖ್ಯೆ ೩೪೧,) ಪು. ಸಂ, ೩೨೦.

೧೪. ಅದೇ, ಶಾಸನ ಸಂಖ್ಯೆ ೧೯೧, ಪು, ಸಂ, ೧೭೯.

೧೫. ಅದೇ, ಪು. ಸಂ, XLIX.

೧೬. ಅದೇ, ಶಾಸನ ಸಂಖ್ಯೆ ೪೭೨, ಪು. ಸಂ (ಸಹವಾಸಿಹಳ್ಳಿ), ೪೩೩.೧೭. ಅದೇ, ಶಾಸನ ಸಂಖ್ಯೆ ೩೮೮, ಪು. ಸಂ, (ಬಸ್ತಿಹಳ್ಳಿ) ೩೫೧.

೧೭. ಅದೇ, ಶಾಸನ ಸಂಖ್ಯೆ ೫೫೧, ಪು. ಸಂ, (ಕರಗಡ) ೪೮೦.

೧೮. ಅದೇ, ಶಾಸನ ಸಂಖ್ಯೆ ೫೨೪. ಪು. ಸಂ (ಕೋಗೋಡು) ೪೬೪.

೧೯. ಗೋಪಾಲ್ ಆರ್, ಪೂರ್ವೋಕ್ತ, ಪು. ಸಂ, ೮೮.

೨೦. ಎಪಿಗ್ರಾಫಿಯಾ ಕರ್ನಾಟಿಕ, ಸಂ–೯, (ಪರಿಷ್ಕೃತ) ಪು. ಸಂ Lii

೨೧. ಅದೇ, ಪು. ಸಂ, ಋ –Liii

೨೨. ಅದೇ, ಪು. ಸಂ, Liii

೨೩. ಅದೇ, ಪು. ಸಂ, Liii

೨೪. ಅದೇ, ಶಾಸನ ಸಂಖ್ಯೆ ೨೫೦, ಪು. ಸಂ, ೨೩೮.

೨೫. ಅಂಬಳಿಕೆ ಹಿರಿಯಣ್ಣ, (ಸಂ) ಕನ್ನಡ ವಿಷಯ ವಿಶ್ವಕೋಶ,

೨೬. ಇತಿಹಾಸ ಮತ್ತು ಪುರಾತತ್ವ, ಪು. ಸಂ, ೬೭೬.

೨೭. ಅದೇ, ಪು. ಸಂ Liii

೨೮. ಅದೇ, ಪು. ಸಂ Liv

೨೯. ಅದೇ, ಪು .ಸಂ Liv

೩೦. ಅದೇ, ಪು. ಸಂ Liv

೩೧. ಅದೇ, ಪು. ಸಂ Liv

೩೨. ಅದೇ, ಶಾಸನ ಸಂಖ್ಯೆ ೧೧೮, ಪು.ಸಂ ೭೫–೭೬.

೩೩. ಅದೇ, ಪು. ಸಂ, xx

೩೪. ಅದೇ, ಪು. ಸಂ, Liv

೩೫. ಅದೇ, ಪು. ಸಂ, Lvi

೩೬. ಅದೇ, ಪು. ಸಂ, Lvi

೩೭. ಅದೇ, ಪು. ಸಂ, Lviii

೩೮. ಅದೇ, ಪು. ಸಂ, Lviii

೩೯. ಅದೇ, ಪು. ಸಂ, Lx

೪೦. ಅದೇ, ಪು. ಸಂ, Lxi

೪೧. ಅದೇ, ಪು. ಸಂ, Lxii

೪೨. ಅದೇ, ಶಾಸನ ಸಂಖ್ಯೆ ೧೫೬, ಪು. ಸಂ, ೧೧೪.

೪೩. ಅದೇ, ಪು. ಸಂ, Lxiii

೪೪. ಅದೇ, ಪು. ಸಂ, Lxiii

೪೫. ಅದೇ, ಪು. ಸಂ, Lxiv

೪೬. ಅದೇ, ಪು. ಸಂ, Lxvii

೪೭. ಗೋಪಾಲ್ ಆರ್ (ಸಂ), ಸುಂ.ಕಂ. ಗೋವರ್ಧನ (ಲೇ), ಪೂರ್ವೋಕ್ತ, ೧೬೭.

೪೮. ಅದೇ, ಪು. ಸಂ, ೧೬೭

೪೯. ಅದೇ, ಪು. ಸಂ, ೧೬೭

೫೦. ಅದೇ, ಪು. ಸಂ, ೧೬೮

೫೧. ಅದೇ, ಪು. ಸಂ, ೧೬೮

೫೨. ಅದೇ, ಪು. ಸಂ, ೧೬೮

೫೩. ಅದೇ, ಪು. ಸಂ, ೧೬೯

೫೪. ಅದೇ, ಪು. ಸಂ, ೧೬೮

೫೫. ಅದೇ, ಪು. ಸಂ, ೧೬೯

೫೬. ಅದೇ, ಬಿ.ಎಸ್.ಪುಟ್ಟಸ್ವಾಮಿ (ಲೇ), ಪು. ಸಂ, ೧೬೩.

೫೭. ಅದೇ, ಪು. ಸಂ, ೧೬೪.

೫೮. ಎಪಿಗ್ರಾಫಿಯಾ ಕರ್ನಾಟಿಕಾ, ಪೂರ್ವೋಕ್ತ, ಪು. ಸಂ, ೨೫–೨೬.

೫೯. ಆರ್ ಗೋಪಾಲ್, ಪೂರ್ವೋಕ್ತ, ಪು. ಸಂ, ೧೬೪.

೬೦. ಅದೇ, ಪು. ಸಂ, ೧೬೫

೬೧. ಅದೇ, ಕೆಳದಿ ವೆಂಕಟೇಶ ಜೋಯಿಸ್ (ಲೇ), ಪು. ಸಂ, ೧೦೨.

೬೨. ಅದೇ, ಪು. ಸಂ, ೯೮

೬೩. ಅದೇ, ಬಿ.ಎಸ್.ಪುಟ್ಟಸ್ವಾಮಿ (ಲೇ), ಪು. ಸಂ, ೧೬೪.

೬೪. ಉದಯರವಿ, ಹಾಸನ ಜಿಲ್ಲಾ ವೈಶಿಷ್ಟ್ಯ, ಪು. ಸಂ, ೮.

೬೫. ಗೋಪಾಲ್ ಆರ್ (ಸಂ), ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪು. ಸಂ, ೧೭೬.

೬೬. ಮ. ಸಕಲೇಶ್, ಹೊಯ್ಸಳೋದಯ ಸಂಶೋಧನೆ, ಪು.ಸಂ ೨೬.

೬೭. ಅದೇ. ಪು. ಸಂ, ೨೬.

೬೮. ವಳಗರಹಳ್ಳಿ ವಿಶ್ವನಾಥ್, ಹಾಸನ್ ಜಿಲ್ಲಾ ಸ್ಥಳನಾಮ ನಿಷ್ಪತ್ತಿಗಳು, ಪು. ಸಂ, ೩೨೦.

ಅಧ್ಯಾಯ – ಮೂರು

ವೀರಭದ್ರ ಪರಂಪರೆ

೩.೧ ಶೈವ ಧರ್ಮದ ಉಗಮ

೩.೨ ಪ್ರಾಚೀನ ಸಾಹಿತ್ಯಗಳಲ್ಲಿ ವೀರಭದ್ರ

೩.೩ ಬೇಲೂರು ಪರಿಸರದ ವೀರಭದ್ರ ಪರಂಪರೆ

ಅಧ್ಯಾಯ – ಮೂರು

ವೀರಭದ್ರ ಪರಂಪರೆ

ಭಾರತವು ಹಲವು ಧರ್ಮಗಳ ನೆಲೆಬೀಡು ಇಲ್ಲಿ ಕಂಡುಬರುವ ಭಕ್ತಿ ದೇವೋಪಾಸನೆ, ಸಂಸ್ಕೃತಿ, ಪರಂಪರೆ, ಸಾಹಿತ್ಯ ಎಲ್ಲದಕ್ಕೂ ಉಗಮ ಸ್ಥಾನವಾಗಿರುವುದು ಧರ್ಮ. ಸಿಂದೂ ಸಂಸ್ಕೃತಿಯಲ್ಲಿ ಪ್ರಾಚೀನ ಪಳೆಯುಳಿಕೆಯಾಗಿ ನಮಗೆ ಕಂಡುಬರುವುದು ಪ್ರಾಚೀನ ಶೈವ ಪರಂಪರೆ, ಅದರಲ್ಲಿ ಪಶುಪತಿಯ ಆರಾಧನೆಯ ಮೂಲಕ ಶೈವದ ಇರುವಿಕೆಯನ್ನು ವಿದ್ವಾಂಸರು ಪತ್ತೆ ಹಚ್ಚಿರುವುದು ಕಂಡು ಬರುತ್ತದೆ. ಅಂದರೆ ಭಾರತೀಯ ಸಂಸ್ಕೃತಿಯಲ್ಲಿ ಶೈವ ಪರಂಪರೆಯನ್ನು ಸಿಂಧೂ ನಾಗರೀಕತೆಯಿಂದ ಗುರುತಿಸಬಹುದಾಗಿದೆ. ಅತ್ಯಂತ ಪ್ರಾಚೀನವಾದ ಪರಂಪರೆ ಎಂದರೆ ಅದು ಶೈವ ಪರಂಪರೆಯಾಗಿದೆ. ಈ ಧರ್ಮದ ಪ್ರಮುಖ ದೈವವಾದ ವೀರಭದ್ರನ ಆಚರಣೆ ಮತ್ತು ಪರಂಪರೆ ಪ್ರಸ್ತುತ ಅಧ್ಯಯನದ ವಿಷಯವಾಗಿದೆ. ಈ ವಿಷಯವನ್ನು ಪ್ರವೇಶಮಾಡುವ ಮೊದಲು ಶೈವ ಧರ್ಮದ ಉಗಮ ಮತ್ತು ಅದರ ಸಾರವನ್ನು ಅರ್ಥೈಸಿಕೊಳ್ಳಬೇಕಾಗಿದೆ.

೩.೧ ಶೈವ ಧರ್ಮದ ಉಗಮ

ಶೈವ ಧರ್ಮ ಭರತ ಖಂಡದ ಅತ್ಯಂತ ಪುರಾತನ ಧರ್ಮಗಳಲ್ಲಿ ಒಂದಾಗಿದೆ. ಉತ್ತರ ಭಾರತದಲ್ಲಿ ಅನೇಕ ವೈದಿಕ ಬ್ರಾಹ್ಮಣರು ಶೈವ ಧರ್ಮದ ಅನುಯಾಯಿಗಳಾಗಿದ್ದರು. ಅವರು ಶಿವನನ್ನು ಪಶುಪತಿ ರೂಪದಲ್ಲಿ ಪೂಜಿಸುತ್ತಿದ್ದರು. ಶಿವನೇ ಈ ಧರ್ಮದ ಮೂಲ ಕರ್ತೃವಾಗಿದ್ದು ಇವರ ಅನುಯಾಯಿಗಳನ್ನು ಶೈವರೆಂದು ಕರೆಯುತ್ತಾರೆ. ಶೈವರು ಶಿವಭಕ್ತರು, ಲಿಂಗೋಪಾಸಕರು, ಲಿಂಗಪೂಜೆ ಮಾಡುವರು. ಲಿಂಗವು ಶೈವ ಧರ್ಮದ ಸಂಕೇತ. ಶೈವರ ಪ್ರಕಾರ ಶಿವನೇ ಪರಮೋಚ್ಚ ದೈವವಾಗಿದ್ದು ಪರಬ್ರಹ್ಮ ಸಕಲ ಜೀವರಾಶಿಗಳ ಸೃಷ್ಟಿಕರ್ತನಾಗಿದ್ದಾನೆ. ಯಾವುದರಿಂದ ಜೀವಾತ್ಮರು ಬದ್ದವಾಗಿ ಜನ್ಮಾಂತರಗಳನ್ನು ಹೊಂದುತ್ತಾರೋ ಅದೇ ಪಾಶ. ಶೈವಮತದಲ್ಲಿ ಪಂಚಪದಾರ್ಥಗಳಿದ್ದು ಅವು ಕ್ರೌರ್ಯ, ಕಾರಣ, ಯೋಗ, ವಿಧಿ ಮತ್ತು ದುಃಖಾಂತಗಳಾಗಿವೆ. ಶೈವ ಮತದಲ್ಲಿ ಒಟ್ಟು ೮ ಪ್ರಭೇದಗಳಿವೆ. ಅವುಗಳೆಂದರೆ ೧. ದ್ವೈತ ಪಾಶುಪತ, ೨. ದ್ವೈತ ಶೈವಸಿದ್ದಾಂತ, ೩. ದೈವತಾದ್ವೈತ ಲಕುಲೀಶ ಸಿದ್ದಾಂತ, ೪. ವಿಶಿಷ್ಟಾದ್ವೈತ ಶೈವ, ೫. ವೀರಶೈವ, ೬. ನಂದೀಶ್ವರ ಶೈವ, ೭. ರಸೇಶ್ವರ ಶೈವ, ೮. ಕಾಶ್ಮಿರ ಶೈವ, ಅಲ್ಲದೇ ೨೮ ಶೈವಾಗಮಗಳಿಂದ ಈ ಧರ್ಮ ಉಗಮವಾಗಿದೆ. ಅವೆಂದರೆ ೧. ಕಾಮಿಕ, ೨. ಯೋಗಜ, ೩. ಅಂತ್ಯ, ೪. ಕಾರಣ, ೫. ಅಜೀತ, ೬. ದೀಪ್ತ, ೭. ಸೂಕ್ಷ್ಮ, ೮. ಸಹಸ್ರ, ೯. ಅಂಶುಮಾನ, ೧೦. ಸುಪ್ರಭೇದ, ೧೧. ವಿಜಯ,

೧೨. ನಿಶ್ವಾಸ, ೧೩. ಸ್ವಯಂಭು, ೧೪. ಅಗಲ, ೧೫. ವೀರ, ೧೬. ಗೌರವ, ೧೭. ಮಕುಟ, ೧೮. ವಿಮಲ, ೧೯. ಚಂದ್ರಜ್ಞಾನ, ೨೦. ಬಿಂಬ, ೨೧. ಪ್ರೋದ್ಗೀತ, ೨೨. ದಲಿತ, ೨೩. ಸಿದ್ಧ, ೨೪. ಶರ್ವೋತ್ತರ, ೨೫. ಸಂತಾನ, ೨೬. ಪಾರಮೇಶ್ವರ, ೨೭. ಕಿರಣ, ೨೮. ವಾತುಲ.[೧] ಹೀಗೆ ಭಾರತೀಯ ಸಂಸ್ಕೃತಿಯಲ್ಲಿ ಶೈವಧರ್ಮದ ಪ್ರಾಚೀನತೆಯನ್ನು ಗುರುತಿಸಲು ಈ ಆಧಾರಗಳು ಪ್ರಮುಖವಾಗಿವೆ.

ಶೈವ ಧರ್ಮದ ಹಿನ್ನಲೆ

ಮಾನವ ಸಂಸ್ಕೃತಿ ಹೇಗೆ ಇತಿಹಾಸದ ಗತಿಯಲ್ಲಿ ಹೊಸ ಹೊಸ ಅಂಶಗಳನ್ನು ತನ್ನದಾಗಿಸಿಕೊಳ್ಳುತ್ತ ಬಂತೋ, ಹಾಗೆಯೇ ಸಂಸ್ಕೃತಿಯೆಂಬ ವಿಷಯದಲ್ಲಿ ಒಂದು ಅಂಶವಾದ ಧರ್ಮವು ಬೆಳೆದು ಬಂದಿತು. ಶೈವ ಧರ್ಮ ಜೈನಧರ್ಮಕ್ಕಿಂತ ಪುರಾತನವಾಗಿದ್ದು ಅದರ ಮೂಲವನ್ನು ಹರಪ್ಪ ಸಂಸ್ಕೃತಿಯಲ್ಲಿ ಗುರುತಿಸುತ್ತೇವೆ. ಹರಪ್ಪ ಮತ್ತು ಮೊಹೆಂಜೊದಾರೋ ಸಂಸ್ಕೃತಿಯಲ್ಲಿ ಮಣ್ಣಿನ ಪ್ರಣಾಳ ಪೀಠ ಸಹಿತವಾದ ಶಿವಲಿಂಗ ಮತ್ತು ಕೊಂಬುಗಳುಳ್ಳ ವಿಗ್ರಹ ದೊರೆತಿದೆ. ಪಶುಪತಿಯ ಮುದ್ರೆಯಲ್ಲಿ ಯೋಗಿಯಂತೆ ಕುಳಿತು ಮೈತುಂಬ ಆಭರಣಗಳನ್ನು ಧರಿಸಿರುವ ದೇವತೆಯಿದ್ದು, ತಲೆಯ ಮೇಲೆ ತ್ರಿಶೂಲದಂತೆ ಕಾಣುವ ಕೊಂಬಿನ ಕಿರೀಟವಿದೆ. ಪಶುಗಳಿಂದ ಸುತ್ತುವರೆಯಲ್ಪಟ್ಟಿರುವುದರಿಂದ ಇವರನ್ನು ಪಶುಪತಿ (ಪಶುಗಳ ಒಡೆಯ) ಎಂದು ಗುರುತಿಸಲಾಗಿದೆ.[೨] ಪಶುಪತಿ ಕುಳಿತ ಯೋಗಮುದ್ರೆಯಿಂದ ಅದನ್ನು ಮಹಾಯೋಗಿ ಎಂದು ಪರಿಗಣಿಸಿ ಅವನನ್ನು ಶಿವ ಎಂದು ಕಲ್ಪಿಸಲಾಗಿದೆ ಹಾಗೂ ಶೈವ ಧರ್ಮದ ಪ್ರಾಚೀನತೆಯನ್ನು ಅಲ್ಲಿಂದಲೇ ಗುರುತಿಸಲಾಗಿದೆ. ಹರಪ್ಪನ್ನರು ಶಿವನ ಆರಾಧಕರಾಗಿದ್ದರೆಂಬುದಕ್ಕೆ ಇದು ಮಹತ್ವದ ಸಾಕ್ಷಿಯಾಗಿದೆ. ಋಗ್ವೇದ ಕಾಲದಲ್ಲಿ ಅನೇಕ ರುದ್ರನ ಲಿಂಗಗಳು ದೊರೆತಿದ್ದು ಅಂದು ಲಿಂಗಪೂಜೆ ರೂಢಿಯಲ್ಲಿತ್ತೆಂದು ತಿಳಿಯುತ್ತದೆ. ಅವರು ಮಾತೃ ದೇವತೆಯಾಗಿ ವೃಷಭನನ್ನು ಪೂಜಿಸುತ್ತಿದ್ದರು. ಕಾಲಾನಂತರ ಪ್ರಾಚೀನ ಸಾಹಿತ್ಯದಲ್ಲಿ ಇವರಿಗೆ ಸಂಬಂಧಿಸಿದ ಅವತಾರಗಳು, ಪುರಾಣಗಳು ಮತ್ತು ಕಥಾನಕಗಳು ಹುಟ್ಟಿಕೊಳ್ಳಲು ಪ್ರಾರಂಭವಾಗುತ್ತವೆ.

ವೈದಿಕ ಸಾಹಿತ್ಯದ ಅತೀ ಪ್ರಾಚೀನ ಭಾಗವೆಂದು ಪರಿಗಣಿಸಲ್ಪಟ್ಟಿರುವ ಋಗ್ವೇದ ಸಂಹಿತೆಯಲ್ಲಿ ಮೂರು ಸೂಕ್ತಗಳು ವೀರಭದ್ರ ಕುರಿತಾಗಿದೆ. ಅವುಗಳಲ್ಲಿ ಸುಮಾರು ೭೫ ಸಲ ರುದ್ರನ ಉಲ್ಲೇಖಗಳು ಕಂಡುಬಂದಿವೆ. ಶಿವ ಎಂಬ ಪದವನ್ನು ರುದ್ರನಿಗೆ ಅನ್ವಯಿಸಲಾಗಿದ್ದರೂ ಅದು ನಾಮಪದವಾಗಿ ಬಳಕೆಯಾಗದೆ ಕೇವಲ ವಿಶೇಷಣವಾಗಿ ಬಳಕೆಯಾಗಿದೆ. ರುದ್ರ ಎಂದರೆ ಭಯಂಕರ, ಶಿವ ಎಂದರೆ ಮಂಗಳಕಾರಿ, ಶಿವ ಎಂಬ ಪದ ಶುಭಕರ ಎಂಬ ಅರ್ಥದಲ್ಲಿ ಅನೇಕ ಸಲ ದೇವಕೋಟಿಯ ಹಲವು ದೇವತೆಗಳಿಗೆ ಅನ್ವಯಿಸಿದೆ. ಹೀಗಿದ್ದಾಗ್ಯೂ ಋಗ್ವೇದ ಸಂಹಿತೆಯಲ್ಲಿ ಬರುವ ರುದ್ರನು, ನಂತರದ ಕಾಲದಲ್ಲಿ ಬರುವ ರುದ್ರ ಶಿವನಿಗೆ ಸಾಕಷ್ಟು ಹೋಲಿಕೆ ಉಳ್ಳವನಾಗಿ ಗೋಚರಿಸುತ್ತಾನೆ. ಯಜುರ್ವೇದದ ಶತರುದ್ರೀಯದಲ್ಲಿ ಅದೇ ದೇವತೆಗೆ ಕಪರ್ದಿಶರ್ವಶಂಭು, ಶಿವಕತ್ತಿವಾಸ ಎಂಬ ಹೆಸರುಗಳಿವೆ.[೩]

ಅಥರ್ವಣ ವೇದದಲ್ಲಿ ಶಿವ ಸರ್ವೇಶ್ವರನೆಂದು, ರುದ್ರನು ಭೂಮಿಯ ಅಧಿಪತಿಯೆಂತಲೂ ಚಿತ್ರಿತನಾಗಿದ್ದಾನೆ. ಅಥರ್ವಣವೇದವು ಜಲಚಿಕಿತ್ಸಕನೂ, ನೀಲಿ ಬಣ್ಣದ ಶಿಖೆಯುಳ್ಳವನು, ಮಹಾಕಾರ್ಯಗಳನ್ನು ಯಶಸ್ವಿಗೊಳಿಸುವವನು ಎಂದು ಶಿವನನ್ನು ಸ್ತುತಿಸಿದೆ. ಈ ವೇದದ ಮೈತ್ರೇಯ ಸಂಹಿತೆಯಲ್ಲಿ ರುದ್ರನನ್ನು ಮಹಾದೇವ ಎಂದು ಉಲ್ಲೇಖಿಸಲಾಗಿದೆ.[೪]

ಪ್ರಾಚೀನ ಕಾಲದ ನಾನಾ ಕಡೆಯಲ್ಲಿ ೧೨ ಜ್ಯೋತಿರ್ಲಿಂಗಗಳು ಪ್ರತಿಷ್ಠಾಪನೆಯಾದವು. ಪೌರಾಣಿಕ ಕಾಲದಿಂದಲೂ ಕೈಲಾಸ ಪರ್ವತ ಶಿವನ ತಪೋನಿರತ ಆವಾಸ ಸ್ಥಾನವಾಗಿ ಖ್ಯಾತಿಗೆ ಬಂದಿತು. ರಾಮೇಶ್ವರದಿಂದ ಕೇದಾರದವರೆಗೆ ಶೈವರು ವಿಸ್ತರಿಸಿದ್ದರು. ಶೈವ ಮತದ ಉಲ್ಲೇಖ ಮಹಾಭಾರತದಲ್ಲೂ, ಮೆಗಸ್ತಾನೀಸ್, ಹ್ಯೂಯೆನ್‌ತ್ಸಾಂಗ್ ಮತ್ತು ಬಾಣನ ಬರವಣಿಗೆಗಳಲ್ಲೂ ಕಂಡುಬರುತ್ತದೆ. ಹ್ಯೂಯೆನ್‌ತ್ಸಾಂಗ್‌ನು ಏಳು ಬಾರಿ ಕಾಳಾಮುಖರ ಬಗ್ಗೆ ಉಲ್ಲೇಖಿಸುತ್ತಾನೆ. ಕುಶಾಣರ ನಾಣ್ಯಗಳ ಮೇಲೆ ಶಿವನ ಚಿತ್ರಣವಿದ್ದು, ಇವರ ರಾಜನೊಬ್ಬ ಮಹೇಶ್ವರ ಎಂಬ ಬಿರುದು ಹೊಂದಿದ್ದನು. ಭಾರತೀಯ ಸಂಸ್ಕೃತಿಗೆ ಮಾರುಹೋದ ವಿದೇಶಿಯರಾದ ಇಂಡೋ ಗ್ರೀಕ್, ಯವನರು, ಕುಶಾಣರು, ಶೈವಧರ್ಮ ಸ್ವೀಕರಿಸಿದರು. ಗುಪ್ತರು ಸಹ ಶೈವ ಮತವನ್ನು ಪೋಷಿಸಿದ್ದು ಅವರ ಇತಿಹಾಸದಿಂದ ತಿಳಿದುಬರುತ್ತದೆ. ಎರಡನೇ ಚಂದ್ರಗುಪ್ತನ ಮಥುರ ಸ್ತಂಭ ಶಾಸನದಲ್ಲಿ ಶೈವರ ಉಲ್ಲೇಖವಿದೆ.[೫]

ವೀರಭದ್ರ ಪರಂಪರೆಯ ಹಿನ್ನೆಲೆ

ಶೈವಧರ್ಮದ ಸಂಸ್ಕೃತಿ ಪರಂಪರೆಯಲ್ಲಿ ವೀರಭದ್ರನಿಗೆ ವಿಶಿಷ್ಟವಾದ ಸ್ಥಾನವಿದೆ. ಶೈವಧರ್ಮದಿಂದ ವಿಕಸನಗೊಂಡ ವೀರಶೈವ ಸಂಸ್ಕೃತಿಯಲ್ಲಿ ಈತ ಆರಾಧ್ಯ ದೈವ. ವೇದಗಳಲ್ಲಿ ವೀರಭದ್ರನ ಹೆಸರು ಉಲ್ಲೇಖವಾಗಿಲ್ಲ, ರುದ್ರನೆಂದೇ ಅಲ್ಲಿ ಉಲ್ಲೇಖವಾಗಿದೆ. ರುದ್ರ ಮತ್ತು ವೀರಭದ್ರರು ಬೇರೆ ಬೇರೆ ಅಲ್ಲ ಅವರು ಒಂದೇ ಶಕ್ತಿಯ ಪರ್ಯಾಯ ನಾಮಗಳು‌ಃ ಎನ್ನಬಹುದು. ವೀರಭದ್ರ ರುದ್ರಾಂಶ ಸಂಭೂತ ದಕ್ಷಯಾಗವನ್ನು ಧ್ವಂಸಗೊಳಿಸಲು ಅವತರಿಸಿರುವನು ಎಂದು ಹೇಳಲಾಗುವ ವಿಚಾರವನ್ನು ಗ್ರಹಿಸಿದಾಗ, ವೇದಕಾಲದ ರುದ್ರ ಮುಂದೆ ಉಪನಿಷತ್ತುಗಳ ನಂತರದ ಕಾಲದಲ್ಲಿ ವೀರಭದ್ರನೆಂಬ ಅಭಿದಾನವನ್ನು ಪಡೆದಂತೆ ತೋರುತ್ತದೆ. ವೀರಶೈವಕ್ಕೂ ವೀರಭದ್ರನಿಗೂ ಅವಿನಾಭಾವ ಸಂಬಂಧ. ವೀರಶೈವ ಪಂಚಾಚಾರಗಳಲ್ಲಿ ಒಂದಾದ ಗಣಾಚಾರ ಸ್ವರೂಪದ ಪ್ರಕಾರ ಶಿವನನ್ನು ಹಾಗೂ ಶಿವಭಕ್ತರನ್ನು ನಿಂದಿಸುವ ಶಿವದ್ರೋಹಿಯನ್ನು ಕಂಡರೆ ಅವನನ್ನು ಘಾತಿಸಬೇಕು. ಶಿವನಕೋಪಕ್ಕೆ ಬಲಿಯಾಗಿ ತತ್ಪರಿಣಾಮವಾಗಿ ಜನಿಸಿದ ವೀರಭದ್ರನಿಂದ ಅವನ ಸಂಹಾರವಾಗುತ್ತದೆ. ಹೀಗೆ ದಕ್ಷಯಜ್ಞದ ಸಂದರ್ಭದಲ್ಲಿ ಶಿವನ ಜಟೆಯಿಂದ ಆವಿರ್ಭವಿಸಿದ ವೀರಭದ್ರನು ಶಿವನಲ್ಲಿ ಅಚಲವಾದ ನಿಷ್ಠೆಯುಳ್ಳ ವೀರಶೈವರಿಗೆ ಪರಮಾಧ್ಯ ದೈವವಾಗಿದ್ದಾರೆ. ವೀರಭದ್ರ ವೀರಶೈವ ಪರಂಪರೆಯ ಪಂಚ ಪೀಠಗಳ ಪೈಕಿ ರಂಭಾಪುರಿ ಪೀಠದ ಗೋತ್ರ ಪುರುಷನೂ ಸಹ ಆಗಿದ್ದಾನೆ.

ಭಾರತೀಯ ನಿಗಮಾಗಮ ಸಂಸ್ಕೃತಿಯಲ್ಲಿ, ವೇದಗಳ ಕಾಲದಲ್ಲಿ ರುದ್ರನೆಂದು ಕೀರ್ತಿತನಾದವನು ಉಪನಿಷತ್ತು, ಪುರಾಣ ಮತ್ತು ಆಗಮಗಳಲ್ಲಿ ವೀರಭದ್ರನೆಂದು ಗೋತ್ರ ಪುರುಷನಾಗಿ ಪ್ರಾಧಾನ್ಯತೆ ಪಡೆಯುತ್ತಾನೆ. ತಮಿಳುನಾಡಿನಲ್ಲಿ ಶ್ರೀಕುಮಾರಸ್ವಾಮಿ ಪ್ರಸಿದ್ಧನಾಗಿರುವಂತೆ, ಕರ್ನಾಟಕ, ಆಂಧ್ರ, ಕೇರಳ ನಾಡಿನಲ್ಲಿ ವೀರಭದ್ರಸ್ವಾಮಿ ಆರಾಧ್ಯ ದೈವವಾಗಿದ್ದಾನೆ. ವೀರಭದ್ರ ನಮ್ಮ ಸಂಸ್ಕೃತಿಯ ಶೌರ್ಯಪುರುಷ. ಶಿವಾಚಾರದಲ್ಲಿ ತುಂಬಿ ತುಳುಕುವ ಆತ್ಮ ವಿಶ್ವಾಸದ ದಿವ್ಯವ್ಯಕ್ತಿತ್ವ ಅವನದು. ಕ್ರಾಂತಿಕಾರಿ ವ್ಯಕ್ತಿತ್ವದಲ್ಲಿ ವೀರತನದ ವರ್ಚಸ್ಸು ಅವನಲ್ಲಿ ನಿರಂತರ ವೃದ್ಧಿಗೊಂಡು ಬಂದಿದೆ. ಅವನು ಸದಾ ಕ್ರಿಯಾಶೀಲತೆ ಹೊಂದಿರುವವನು, ಅವನ ಶಿಲ್ಪಭಂಗಿಯೂ ಹಾಗೆಯೇ ಇರುತ್ತದೆ. ಅವನನ್ನು ರುದ್ರಪುತ್ರರುದ್ರಸ್ವತನೆಯೋ

ರೌದ್ರ: ಎನ್ನಲಾಗಿದ್ದು. ಶಿವಪುರಾಣ, ಲಿಂಗಪುರಾಣ, ಮಯಶಿಲ್ಪೇಜ, ಶ್ರೀತತ್ವ ನಿಧಿ ಕೃತಿಗಳು ಹಾಗೂ ಕ್ರಿ.ಶ ೧೪೦೪ರ ಚನ್ನಗಿರಿ ತಾಲೂಕು ನೀತಿಗೇರಿ ಗ್ರಾಮದ ವೀರಭದ್ರ ದೇಗುಲದ ಭಿತ್ತಿಯ ಶಾಸನ ಈ ವೀರಭದ್ರನ ಕುರಿತು ಮಾಹಿತಿ ನೀಡುತ್ತವೆ.[೬]

ಸಿಂಧೂ ಸಂಸ್ಕೃತಿಯಲ್ಲಿ ವೀರಭದ್ರನ ಸ್ವರೂಪ ಮೊದಲಿಗೆ ಲಿಂಗರೂಪದಲ್ಲಿ ಆರಾಧನೆಗೊಂಡಿತು. ಇದು ಇಂದಿನ ಇಕ್ಕೇರಿಯ ಅಘೋರೇಶ್ವರ ಲಿಂಗ, ಬಸವ ಕಲ್ಯಾಣದ ತ್ರಿಪುರಾಂತ ಲಿಂಗ ಗವಿಮಠದ ಪಂಚಲಿಂಗ, ಕೊಡಗಿನ ಹೆಗ್ಗಳದ ಪೆರುಮಲೆಶಾಸ್ತಾವುವಿನೊಡನಿರುವ ವೀರಭದ್ರ ಹಾಗೂ ವೀರೂಪಾಕ್ಷ ಲಿಂಗನಾಮಿಯಾಗಿ ಬೆಳಗಾವಿ ಜಿಲ್ಲೆಯ ಯಡೂರಿನಲ್ಲಿ ಲಿಂಗರೂಪಿಯಾದ ವೀರಭದ್ರ ಈ ಪರಂಪರೆಗೆ ಸಾಕ್ಷಿಯಾಗಿ ಕಾಣುತ್ತಾರೆ.[೮]

ಮಧ್ಯಪ್ರದೇಶದ ಉಜ್ಜಯಿನಿಯ ಮಹಾಕಾಲ ದೇಗುಲದ ಗರ್ಭಗೃಹದ ಹೊರಗಿನ ಆವರಣದಲ್ಲಿ ವೀರಭದ್ರನನ್ನು ಮೊಗವಾಡ ಅಥವಾ ಶಿರರೂಪದಲ್ಲಿ ಆರಾಧಿಸಲಾಗುತ್ತಿದೆ. ಇದೇ ಉಜ್ಜಯಿನಿಯ ಸಿದ್ದವಟಿಯ ಬಳಿಯ ಕ್ಷಿಪ್ರಾ ನದಿಯ ದಂಡೆಯ ಮೇಲಿರುವ ಮರುಳ ಸಿದ್ದೇಶ್ವರ ದೇಗುಲದ ಎದುರು ಇರುವ ಮರದ ಬುಡದಲ್ಲಿ ವೀರಭದ್ರನ ಮೊಗವಾಡವಿಟ್ಟು ಆರಾಧನೆ ನಡೆಯುತ್ತದೆ. ಇದು ಉಜ್ಜಯಿನಿಯಲ್ಲಿರುವ ವೀರಭದ್ರ ಪರಂಪರೆಯನ್ನು ಸೂಚಿಸುತ್ತದೆ. ಲಂಡನ್ ಮ್ಯೂಸಿಯಂನಲ್ಲಿ ಆನೆಗಳ ಶಿಲ್ಪಮುಖ ಪೀಠದ ಮೇಲೆ ಸ್ಥಾನಕ ವೀರಭದ್ರ ಮೂರ್ತಿ ಇದೆ.[೯] ಭಾರತದ ಸಿಮೋಲಂಘನ ಮಾಡಿ ವೀರಭದ್ರನ ಶಿಲ್ಪ ಅಲ್ಲಿಗೆ ಹೋಗಿದೆ ಎಂದರೆ ಭಾರತದಲ್ಲಿ ಅವನ ಆರಾಧನೆಯ ಬೇರು ಗಟ್ಟಿತಳಹದಿಯದೆನ್ನಬೇಕು.

೩.೨ ಪ್ರಾಚೀನ ಸಾಹಿತ್ಯಗಳಲ್ಲಿ ವೀರಭದ್ರ

ವೀರಭದ್ರನ ವಿಷಯ ಮತ್ತು ಕಥೆಯು ಪ್ರಾಚೀನ ಸಂಸ್ಕೃತ ಭಾಷೆಯ, ವೇದ, ಉಪನಿಷತ್ತು, ಪುರಾಣಗಳು, ಶಿವಾಗಮೋತ್ತರ ಭಾಗಗಳು ಹಾಗೂ ಮಹಾಭಾರತ, ಲಿಂಗಪುರಾಣ, ಕಾವ್ಯ, ನಾಟಕ, ಸ್ತೋತ್ರಗಳು ದಂಡಕ, ವಚನ, ವಡಬು ಹೀಗೆ ಮೊದಲಾದವುಗಳಲ್ಲಿ ನಿರೂಪಿತವಾಗಿವೆ.

ವೇದಗಳಲ್ಲಿ ವೀರಭದ್ರ

ವೇದಗಳೆಂದರೆ ಋಷಿಗಳು, ಋಷಿವಂಶದವರು ತಮ್ಮ ಮನೆತನಗಳಲ್ಲಿ ಅನೂಚಾನವಾಗಿ ಬಂದ ಮಂತ್ರ ಸೂಕ್ತಗಳನ್ನು ಒಟ್ಟುಗೂಡಿಸಿರುವ ಒಂದು ಸಂಕಲನ ಅಥವಾ ಸಂಹಿತೆ. ದೇವತೆಗಳ ತೃಪ್ತ್ಯರ್ಥವಾಗಿ ಯಜ್ಞಕಾಲದಲ್ಲಿ ಉಚ್ಚರಿಸಲಾಗುತ್ತಿದ್ದ ಪ್ರಾರ್ಥನೆಗಳೇ ಮಂತ್ರಗಳು. ಋಕ್ ಎಂದರೆ ದೇವತಾ ಸ್ತುತಿರೂಪವಾದ ಪದ್ಯ. ವೇದವೆಂದರೆ ಶೃತಿ, ಛಂದಸ್ಸು, ಜ್ಞಾನ. ಆದ್ದರಿಂದ ಪ್ರಧಾನವಾಗಿ ಋಗ್ವೇದ ದೇವತ ಸ್ತುತಿ ರೂಪವಾದ ಜ್ಞಾನ. ಭಾರತದ ಧಾರ್ಮಿಕ ಸಂಸ್ಕೃತಿಗೆಲ್ಲ ಋಗ್ವೇದವೇ ಬುನಾದಿ.[೧೦]

ಋಗ್ವೇದದಲ್ಲಿ ವೀರಭದ್ರನ ವರ್ಣನೆ

ವೇದಗಳಲ್ಲಿ ಋಗ್ವೇದವೇ ಪ್ರಾಚೀನತನವೆಂಬುದು ವಿದ್ವಾಂಸರ ಅಭಿಪ್ರಾಯ ಇದರ ಕಾಲ ಸುಮಾರು ಕ್ರಿ.ಪೂ ೨೦೦೦ ಎನ್ನುವುದು ಬಹುಜನಮತ. ಇಂತಹ ಋಗ್ವೇದದಲ್ಲಿ ವೀರ ಶಬ್ಧದ (ವೀರಭದ್ರ)

ಉಲ್ಲೇಖವಿದೆ ಎಂಬುದಾಗಿ ಸಂಶೋಧಕರಾದ ಶಂಭಾ ಜೋಷಿ ಅವರು ತಮ್ಮ ಶಿವರಹಸ್ಯವೆಂಬ ಕಿರುಶೋಧ ಹೊತ್ತಿಗೆಯಲ್ಲಿ ಅಭಿಪ್ರಾಯಪಟ್ಟಿದ್ದಾರೆ.[೧೧]

ಪ್ರಾಚೀನ ಭಾರತದ ಸಂಸ್ಕೃತ ಸಾಹಿತ್ಯಗಳ ಪೈಕಿ ಮೊದಲ ಬಾರಿಗೆ ವೀರಭದ್ರನ ಉಲ್ಲೇಖ ಕಂಡುಬರುವುದು ಋಗ್ವೇದದಲ್ಲಿ. ಸಾಹಿತ್ಯದಲ್ಲಿ ಉಕ್ತನಾಗುವ ವೀರಭದ್ರ ಹೆಸರಿಗನುಗುಣವಾಗಿ ವೀರರಸ ಪೋಷಿತ ಪರಿಸರ ಶಬ್ದಗಳಲ್ಲಿಯೂ ವರ್ಣಿತನಾಗಿದ್ದಾನೆ. ಋಗ್ವೇದದಲ್ಲಿ ವೀರಭದ್ರನ ಉಲ್ಲೇಖ ಹೀಗಿದೆ.

'ಸ ವೀರೋ ದಕ್ಷ ಸಾಧನೋ ವಿಯಸ್ತಂಭ ರೋದಸೀ'[೧೨]

ಅಂದರೆ ದಕ್ಷ ಮರ್ಧನ ವೀರಭದ್ರ ಭೂಮ್ಯಾಕಾಶಗಳನ್ನು ಸ್ತಂಭಿಸಿದ ಎನ್ನುವ ಅರ್ಥ ಈ ಶ್ಲೋಕದಲ್ಲಿದೆ. ಪಾತಾಳದಿಂದತ್ತತ್ತ ನಿಮ್ಮ ಶ್ರೀ ಚರಣ, ಬ್ರಹ್ಮಾಂಡದಿತ್ತತ್ತ ನಿಮ್ಮ ಶ್ರೀ ಮಕುಟ ಎಂಬ ಬಸವಣ್ಣನ ವಚನದ ಮಾತುಗಳ ಪ್ರಾಚೀನ ಧ್ವನಿಯಾಗಿ ಕಾಣುತ್ತದೆ. ಭೂಮಿ ಆಕಾಶಗಳನ್ನು ಮೀರಿ ನಿಂತವನಾಗಿದ್ದ ಅವನು ಯಜುರ್ವೇದದ ಪ್ರಕಾರ ದಕ್ಷಯಜ್ಞನದ ಪಾತ್ರಧಾರಿಗಳನ್ನೆಲ್ಲ ದಮನಿಸಿದ ಆರಾಧ್ಯ, ಶೂರದೇವ ಮತ್ತು ಋಷಿ ಬಂದವಾದ ಶರಭಾವತಾರಿಯ ಕೃಪೆ ಬೇಕು ಎಂದು ಋಗ್ವೇದ ಒತ್ತಿ ಹೇಳಿದೆ. ಮತ್ತು 'ದೋಷಾ ಶಿವಃ ಸಹಸಸೂನೋ । ಆಗ್ನೇಯಂ ದೇವ ಅಚಿತ ಸಚಸೇ ಸ್ವಸ್ತಿ' ಎಂಬ ಶ್ಲೋಕವಿದ್ದು ಅಗ್ನಿಯೇ ಶಿವ ಎಂಬ ಅರ್ಥ ಇಲ್ಲಿ ಸ್ಪಷ್ಟವಾಗಿದೆ.[೧೩]

ಯಜುರ್ವೇದದಲ್ಲಿ ವೀರಭದ್ರ

ವೀರಭದ್ರನ ಜನನದ ಕುರಿತು ಯಜುರ್ವೇದದಲ್ಲಿ ಈ ರೀತಿಯ ಉಲ್ಲೇಖವಿದೆ.

"ಸವಿರೋ ದಕ್ಷ ಸಾಧನೋ ವಿಯಸ್ತಂಭ ರೋದಸಿ
ದಕ್ಷ ಸಾದನಸ್ಯ ವಿರೂ ರಕ್ಷಿತ್"[೧೪]

ಯಜುರ್ವೇದದ ಈ ಮಂತ್ರ ವೀರಭದ್ರನು ಆ ಕಾಲದಲ್ಲಿ ಹೆಚ್ಚು ಪ್ರಭಾವಿಗೊಂಡಿದ್ದನು ಎಂಬುದನ್ನು ಸೂಚಿಸುತ್ತದೆ. ಜನವಾಣಿಯಂತೆ ಶಿವನ ಹಣೆಗಣ್ಣಿನಲ್ಲಿ ವೀರಭದ್ರ ಜನಿಸಿದ ಎಂದಿದೆ ಆದರೆ 'ಕರ್ಣದಲ್ಲಿ ಜನಿಸಿದವರುಂಟೇ' ಎಂಬ ಶರಣರ ವಚನ ವಿವೇಚನೆ ಮಾಡಿದಾಗ ಹಣೆಗಣ್ಣಿನಲ್ಲಿ ಅಸಂಭವ, ಅವೈಜ್ಞಾನಿಕ. ಪ್ರಾಯಶಃ ಶಿವನಿಗೆ ಪ್ರೀತಿಯ ಶಿಷ್ಯನಾಗಿದ್ದರಿಂದ ಗುರುವಿನ ಶಿಷ್ಯರಿಗೆ ಕರಂಜಾತ ಎನ್ನುವಂತೆ ಶಿವನ ನೇತ್ರ ಸಂಜಾತ ಎಂದಿರಬಹುದೇನೋ? ಏಕೆಂದರೆ ಶಿವನನ್ನು ಗುರುವಾಗಿ ಸ್ವೀಕರಿಸಿ ಅವನ ಆಜ್ಞಾ ಪರಿಪಾಲಕನಾಗಿ ಧರ್ಮರಕ್ಷಣೆಗೈದ ಕಾರಣ ಶಿವನು ತನ್ನ ಕೃಪದೃಷ್ಟಿಯಿಂದ ಮಹಾಚೇತನವಾಗಿದ್ದರಿಂದ 'ನೇತ್ರ ಸಂಜಾತ' ಹಣೆಗಣ್ಣಿನಲ್ಲಿ ಜನಿಸಿದವನೆಂದು ಜನಪದರಲ್ಲಿ ಪ್ರತೀತಿ ಬಂದಿದೆ.

ಋಗ್ವೇದದಲ್ಲಿ ರುದ್ರನೆ ವೀರಭದ್ರನೆಂಬುದಾಗಿ ಸಮೀಕರಣಗೊಂಡಿರುವಂತೆ, ಯಜುರ್ವೇದದ ತೈತ್ತರೀಯ ಸಂಹಿತೆಯಲ್ಲಿ ಬರುವ ರುದ್ರಾಧ್ಯಾಯ ಅಥವಾ ಶತರುದ್ರೀಯದಲ್ಲಿಯೂ ರುದ್ರ ಶಬ್ದವು ವೀರಭದ್ರನಲ್ಲಿಯೇ ಸಮನ್ವಯಗೊಳ್ಳುತ್ತದೆ.[೧೫] ಹಾಗಾಗಿ ಒಂದು ರೀತಿಯಲ್ಲಿ ಶತರುದ್ರೀಯ ಪಾರಾಯಣ ವೀರಭದ್ರನ ಅನುಸಂಧಾನವೇ ಆಗಿದೆ. ರುದ್ರಾಧ್ಯಯದ ಮಂತ್ರ ಪಠಣ ಮತ್ತು ಅರ್ಥ ಪರಿಭಾವನೆಯಿಂದಾಗಿ

ಈ ಅಂಶವು ಸ್ಪಷ್ಟವಾಗುತ್ತದೆ. ಈ ಶತರುದ್ರೀಯ ಅಥವಾ ರುದ್ರಾಧ್ಯಯದಲ್ಲಿ ಶಿವನ ಪಂಚವಿಂಶತಿ ಲೀಲೆಗಳ ಮಧ್ಯ ೧೨ನೇ ದಕ್ಷಧ್ವರ ಧ್ವಂಸಲೀಲೆಯು ಪ್ರಧಾನವಾಗಿ ಅಭಿವ್ಯಕ್ತವಾಗುತ್ತದೆ. ದಾಕ್ಷಾಯಣಿ ತನ್ನ ತಂದೆ ಮಾಡಿದ ಅಪಮಾನದಿಂದ ಯಗ್ನಾಗ್ನಿ ಕುಂಡದಲ್ಲಿ ದುಮುಕಿ, ಯೋಗಾಗ್ನಿಯಿಂದ ದೇಹತ್ಯಾಗ ಮಾಡಿದ್ದನ್ನು ಕೇಳಿದ ಶಿವನು ಉಗ್ರ ಸ್ವರೂಪ ತಾಳಿ ರುದ್ರನಾಗುತ್ತಾರೆ. ಆಗ ನಿಟಿಲಾಗ್ನಿಯಿಂದ ಹೊರಚೆಲ್ಲಿದ ಜ್ವಾಲೆಯೇ ಘೋರ ರೂಪು ತಳೆದಂತೆ ಸಹಸ್ರ ಶೀರ್ಷನೂ, ದ್ವ ಸಹಸ್ರ ಬಾಹುಗಳುಳ್ಳವನು, ಪ್ರಚಂಡ ವೀರನೂ ಆದ ವೀರಭದ್ರನು ಉದಿಸುವನು.

ರುದ್ರನಾದೇಶದಂತೆ ತನ್ನ ಸಹಸ್ರ ಹಸ್ತಗಳಲ್ಲಿ ಹಲಗೆ, ಕತ್ತಿ, ತೋಮ, ಕುಂತ, ಮುಸಲ, ಮುದ್ಗಲೆ, ಚಕ್ರ, ಪ್ರಾಸ, ಪಟ್ಟಸ, ಕಠಾರಿ, ಧನಸ್ಸು, ಬಾಣಗಳನ್ನು ಹಿಡಿದು ಸಮಾನ ಶಕ್ತರಾದ ಶತರುದ್ರರೊಡನೆ ದಕ್ಷನ ಯಾಗ ಶಾಲೆಯತ್ತ ನಡೆದು ಅಲ್ಲಿ ನೆರೆದಿದ್ದ ದೇವತೆಗಳನ್ನೆಲ್ಲಾ ಹೊಡೆದೋಡಿಸಿ ಯಾಗವನ್ನು ನಾಶ ಮಾಡುತ್ತಾನೆ. ಆನಂತರದಲ್ಲಿ ಅವನ ಪ್ರಚಂಡ ಉಗ್ರತೆಯ ಕೋಪವನ್ನು ತಾಳಲಾರದೆ ದೇವಾನುದೇವತೆಗಳು ಶಾಂತವಾಗುವಂತೆ ವೀರಭದ್ರನನ್ನು ಪ್ರಾರ್ಥಿಸುತ್ತಾರೆ. ಇದರೊಂದಿಗೆ ರುದ್ರಾಧ್ಯಾಯ ಪ್ರಾರಂಭವಾಗುತ್ತದೆ.

ವೀರಭದ್ರನ ಕುರಿತು ಯಜುರ್ವೇದದ ಭಾಗವಾದ ರುದ್ರಾಧ್ಯಯದಲ್ಲಿ ಒಂದು ಶ್ಲೋಕ ಈ ರೀತಿ ಇದೆ.

ಓಂ ನಮಸ್ತೆ ರುದ್ರ ಮನ್ಯವ ಉತೋತ ಇಷವೇ ನಮಃ ।
ನಮಸ್ತೆ ಅಸ್ತುಧನ್ವನೇ ಬಾಹುಭ್ಯಾಂ ಮುತ ತೇ ನಮಃ । ಯಾತ
ಇಷು ಶ್ಶಿವತಮಾ ಶಿವಂ ಭಭೂವ ತೇ ಧನುಃ ।
ಶಿವಾಶರವ್ಯಾಯ ತವ ತಯಾ ನೋ ರುದ್ರ ಮೃಡಯ ।
ಯಾತೇ ರುದ್ರ ಶಿವಾತನೂರ ಘೋಢ ಪಾಪಕಾಶಿನೀ ।
ತಯಾನಸ್ತನು ವಾ ಶಂತಮಯಾ ಗಿರಿಶಂತಾಭಿಚಾಕಶೀ ಹಿ ॥ [೧೬]

ಎಲೈ ರುದ್ರನೇ! ನಮ್ಮ ದುಃಖಕ್ಕೆ ಕಾರಣವಾದ ದುಷ್ಟ ಶಕ್ತಿಗಳನ್ನು ನಾಶಮಾಡುವ ನಿನ್ನ ಕ್ರೋಧಕ್ಕೆ ನಮಸ್ಕಾರ. ದುಷ್ಟ ಶಕ್ತಿಗಳನ್ನು ಕೊಲ್ಲುವ ನಿನ್ನ ಬಾಣ, ಧನಸ್ಸು ಮತ್ತು ನಿನ್ನ ತೋಳುಗಳಿಗೆ ನಮಸ್ಕಾರ. ಎಲೈ ರುದ್ರನೇ! ನನ್ನ ಭಕ್ತಿಪೂರ್ವಕವಾದ ನಮಸ್ಕಾರದಿಂದ ಯಾವ ನಿನ್ನ ಬಾಣ, ಧನಸ್ಸು, ಭತ್ತಳಿಕೆ ಶಾಂತವಾಯಿತೋ ಅಂಥ ನಿನ್ನ ಬಾಣ ಧನಸ್ಸು ಬತ್ತಳಿಕೆ ನಮ್ಮನ್ನು ರಕ್ಷಿಸಲಿ. ರುದ್ರನೇ! ನಿನ್ನ ಶಾಂತವಾದ ಶರೀರವು ಸದ್ಭಕ್ತರಲ್ಲಿ ಸುಖಕರವಾಗಿ ಪ್ರಕಾಶಿಸುವಂತೆ ಆಗಲಿ ಎಂಬ ಅರ್ಥವನ್ನು ಮೇಲಿನ ಶ್ಲೋಕ ಒಳಗೊಂಡಿದೆ.

ವೀರಭದ್ರನ ವೀರತ್ವದ ಕುರಿತಾದ ರುದ್ರಾಧ್ಯಾಯದ ಮತ್ತೊಂದು ಶ್ಲೋಕ ಈ ಕೆಳಕಂಡಂತಿದೆ.

ಇಮಾಗ್ಂ ರುದ್ರಾಯ ತವಸೇ ಕಪರ್ದಿನೇ
ಕ್ಷಯದ್ ವೀರಾಯ ಪ್ರಭರಾಮ ಹೇಮತಿಂ ।
ಯಥಾ ನಶ್ಯಮಸದ್ವಿಪದೇ ಚತುಷ್ಪದೆ
ವಿಶ್ವೇ ಪುಷ್ಟಂ ಗ್ರಾಮೇ ಅಸ್ಮಿನ್ ಅನಾತುರಂ ॥ [೧೭]

ಅಂದರೆ ಶತ್ರುಗಳಿಗೆ ಭಯವನ್ನುಂಟು ಮಾಡುವವನು, ಎಲ್ಲರ ದುಃಖವನ್ನು ಹೋಗಲಾಡಿಸುವವನು (ರುದ್ರನೂ) ಆದ ಎಲೈ ವೀರನೇ! (ವೀರಭದ್ರನೇ) ನಿನಗೆ ನಮ್ಮ ಮನೋಬುದ್ದಿ ಪೂರ್ವಕವಾದ ವಿಶೇಷ ನಮಸ್ಕಾರಗಳು ಎಂಬ ಅರ್ಥವಿದೆ. ಹಾಗೇ ಮುಂದುವರಿದು ನಮ್ಮ ದ್ವಿಪದೇ–ಪುತ್ರ ಪೌತ್ರಾದಿಗಳಿಗೆ ಚತುಷ್ಪದೇ–ಗೋವು ಮುಂತಾದವುಗಳಿಗೆ ಸುಖವನ್ನುಂಟು ಮಾಡು. ನಮ್ಮ ಗ್ರಾಮ ಮತ್ತು ರಾಷ್ಟ್ರದಲ್ಲಿ ಎಲ್ಲ ಪ್ರಾಣಿಗಳು ಬಲಿಷ್ಠವೂ ರೋಗವಿಲ್ಲದವುಗಳು ಆಗುವ ಹಾಗೆ ಮಾಡು ಎನ್ನುವ ಅರ್ಥವನ್ನು ಮೇಲಿನ ಉಲ್ಲೇಖ ಹೇಳುತ್ತದೆ. ಇಂದಿಗೂ ನಮ್ಮ ಪುರಾತನ ಊರುಗಳಲ್ಲಿ ಗ್ರಾಮದ ಅಧಿದೈವವಾದ ವೀರಭದ್ರನ ದೇವಾಲಯಗಳಿರುವುದನ್ನು ಗಮನಿಸಿದರೆ ಈ ಅಂಶ ದೃಢವಾಗುತ್ತದೆ.

ಶತ್ರುನಾಶದ ಕುರಿತಾದ ವೀರಭದ್ರನ ಒಂದು ಶ್ಲೋಕ ಈ ರೀತಿ ಇದೆ.

ಮೃಡಾನೋ ರುದ್ರೋ ತನೋ ಮಯಸ್ಕೃಂದಿ ।
ಕ್ಷಯದ್ ವೀರಾಯ ನಮಸಾ ವಿಧೆಮತೇ । [೧೮]

ಅಂದರೆ ಎಲೈ ದುಃಖ ಹರನೇ! ನಮಗೆ ಲೋಕದಲ್ಲಿ ಇಹ ಸುಖವನ್ನು ಮೋಕ್ಷ ಸುಖವನ್ನು ಕೊಡು ಶತ್ರುಗಳನ್ನು ನಾಶಮಾಡುವ ವೀರನಾದ ನಿನ್ನನ್ನು ನಮಸ್ಕರಿಸುತ್ತೇವೆ ಎಂಬ ಅರ್ಥ ಇದರಲ್ಲಿದೆ. ಮತ್ತು

ಆರಾತ್ರೇ ಗೋಘ್ನ ಉತ ಪೂರುಷಘೇ
ಕ್ಷಯದ್ ವೀರಾಯ ಸುಮ್ನ ಮಸ್ಮೇತೇ ಅಸ್ತು ॥ [೧೯]

ಇದರ ಅರ್ಥ ಎಲೈ! ಲೀಲಾ ಮೂರ್ತಿಯಾದ ದೇವನೇ! ಪಶುವಂತಿದ್ದ ಪುರುಷನನ್ನು ಕೊಂದ ನಿನ್ನ ಉಗ್ರ ರೂಪ ದೂರವಾಗಲಿ. ನಿನ್ನ ಶಾಂತ ರೂಪ ಮಾತ್ರ ನಮಗಿರಲಿ ನಮ್ಮನ್ನು ಕಾಪಾಡು. ಇಂತಹ ವೀರ ಮತ್ತು ಶಾಂತ (ಭದ್ರ) ಮೂರ್ತಿಯಾದ ನಿನಗೆ ನಮಸ್ಕಾರ ಎಂದು. ಹೀಗೆ ಯಜುರ್ವೇದದ ಮಂತ್ರಗಳಲ್ಲಿ ವೀರಭದ್ರನ ಕುರಿತ ಉಲ್ಲೇಖಗಳನ್ನು ಈ ಮೇಲಿನಂತೆ ಕಾಣುತ್ತೇವೆ.

ಉಪನಿಷತ್ತುಗಳಲ್ಲಿ ರುದ್ರ (ವೀರಭದ್ರ)

ಭಾರತೀಯ ಅಧ್ಯಾತ್ಮ ಸಾಧಕರಿಗೆ ಸ್ಫೂರ್ತಿ ನೀಡಿದ ಗ್ರಂಥರಾಶಿಯೇ ಉಪನಿಷತ್ತುಗಳು. ಇವು ಎರಡು ನೂರಕ್ಕೂ ಹೆಚ್ಚು ಇದ್ದು ಮುಕ್ತಿಕೋಪನಿಷತ್ ಒಂದೇ ೧೦೮ ಉಪನಿಷತ್ತುಗಳ ಪಟ್ಟಿಯನ್ನೆ ಕೊಡುತ್ತದೆ. ಉಪನಿಷತ್ತುಗಳನ್ನು ವೇದಾಂತ, ಶೈವ, ವೈಷ್ಣವ, ಯೋಗ ಮತ್ತು ಸನ್ಯಾಸಗಳೆಂದು ವಿದ್ವಾಂಸರು ವರ್ಗೀಕರಿಸಿದ್ದಾರೆ.

ಭಾರತೀಯ ಸಕಲ ಮತಾಚಾರ್ಯರ, ಅನುಭಾವಿಗಳ, ಸಂತ, ಮಹಾಂತರ ಆಧ್ಯಾತ್ಮಿಕ ಕಲ್ಪನೆಗಳ ಮೂಲವಸ್ತು ಉಪನಿಷತ್ತು. ಜಗತ್ತು, ಜೀವಾತ್ಮ, ಪರಮಾತ್ಮ, ಮೋಕ್ಷ, ಬ್ರಹ್ಮ ಜನ್ಮಾಂತರ ಕಲ್ಪನೆಗಳಿಗೆ ಮೂಲ ಆಕರ ಉಪನಿಷತ್ತುಗಳು, ಭಾರತೀಯ ತತ್ವಶಾಸ್ತ್ರದ ಷಡ್‌ದರ್ಶನಗಳು, ಭಗವದ್ಗೀತೆ, ಬ್ರಹ್ಮಸೂತ್ರ ಹೀಗೆ ಪ್ರಸ್ತಾನತ್ರಯದ ಆಧಾರ ಸ್ತಂಭಗಳು ಕೂಡ ಇವೆ ಆಗಿವೆ. ಆಳವಾದ ಚಿಂತನೆ, ಚರ್ಚೆ, ಪರಿಕಲ್ಪನೆಗಳಿಗೆ ಮೂಲ ಆಕರಗಳು ಸಹ ಉಪನಿಷತ್ತುಗಳೆ.

ರುದ್ರನ ಹೆಸರು ಶಿವನ ಪರ್ಯಾಯ ನಾಮವಾಗಿ ಶ್ವೇತಾಶ್ವತರ ಉಪನಿಷತ್ತಿನಲ್ಲಿ ಕಂಡುಬರುತ್ತದೆ. ಉಳಿದ ಶೈವ ಉಪನಿಷತ್ತುಗಳಲ್ಲಿಯೂ ರುದ್ರನ ವರ್ಣನೆ ಬರುತ್ತದೆ. ವೇದ ಉಪನಿಷತ್ತುಗಳಲ್ಲಿ ಹಿಂದೆಯೇ ತಿಳಿಸಿದಂತೆ ವೀರಭದ್ರನ ಹೆಸರು ಬರುವುದಿಲ್ಲ. ಪುರಾಣಗಳು ಮತ್ತು ಆಗಮಗಳಲ್ಲಿ ಮಾತ್ರ ಪವಾಡಪುರುಷನಾಗಿ ಪತ್ನಿ ಸಮೇತವಾಗಿ(ಭದ್ರಕಾಳಿ) ಚಿತ್ರಿತನಾಗಿದ್ದಾನೆ. ಶ್ವೇತಾಶ್ವತರಃದ ಒಂದು ಮಂತ್ರ ಹಿಗಿದೆ.

ಏಕೋರುದ್ರೋನ ದ್ವಿತೀಯಾ ತಸ್ತು

ಹಿಮಾಂದು ಲೋಕಾನಿ ಶತಈಶನೀಭೀಹಿ

ಪುತ್ಯಜ್ಮನಾಂ ತಿಷ್ಠತಿ ಸಂಚುಕೋಚಾಂತಿ ಕಾಲೇ

ಸಂಸೃಜ್ಯಾ ವಿಶ್ವಭುವನಾನಿ ಗೋಪಾ.[೨೦]

ಅಂದರೆ ರುದ್ರನು ಒಬ್ಬನೇ ಮತ್ತೊಬ್ಬನಿಲ್ಲ. ಇವನು ತನ್ನ ಶಕ್ತಿಗಳಿಂದ ಲೋಕವನ್ನು ಆಳುತ್ತಾನೆ. ಮತ್ತು ಜನರಲ್ಲಿ ಅಂತರ್ಯಾಮಿಯಾಗಿ ನೆಲೆಸಿರುತ್ತಾನೆ. ಇವನೇ ಲೋಕಗಳನ್ನೆಲ್ಲ ಸೃಷ್ಟಿಸಿ ರಕ್ಷಕನಾಗಿರುತ್ತಾನೆ. ಮತ್ತು ಪ್ರಳಯ ಕಾಲದಲ್ಲಿ ಸಂಹಾರಕನಾಗುತ್ತಾನೆ ಎಂಬ ಅರ್ಥ ಈ ಶ್ಲೋಕದಲ್ಲಿದೆ.

ಶ್ವೇತಾಶ್ವತರಃದ ಮತ್ತೊಂದು ಮಂತ್ರವು
ವಿಶ್ವಾಧಿಕೋ ಋಷಿ ರುದ್ರೋ ಮಹಾನ್
ಯೋ ದೇವಾನಾಂ ಪ್ರಥಮಂ ಪುರಸ್ತಾತ್
ವಿಶ್ವಾಧಿಕೋ ರುದ್ರೋ ಮಹಾಋಷಿ (ತ್ರೈತರೀಯ ಉಪನಿಷತ್)
ವಿಶ್ವತಶ್ಚಕ್ಷು ರುತ ವಿಶ್ವತೋಮುಖ
ವಿಶ್ವತೋ ಬಾಹೂ ರುತ ವಿಶ್ವತಶ್ಚಸ್ಯಾತ್
ಸಂಬಾಹುಭ್ಯಾಂ ಸನುತಿ ಸಂಪತ್‌ತ್ರೈ
ದ್ಯಾವ ಭೂಮಿ ಜನಯದ್ ದೇವಾ ಏಕಃ ಎಂದು ಹೇಳುತ್ತದೆ.[೨೧]

ಈ ಮಂತ್ರವು ರುದ್ರನು ಎಲ್ಲ ಕಡೆಯಲ್ಲಿ ಕಣ್ಣುಗಳನ್ನು ಮುಖಗಳನ್ನು ಪಾದಗಳನ್ನು ಹೊಂದಿರುತ್ತಾನೆ. ಲೋಕಗಳನ್ನು ಸೃಷ್ಟಿಸಿ ಕೈಗಳಿಂದ ರಕ್ಷಿಸುತ್ತಾನೆ ಎನ್ನುವ ಅರ್ಥನೀಡುತ್ತದೆ.

ಶ್ವೇತಾಶ್ವತರಃದ ಐದನೇ ಶ್ಲೋಕ ಈ ಕೆಳಕಂಡಂತೆ ಮುಂದುವರಿಯುತ್ತದೆ.

ಯಾತೇ ರುದ್ರ ಶಿವಾತನು ರಘೋರಾ ಪಾಪಕಾಶಿನಿ
ತಯಾನಸ್ತನುವ ಶಂತಮಯ ಗಿರಿಶತಾಂಬಿ ಚಾಕಸೀಹಿ.[೨೨]

ಅಂದರೆ ಹೇ ರುದ್ರ ಗಿರೀಶಂತ ಮಂಗಳಮಯವು ಅಘೋರವು, ಪುಣ್ಯಪ್ರಕಾಶಕವು ಪೂರ್ಣಾನಂದ ರೂಪವು ಆದ ನಿನ್ನ ಶರೀರದ ಮೂಲಕ ನಮ್ಮನ್ನು ನೋಡು ಇಲ್ಲಿ. ಇಲ್ಲಿ ಗಿರೀಶಂತ ಅಂದರೆ ಗಿರಾಸ್ಥಿತ್ವ ಶಂ ಸುಖಂ ಕರೋತಿತಿ ಗಿರೀಶಿಂತಃ ಅಂದರೆ ಗಿರಿಯಲ್ಲಿದ್ದುಕೊಂಡು ಸುಖವನ್ನು ಮಾಡುವವನು ಎಂದು ಅರ್ಥ. ಇದೇ ಭಾಗದಲ್ಲಿರುವ ಆರನೆಯ ಶ್ಲೋಕವು ಇಂತಿದೆ.

ಯಾಮಿಷುಂ ಗಿರೀಶಂತ ಹಸ್ತೇ. ಭಿರ್ಭರ್ಷಸ್ತವೇ
ಶಿವಾಂ ಗಿರಿತ್ರ ತಾಂ ಕುರು ಮಾಯಂಸಿ ಪುರಷಂಜಗತ್.[೨೩]

ಇದರಲ್ಲಿ ಹೇ ಗಿರೀಶಂತ (ರುದ್ರ) ಜನರ ಮೇಲೆ ಪ್ರಯೋಗಮಾಡಲು ಬಾಣಗಳನ್ನು ನಿನ್ನ ಕೈಯಲ್ಲಿ ಧರಿಸಿರುವೆ. ಮನುಷ್ಯರನ್ನಾಗಲಿ, ಜಗತ್ತನ್ನಾಗಲಿ ಹಿಂಸಿಸಬೇಡ ಎಲ್ಲರಿಗೂ ಮಂಗಳವನ್ನುಂಟು ಮಾಡು ಎನ್ನುವ ಅರ್ಥವಿದೆ.

ಮಹೋಪನಿಷತನಲ್ಲಿ ವೀರಭದ್ರನ ಕುರಿತು ಉಲ್ಲೇಖ ಈ ರೀತಿ ಇದೆ.

ಯಾಏವಂ ವೇದಾ ನಃ ಶಿವಃ ರುದ್ರ ಏವ ರುದ್ರಃ
ಪ್ರಾಣಲಿಂಗಿಂ ನ್ಯಾನೋ ಭವತಿ
ಶಿವಸ್ವರೂಪ ರುದ್ರ ಅವನೀ ಪ್ರಾಣಲಿಂಗೀ ಮತ್ತಾರು ಅಲ್ಲ (ರುದ್ರೋಪನಿಷತ್)
ಸರ್ವೋವೈ ರುದ್ರಃ (ಮಹೋಪನಿಷತ್)[೨೪]

ಚರ್ಮಾಂಬರೋ ಮಹಾವೀರೋ ವೀರಭದ್ರ ಬಬುವ
ಸ ಏಕೋ ರುದ್ರಃ ದ್ಯೇಯಃ ಸರ್ವೇಷಾಂ ಸರ್ವಸಿದ್ದಯೇ
ತಸ್ಮೈ ರುದ್ರಾಯ ನಮೋ ಅಸ್ತು (ಶರಭೋಪನಿಷತ್)[೨೫]

ಎಂದು ಶರಭೋಪನಿಷತ್ ವೀರಭದ್ರನ ಕುರಿತು ಉಲ್ಲೇಖಿಸುತ್ತದೆ. ಅಂದರೆ ಚರ್ಮಾಂಭರಧರ ಮಹಾವೀರ ವೀರಭದ್ರ ಅವನೇ ಒಬ್ಬ ರುದ್ರ ಸರ್ವರಿಗೂ ಸಿದ್ಧಿಯನ್ನುಂಟು ಮಾಡುವವನು ಆ ರುದ್ರನಿಗೆ ನಮಸ್ಕಾರ ಎಂದರ್ಥ.

ಶೈವ ಉಪನಿಷತ್‌ನ ಅನೇಕ ಭಾಗಗಳಲ್ಲಿ ವೀರಭದ್ರನ ಶ್ಲೋಕಗಳು ಈ ಕೆಳಗಿನ ರೀತಿಯಲ್ಲಿವೆ. ಅಂದರೆ ಲಿಂಗರೂಪಿಯಾದ ರುದ್ರನೇ ಜಗತ್ತಿನ ಸೃಷ್ಠಿಕರ್ತ. ಅವನೇ ಸಕಲ ಜೀವರಾಸಿಗಳನ್ನು ನೋಡಿಕೊಳ್ಳುವಾತ ಅವನೇ ಬ್ರಹ್ಮ. ಅವನು ಅಘೋರ ರೂಪ ಹೊಂದಿದವನು ಎಂದೆಲ್ಲ ಅಂಶಗಳನ್ನು ಈ ಮಂತ್ರಗಳಿಂದ ತಿಳಿದುಕೊಳ್ಳಬಹುದು.

ರುದ್ರೋಲಿಂಗ ಉಮಾಪೀಠ ತಸ್ಮೈ ತಸ್ಮೈ ನಮೋ ನಮಃ
ರುದ್ರೋಲಿಂಗ ಉಮಾವಾಣಿ ತಸ್ಮೈ ತಸ್ಮೈ ನಮೋ ನಮಃ
ರುದ್ರೋಲಿಂಗ ಉಮಾವಲ್ಲಿ ತಸ್ಮೈ ತಸ್ಮೈ ನಮೋ ನಮಃ
ರುದ್ರೋಲಿಂಗ ಉಮಾಪೀಠ ತಸ್ಮೈ ತಸ್ಮೈ ನಮೋ ನಮಃ
(ರುದ್ರ ಹೃದಯೋಪನಿಷತ್)[೨೬]

ರುದ್ರನೇ ಬ್ರಹ್ಮ ಪಾರ್ವತಿಯೇ ವಾಣಿ ಅವನಿಗೆ ನಮಸ್ಕಾರ
ರುದ್ರನೇ ಹಗಲು ಪಾರ್ವತಿ ರಾತ್ರಿ ಅವನಿಗೆ ನಮಸ್ಕಾರ
ರುದ್ರನೇ ವೃಕ್ಷಾ ಪಾರ್ವತಿ ಬಳ್ಳಿ ಅವನಿಗೆ ನಮಸ್ಕಾರ
ಯಾತ ಈಶು ಶಿವತಮಾ ಶಿವಂ ಬಹುವತೇ ಧನುಃ
ಶಿವಶರ್ವ್ಯಾಯ ತವತಯಾನೋ ವೃಡ ಜೀವಸೇ

ಯಾತೇ ರುದ್ರಾ ಶಿವಾತನು ಅಘೋರ ಪಾಪಕಾಶೀನೀ

(ನೀಲರುದ್ರೋಪನಿಷತ್)[೨೭]

ಅಘೋರ ರೂಪನು ಧನಸ್ಸನ್ನು ಧರಿಸಿದವನು
ಪಾಪ ನಾಶಕನೂ ಆದ ರುದ್ರನಿಗೆ ನಮಸ್ಕಾರ
ಬ್ರಹ್ಮಾಮರಕ ಇತ್ಯಕ್ತೋ ವಿಷ್ಣುಃ ಕುಂಭಕ ಉಚ್ಚತೇ
ರೇಚೋ ರುದ್ರ ಈತಿ ಪ್ರೋಕ್ತಾಃ ಪ್ರಣಿಯಾಂ ಅಸ್ಯದೇವತಃ

(ಧ್ಯಾನ ಬಿಂದೂಪನಿಷತ್)[೨೮]

ಧ್ಯಾನ ಬಿಂದೂಪನಿಷತ್‌ನ ಅರ್ಥ ಈ ಮುಂದಿನಂತೆ ಇದೆ. ಯೋಗದ ಪರಿಭಾಷೆಯಲ್ಲಿ ಪ್ರಾಣಾಯಾಮದ ವಿಧಾನ ಅತ್ಯಂತ ಮಹತ್ವದ್ದು ಬ್ರಹ್ಮಪೂರಕನಾಗಿ, ವಿಷ್ಣು ಕುಂಭಕನಾಗಿ ರುದ್ರನು ರೇಚಕನಾಗಿ ಇರುತ್ತಾರೆ. ಪ್ರಾಣಾಯಾಮದ ಈ ದೇವತೆಗಳಿಗೆ ನಮಸ್ಕಾರ. ನಂತರ ಶಿವಸಂಕಲ್ಪೋಪನಿಷತ್ ಮುಂದುವರಿಯುತ್ತದೆ.

ಯೋ ರುದ್ರೋ ವಿಶ್ವಾ ಧುವನಾ ವಿವೇಷಾ ತಸ್ಮೈ ರುದ್ರಾಯ ನಮೋಸ್ತು

ತಸ್ಮ್ಯ ನಮಃ ಶಿವ ಸಂಕಲ್ಮ ಮಸ್ತು (ಶಿವಸಂಕಲ್ಪೋಪನಿಷತ್ ಶ್ಲೋ–೩೫)[೨೯]

ಇದರಲ್ಲಿ ರುದ್ರನು ವಿಶ್ವವ್ಯಾಪಕವಾಗಿ ನೆಲೆಸಿದ್ದಾನೆ ಅಂತಹ ರುದ್ರನಿಗೆ ನಮಸ್ಕಾರ. ಅವನಲ್ಲಿ ನಮ್ಮ ಮನಸ್ಸು ನೆಲೆಸಲಿ ಎಂಬ ಅರ್ಥವಿದೆ. ಹೀಗೆ ಶೈವೋಪನಿಷತ್ತುಗಳಲ್ಲೂ ರುದ್ರನ ಕುರಿತು ವರ್ಣನೆಯನ್ನು ಕಾಣುತ್ತೇವೆ.

ಪುರಾಣಗಳಲ್ಲಿ ವೀರಭದ್ರ

ವೀರಭದ್ರನಿಗೆ ಸಂಬಂಧಿಸಿದ ಕಥೆ ಪುರಾಣ ಪ್ರಸಿದ್ಧವಾದುದು. ಶಿವಪುರಾಣ, ಲಿಂಗಪುರಾಣ ಮತ್ತು ಭಾಗವತ ಪುರಾಣಗಳಲ್ಲಿ ಈ ಕಥೆಯು ವಿಸ್ತೃತವಾಗಿ ಬಂದಿದೆ. ವಾಯುಪುರಾಣ ಹಾಗೂ ಸ್ಕಂದಪುರಾಣಗಳಲ್ಲೂ ಸಹ ವೀರಭದ್ರನ ಉಲ್ಲೇಖವಿದೆ. ಶಿವಪುರಾಣದಲ್ಲಿ ವೀರಭದ್ರನ ಕುರಿತು ಈ ಕೆಳಗಿನ ಉಲ್ಲೇಖವಿದೆ.

ವೀರಭದ್ರೋ ಮಹಾತೇಜಾ । ಹಿಮಕುಂದೇಂದು ಸನ್ನಿಭಃ

ಭದ್ರಕಾಳೀ ಪ್ರಿಯೋ ನಿತಂ । ಮಾತೃಣಾಮಭಿರಕ್ಷಕಃ[೩೦]

ಭಾಗವತ ಪುರಾಣದಲ್ಲಿ ಬರುವ ವೀರಭದ್ರನ ಕುರಿತಾ ಕಥೆಯು ಇಂತಿದೆ. ಒಮ್ಮೆ ಬ್ರಹ್ಮನು ಎಲ್ಲಾ ಪ್ರಜಾಪತಿಗಳಿಗೆ ಅದಿಪತಿಯನ್ನಾಗಿ ದಕ್ಷನನ್ನು ನೇಮಿಸುತ್ತಾನೆ. ಇದರಿಂದ ಗರ್ವಿತನಾದ ಅವನು ಶಿವ ಮತ್ತು ಶಿವಭಕ್ತರನ್ನು ಆಹ್ವಾನಿಸದೆ "ಬೃಹಸ್ಪತಿ ಸವ" ಎಂಬ ಹೆಸರಿನ ಯಜ್ಞವನ್ನು ಆರಂಭಿಸುತ್ತಾನೆ. ಈ ಯಜ್ಞದಲ್ಲಿ ಪಾಲ್ಗೊಳ್ಳಲು ಋಷಿಮಹರ್ಷಿ ದೇವತೆಗಳೆಲ್ಲರೂ ತಮ್ಮ ಪರಿವಾರ ಸಮೇತರಾಗಿ ಆಕಾಶಮಾರ್ಗದ ಮೂಲಕ ಹೋಗುತ್ತಿರುವಾಗ, ದಕ್ಷಯಜ್ಞ ವೈಭವದ ಬಗ್ಗೆ ಪರಸ್ಪರ ಮಾತನಾಡಿಕೊಳ್ಳುವುದನ್ನು ದಾಕ್ಷಾಯಣಿಯು ಕೇಳಿಸಿಕೊಳ್ಳುತ್ತಾಳೆ. ಕೂಡಲೇ ತನ್ನ ತವರು ಮನೆಯಲ್ಲಿ ಜರುಗುವ ಮಹೋತ್ಸವದಲ್ಲಿ ಪಾಲ್ಗೊಳ್ಳುವ

ಇಚ್ಛೆಯನ್ನು ಶಿವನ ಎದುರಿನಲ್ಲಿ ವ್ಯಕ್ತಪಡಿಸುತ್ತಾಳೆ. ಆದರೆ ಶಿವನು ಮುಂದೆ ನಡೆಯಲಿರುವ ಅಪಮಾನದ ವಿಷಯವನ್ನು ತಿಳಿಸಿ ಅಲ್ಲಿಗೆ ತಾವಿಬ್ಬರು ಹೋಗುವುದು ತರವಲ್ಲವೆಂದು ನಾನಾ ಬಗೆಯಾಗಿ ಹೇಳುತ್ತಾನೆ. ಆದರೆ ಶಿವನ ಅಂತಹ ಬುದ್ಧಿವಾದವನ್ನು ಕೇಳದ ದಾಕ್ಷಾಯಣಿಯು ತನಗೆ ಆಹ್ವಾನವಿಲ್ಲದಿದ್ದರೂ ತನ್ನ ತವರು ಮನೆಗೆ ಶಿವನ ಸಹಸ್ರಾರು ಗಣಗಳೊಂದಿಗೆ ತೆರಳುತ್ತಾಳೆ.[೩೦]

ದಾಕ್ಷಾಯಣಿಯನ್ನು ಯಜ್ಞಮಂಟಪದಲ್ಲಿ ನೋಡುತ್ತಿದ್ದಂತೆಯೇ ದಕ್ಷನಿಗೆ ಕೋಪ ಬಂದು ಶಿವನಿಂದನೆಯನ್ನು ಮಾಡಲು ಆರಂಭಿಸುತ್ತಾನೆ. ಇದರಿಂದ ನೊಂದ ಅವಳು ನಿನ್ನಿಂದ ಜನಿಸಿರುವ ಈ ಶರೀರವನ್ನು ನಾನು ತ್ಯಜಿಸುತ್ತೇನೆ ಎಂದು ಹೇಳಿ ಯೋಗಾಜ್ಞೆಯ ಮೂಲಕ ದೇಹತ್ಯಾಗ ಮಾಡುತ್ತಾಳೆ. ಸತಿದೇವಿಯ ಇಂತಹ ಪ್ರಾಣತ್ಯಾಗವನ್ನು ನೋಡಿದ ಶಿವಗಣಗಳು ದಕ್ಷನನ್ನು ಸಂಹರಿಸಲು ಮುಂದಾದರು. ಆಗ ಭೃಗು ಮಹರ್ಷಿಯು 'ಅಪಹತಂ ರಕ್ಷಃ ಇತ್ಯಾದಿ ಮಂತ್ರವನ್ನು ಪಠಿಸುತ್ತ ಅಗ್ನಿಗೆ ಆಹುತಿಯನ್ನು ಅರ್ಪಿಸಿದನು. ಆಗ 'ಋಭು' ಎಂಬ ದೇವತೆಯು ಯಜ್ಞ ಕುಂಡದಿಂದ ಆವಿರ್ಭವಿಸಿ ಶಿವನ ಎಲ್ಲ ಗಣಗಳನ್ನು ಸಂಹರಿಸಿದನು.

ನಾರದರಿಂದ ಸತಿ ದೇವಿಯ ಮರಣ ಮತ್ತು ಶಿವಗಣಗಳ ಪರಜಯದ ಸಮಾಚಾರವನ್ನು ಕೇಳಿದ ಭಗವಾನ್ ಶಿವನು ಕೋಪಾವಿಷ್ಟನಾಗಿ ಹಲ್ಲುಗಳನ್ನು ಕಚ್ಚುತ್ತಾ ತನ್ನ ಜಟೆಯನ್ನು ಕೊಡವಿದನು. ಆ ಜಟೆಯಿಂದ ವಿಶಾಲಕಾಯನಾದ ವೀರಭದ್ರನು ಉತ್ಪನ್ನನಾದನು. ಆತನ ಕೇಶರಾಶಿಯು ಪ್ರಜ್ವಲಿಸುವ ಅಗ್ನಿಯಂತೆಯೂ, ಕೋರಳಿನಲ್ಲಿ ಮುಂಡಮಾಲೆಯನ್ನು, ಕೈಗಳಲ್ಲಿ ತ್ರಿವಿದ ಶಸ್ತ್ರಾಸ್ತ್ರಗಳನ್ನು ಹಿಡಿದಿರುವವನು. ಆದ ವೀರಭದ್ರನು ಶಿವನಿಗೆ ನಮಸ್ಕರಿಸಿ ತಾನು ಎಸಗಬೇಕಾಗಿರುವ ಕಾರ್ಯವಾವುದು? ಅಪ್ಪಣೆ ಮಾಡಬೇಕೆಂದು ಪ್ರಾರ್ಥಿಸಿದನು. ಆಗ ಶಿವನು "ಹೇ ವೀರಭದ್ರ ನೀನು ನನ್ನ ಅಂಶಭೂತನು ಶೀಘ್ರವಾಗಿ ಹೋಗಿ ದಕ್ಷ ಯಜ್ಞವನ್ನು ಧ್ವಂಸಗೊಳಿಸಿ ದಕ್ಷನನ್ನು ಸಂಹರಿಸು" ಎಂದನು. ಕೂಡಲೇ ವೀರಭದ್ರನು ಸಹಸ್ರಾರು ಗಣಗಳೊಂದಿಗೆ ದಕ್ಷಾ ಯಜ್ಞ ಮಂಟಪದತ್ತ ಧಾವಿಸಿದನು. ಈತನ ಅಟ್ಟಹಾಸವನ್ನು ನೋಡಿದ ದಕ್ಷ ಪತ್ನಿಯಾದ ಪ್ರಸೂತಿ ಹಾಗೂ ಇತರ ಸ್ತ್ರೀಯರು ಉದ್ವಿಗ್ನರಾಗಿ ಸತಿದೇವಿಯ ಅಪಮಾನದಿಂದ ಉಂಟಾದ ಪಾಪದ ಫಲವಿದು. ಆತನನ್ನು ಸಂಹರಿಸದೇ ಬಿಡುವುದಿಲ್ಲ ಮುಂತಾಗಿ ಮಾತನಾಡಿಕೊಂಡರು. ಅಷ್ಟರಲ್ಲಿ ರುದ್ರಗಣಗಳು ಯಜ್ಞಮಂಟಪದ ನಾಲ್ಕು ದಿಕ್ಕುಗಳನ್ನು ಆವರಿಸಿ ಯಜ್ಞಮಂಟಪವನ್ನು ಧ್ವಂಸಗೋಳಿಸಿದರು.

ರುರುಜುರ್ಯಜ್ಞ ಪಾತ್ರಾಣಿ ತಥೈಕೇ ಗ್ನೀನನಾಶಯನ್।

ಕುಂಡೇಷ್ವ ಮೂತ್ರಯನ್ ಕೇಚಿದ್ ಬಿಬೀದುರ್ವೇದಿಮೇಖಲಾಂ॥[೩೧]

ಅಂದರೆ ಕೆಲವರು ಯಜ್ಞಪಾತ್ರೆಯನ್ನು ಬಿಸಾಡಿದರೆ ಮತ್ತೊಬ್ಬನು ಅಗ್ನಿಯನ್ನು ನಂದಿಸಿದನು. ಯಾರೋ ಒಬ್ಬನು ಅಗ್ನಿಕುಂಡದಲ್ಲಿ ಮೂತ್ರ ವಿಸರ್ಜನೆ ಮಾಡಿದನು. ಮತ್ತೆ ಕೆಲವರು ಯಜ್ಞದ ವೇದಿಕೆಯನ್ನು ಧ್ವಂಸಗೊಳಿಸಿದರು ಎಂದು ಮೇಲಿನ ಶ್ಲೋಕ ವಿವರಿಸುತ್ತದೆ.

ವೀರಭದ್ರನು ಅಲ್ಲಿದ್ದ ಋಷಿ ಮುನಿಗಳ ದೇವತೆಗಳ ಅಂಗಾಂಗಳನ್ನು ಕತ್ತರಿಸಿದನು. ದಕ್ಷನ ತಲೆಯನ್ನು ತೀಕ್ಷ್ಣವಾದ ಆಯುಧದಿಂದ ಕತ್ತರಿಸಿ ಅನ್ನಯೇ ಸ್ವಹಾ ಎಂದು ಮಂತ್ರವನ್ನು ಉಚ್ಚರಿಸುತ್ತಾ ದಕ್ಷಿಣಾಗ್ನಿಗೆ

ಅದನ್ನು ಅರ್ಪಿಸಿದನು, ವೀರಭದ್ರನ ಇಂತಹ ಕೃತ್ಯವನ್ನು ಎಲ್ಲರೂ ಮೆಚ್ಚಿದರು. ಕೊನೆಯಲ್ಲಿ ವೀರಭದ್ರನು ಯಜ್ಞಮಂಟಪದ ಅಗ್ನಿಯನ್ನು ತೆರೆದುಕೊಂಡು ಕೈಲಾಸಕ್ಕೆ ಹೋದನು.೩೩ ಈ ರೀತಿ ಭಾಗವತ ಪುರಾಣದಲ್ಲಿ ವೀರಭದ್ರಾವತರಣ ಲೀಲೆಯು ಪ್ರತಿಪಾದಿತವಾಗಿದೆ.

ವೀರಭದ್ರನಿಗೆ ಸಂಬಂಧಿಸಿದ ಕಥೆಯು ಶಿವನ ಶರಭಲೀಲೆಯ ಸಂದರ್ಭದಲ್ಲಿಯೂ ಬಂದಿತು. ಅದು ಶಿವಪುರಾಣ ಮತ್ತು ಲಿಂಗಪುರಾಣಗಳಲ್ಲಿ ವಿಸ್ತೃತವಾಗಿ ನಿರೂಪಿತವಾಗಿದೆ. ಮೊದಲಿಗೆ ಶಿವಪುರಾಣ (ಉತ್ತರಾರ್ಧ) ಏಳನೆಯ ಖಂಡ ಇಪ್ಪೊತ್ತೊಂದನೇಯ ಅಧ್ಯಾಯದಲ್ಲಿ ನಿರೂಪಿತವಾಗಿರುವ ಶಿವನ ಶರಭಾವತಾರ ಲೀಲೆಯನ್ನು ಪ್ರಸ್ತುತ ಪಡಿಸಲಾಗುವುದು.[೩೪]

ವಾಯುಪುರಾಣದಲ್ಲಿ ವೀರಭದ್ರ

ವಾಯುಪುರಾಣದ ಒಂದು ಶ್ಲೋಕವು ವೀರಭದ್ರನನ್ನು ಕೆಳಗಿನಂತೆ ಉಲ್ಲೇಖಿಸಿದೆ.

ವೀರಭದ್ರ ಮಹಾಶೂರೋ ರೌದ್ರೋ ರುದ್ರಾವ ತಾರಕಃ
ಭದ್ರಕಾಳೀ ಪತಿರ್ಭದೋ ಭದ್ರಕ್ಷಾ ಭರಣಾಯ್ದಿತಃ
ಸರ್ವಸಿದ್ದಿ ಕರೋದಾಂತೋ ಸಕಲಾಗಮ ಶೋಭಿತಃ [೩೫]

ಅಂದರೆ ವೀರಭದ್ರ ಇದೊಂದು ಸನಾತನ ಹಿಂದೂ ಸಾಂಸ್ಕೃತಿಕ ಪರಂಪರೆಯಲ್ಲಿ ಅಪಾರ ಹಿರಿಮೆ, ತಾತ್ವಿಕ, ಸತ್ವ ಮತ್ತು ವೈಚಾರಿಕ ಪ್ರಜ್ಞೆಗಳು ಸಮನ್ವಯಗೊಂಡ ನಾಮ ಅದು ಅವಿಸ್ಮರಣಿಯ, ನಿತ್ಯ ಸ್ಮರಣೀಯ. ಶಿವಗಣದ ಸೇನಾನಿ ರುದ್ರಗಣದಲ್ಲಿ ಆಗ್ರಗಣ್ಯ, ಭದ್ರಕಾಳೀ ಪತಿಭದ್ರ ಧರ್ಮರಕ್ಷಣಾ ದುರಂಧರ. ದುರಹಂಕಾರ ಭಂಜಕನಾಗಿರುವವನೇ ವೀರಭದ್ರ ಎಂದು ವರ್ಣಿಸಿದೆ.

ಲಿಂಗಪುರಾಣದಲ್ಲಿ ವೀರಭದ್ರ

ಲಿಂಗಪುರಾಣದ ಶ್ಲೋಕ ಮತ್ತು ಅದರ ಅರ್ಥ ಕೆಳಕಂಡಂತಿದೆ.

ರುದ್ರಸ್ಯತನಯೋ ರೌದ್ರಶ್ಶೂಲಾಸಕ್ತ ಮಹಾಕರಃ
ಸಹಸ್ರಬಾಹುಃ ಸರ್ವಜ್ಞ ಸರ್ವಾಯುಧ ದರಃ
ಗಣೇಶ್ವರೋ ಯಸ್ಯೇನಾನಿಸಮೇಪಾಪಂ ವ್ಯಪೋಹತು.[೩೬]

ಅಂದರೆ ಲಿಂಗಪುರಾಣದ ಈ ಉಕ್ತಿ ಹಾಗೂ ಕೃತಿಯ ಆರಂಭದ ವ್ಯಾಯುಪುರಾಣದ ಉಕ್ತಿಗಳನ್ನು ಗಮನಿಸಿದಾಗ ವೀರಭದ್ರಯಾರು? ಆತನ ಮೂಲವೇನು? ಹಾಗೂ ಆತನ ವ್ಯಕ್ತಿತ್ವ ಹೇಗಿದೆ ಎಂಬ ಅರಿವಾಗುತ್ತದೆ. ವೀರಭದ್ರ ರುದ್ರನ ಮಗ. ಅದಕ್ಕಾಗಿಯೇ ರೌದ್ರ ಎನ್ನುವುದು ಮೂಲ ಹೆಸರು. ಆತ ಶಿವನ ಸಮಕಾಲೀನ. ಶಿವನಿಗೆ ಪ್ರೀತಿಯ ಶಿಷ್ಯ ರುದ್ರಗಣದ ಸೇನಾಧ್ಯಕ್ಷ, ತನ್ನ ತಂದೆ ರುದ್ರದೇವನ ವೀರತ್ವ ಹಾಗೂ ಗುರುಶಿವನ ಭದ್ರತ್ವಗಳೆರಡರ ಸಮನ್ವಯ ಶಕ್ತಿ ಪಡೆದುದರಿಂದ ಆತನಿಗೆ ಬಂದ ಹೆಸರು ವೀರಭದ್ರ. ರುದ್ರ-ಶಿವ, ಲೌಕಿಕ-ಅಲೌಕಿಕ, ತಂದೆಯರನ್ನು ಪ್ರತಿನಿಧಿಸುವ ಸಮನ್ವಯ ನಾಮ ವೀರಭದ್ರ.

ಸ್ಕಂದ ಪುರಾಣದಲ್ಲಿ ವೀರಭದ್ರ

ಲಿಂಗಾರ್ಚನಯುಕ್ತೋಸೌ ವೀರಭದ್ರೋ ಭವತ್ತದಾ
ತದ್ರೂಪಸ್ಯೈವ ಲಿಂಗಸ್ಯಯೇನ ಸರ್ವಮಿದಂ ಜಗತ್[೩೭]

ವೀರಭದ್ರ ಸೃಷ್ಟಿ, ಸ್ಥಿತಿ, ಲಯಕಾರಣ ಅವನು ಲಿಂಗರೂಪಿಯೂ ಹೌದು ಮತ್ತು ಶ್ರೀಗುರುವೂ ಹೌದು. ಅಂದರೆ ಮೂರು ಗುಣಗಳ ಮಹೇಶ್ವರತ್ವ ಅವನದಾಗಿದೆ. ಅವನು ಎಷ್ಟಾದರೂ ಸಾಂಪ್ರದಾಯಿಕವಾಗಿ ಹೇಳುವ ಪರಶಿವನ ೧೨ನೇ ಲೀಲೆಯಾಗಿರುವಲ್ಲಿ ಈ ಗುಣಗಳ ವಿಶಿಷ್ಟ ಸ್ವರೂಪ ಅವನಿಗಿದೆ.

ವೀರಭದ್ರೋ ಯಥಾ ರುದ್ರಸ್ತ್ವನೇಚ ಗುರುವಃ ಸ್ಮೃತಾಃ

ಗುರುರ್ಜ್ಞಾತಾಶ್ವ ಗುರವೋ ವಿಖ್ಯಾತಾ ಭುವನತ್ರಯೇ

ಅಂದರೆ ಗುರು ಸಂಪ್ರದಾಯಕ್ಕೆ ಸನಾತನರು ರುದ್ರ–ಭದ್ರರು. ಇವರಿಂದ ಗುರು ವರ್ಗ ಅಸಂಖ್ಯಾತವಾಗಿ ಅಭಿವೃದ್ಧಿಯಾಗಿ ವಿಶ್ವವಿಖ್ಯಾತಿಯಾಯಿತು. ಅಂತಾಗಿ ವೀರಭದ್ರನು ವೀರಶಿವನಾಗಿ ಹೆಸರಾಂತನಾದನು. ಇದನ್ನು ನೃಸಿಂಹಪೂರ್ವತಾಪಿನ್ಯುಪನಿಷತ್ ಕೂಡ ಒಪ್ಪಿಕೊಂಡಿದೆ[೩೮]. ಹೀಗೆ ಸ್ಕಂದ ಪುರಾಣದಲ್ಲಿ ವೀರಭದ್ರನ ಬಗ್ಗೆ ಉಲ್ಲೇಖವಿದೆ.

ಆಗಮಗಳಲ್ಲಿ ವೀರಭದ್ರ

ಪ್ರಾಚೀನ ಸಂಸ್ಕೃತ ಸಾಹಿತ್ಯಗಳಲ್ಲಿ ಒಂದಾದ ಆಗಮಗಳಲ್ಲೂ ಸಹ ವೀರಭದ್ರನ ಉಲ್ಲೇಖಗಳನ್ನು ಕಾಣುತ್ತೇವೆ. ಯಾವ ಭಾಗ ವೈದಿಕ ಆಚರಣೆಗಳನ್ನು ವಿವರಿಸುತ್ತದೋ ಅದೇ ಆಗಮವಾಗುತ್ತದೆ.[೩೯] ಇಪ್ಪತ್ತೆಂಟು ಶಿವಾಗಮಗಳಲ್ಲಿ ಒಂದಾದ ಸೂಕ್ಷ್ಮಾಗಮದ ಕ್ರಿಯಾಪಾದ ದ್ವಿತೀಯ ಪಟಲದಲ್ಲಿ ಸದ್ಗುಣ–ನಿರ್ಗುಣ ಸ್ವರೂಪಿಯಾದ ಪರಮೇಶ್ವರನಿಗೆ ಅನೇಕ ರೂಪಗಳಿದ್ದು, ಅವುಗಳಲ್ಲಿ ಮುಖ್ಯವಾದ ರೂಪಗಳನ್ನು ಮತ್ತು ಆ ರೂಪದಾರಿಯಾಗಲು ಕಾರಣಗಳನ್ನು ನಿರೂಪಿಸುವ ಸಂದರ್ಭದಲ್ಲಿ ಪರಶಿವನ ೨೮ ರೂಪ (ಲೀಲೆ) ಗಳನ್ನು ಪ್ರತಿಪಾದಿಸಲಾಗಿದೆ. ಆ ೨೮ ಲೀಲೆಗಳಲ್ಲಿ ವೀರಭದ್ರಾವತರಣ (ವೀರಭದ್ರನ ಜನನ) ಲೀಲೆಯು ಒಂದು. ಅದನ್ನು ಸೂಕ್ಷ್ಮಾಗಮವು ಹೀಗೆ ನಿರೂಪಿಸಿದೆ.

ದಕ್ಷಃ ಪ್ರಜಾಪತಿಃ ಪೂರ್ವಂ ಶಿವಂ ತ್ಯಕ್ತ್ವಾತಿ ಮೋಹಿತಃ ।
ಹಯಮೇದೇನ ವೈ ವಿಷ್ಣುಂ ಯಷ್ಟುಂ ಸಮುಪಚಕ್ರಮೇ ॥
ವೀರಭದ್ರಾಕೃತಿರ್ಭೂತ್ವಾ ಭದ್ರಕಾಲೀಪ್ರಿಯಃ ಶಿವಃ ।
ತಥಾವಿಸ್ಯ ಯಜ್ಞಸ್ಯ ವೈಕಲ್ಯಮಕರೋತ್ತದಾ ।
ವೀರಭದ್ರಾವತರಣಂ ತಸ್ಮಾತ್ ಸ ಪ್ರೋಕ್ತಂ ಪಿನಾಕಿನಃ ॥[೪೦]

ಅಂದರೆ ಬಹಳ ಹಿಂದೆ ದುರಹಂಕಾರಿಯಾದ ದಕ್ಷ ಪ್ರಜಾಪತಿಯು ಶಿವನನ್ನು ಬಿಟ್ಟು (ಶಿವನನ್ನು ಆಹ್ವಾನಿಸದೆ) ಅಶ್ವಮೇಧಯಾಗದಿಂದ ವಿಷ್ಣುವನ್ನು ಆರಾಧಿಸಲು ತೊಡಗುತ್ತಾನೆ. ಈ ವಿಷಯವನ್ನು ತಿಳಿದ ಭದ್ರಕಾಳಿ (ಸತಿ) ಪ್ರಿಯನಾದ ಶಿವನು ವೀರಭದ್ರವತರಣವನ್ನು ತಾಳಿ ದಕ್ಷಯಜ್ಞವನ್ನು ನಾಶಪಡಿಸುತ್ತಾನೆ. ಆ ಕಾರಣದಿಂದ ಶಿವನಿಗೆ ವೀರಭದ್ರ ಅವತರಣ ಎಂಬ ಹೆಸರು ಬಂದಿದೆ ಎಂಬ ಅರ್ಥವಿದೆ.

ವೀರಾಗಮದಲ್ಲಿ ಬರುವ ಶ್ಲೋಕವು ವೀರಭದ್ರನನ್ನು ಈ ರೀತಿಯಾಗಿ ಉಲ್ಲೇಖಿಸಿದೆ.

ವೀರಾಮಾಹೇಶ್ವರಾಚಾರ ವೀರಭದ್ರಾಯ ತೇ ನಮಃ ।
ಅಶೇಷ ಪ್ರಮಥಾಚಾರ ಗುರುಣಾಂ ಗುರವೇ ನಮಃ ॥

ಊರ್ಧ್ವ ಮೂಲಾಯ ಊರ್ಧ್ವಸ್ಥ ಪಿಂಗಕೇಶಾಯ ತೇ ನಮಃ ।
ಉಪಮನ್ಯುದಧೀಚ್ಯತ್ರಿ ಶಿವಸೂತ್ರಾಯ ತೇ ನಮಃ ॥
ವೀರಭದ್ರೋಯಥಾ ರುದ್ರಸ್ವನ್ಯೇ ಚ ಗುರವಃ ಸ್ಮೃತಾಃ ।
ಗುರೋರ್ಜ್ಞಾತಾಶ್ಚ ಗುರವೋ ವಿಖ್ಯಾತಾ ಭುವನತ್ರಯೇ ॥ [೪೧]

ಅಂದರೆ ವೀರ ಮಾಹೇಶ್ವರಾಚಾರಕ್ಕೆ ಗುರುವೂ ಸಮಸ್ಥ ಪ್ರಮಥರಿಗೆ ಗುರುವು ಎಲ್ಲ ಗುರುಗಳಿಗೂ ಗುರುವಾದ ವೀರಭದ್ರನಿಗೆ ನಮಸ್ಕಾರ ಕಂದು ಬಣ್ಣದ ಕೂದಲಿನವನೂ ಉಪಮನ್ಯು, ದಧೀಚಿ, ಅತ್ರಿ ಮುನಿಗಳ ಶಿವಸೂತ್ರವನ್ನು ಅಂದರೆ ಇಷ್ಟಲಿಂಗವನ್ನು ಅನುಗ್ರಹಿಸಿದ ವೀರಭದ್ರನಿಗೆ ನಮಸ್ಕಾರನ ಎಂದು ವರ್ಣಿಸಿದೆ. ಇಲ್ಲಿ ಹೇಳಲಾಗಿರುವ 'ವೀರಮಾಹೇಶ್ವರ' ಎಂದರೆ ವೀರಶೈವ ಜಂಗಮರು (ಮಹೇಶ್ವರ ದಿಕ್ಷೆಯನ್ನು ಪಡೆದ ವೀರಶೈವರು) ವೀರಭದ್ರನು ಉಪಮನ್ಯು, ದಧೀಚಿ, ಅತ್ರಿ ಮೊದಲಾದ ಮಹರ್ಷಿಗಳಿಗೆ ಗುರುವಾದವನು. ಶಿವಸೂತ್ರಾಯ ಎಂದರೆ ಶಿವಾದಾರ ಅರ್ಥಾತ್ ಇಷ್ಟಲಿಂಗವನ್ನು ದೇಹದ ಮೇಲೆ ಧರಿಸಲು ಬಳಸುವ ೩೬ ಎಳೆಗಳ ದಾರ. ಇದರಿಂದ ವೀರಭದ್ರನು ಇಷ್ಟಲಿಂಗದಾರಿಯಾಗಿದ್ದು, ವೀರಶೈವರ ಅಧಿದೇವತೆ ಎಂಬುದ ಸ್ಪಷ್ಟವಾಗುತ್ತದೆ. ವೀರಾಗಮದ ಭದ್ರಕವಚದಲ್ಲಿ ಹೇಳಿರುವಂತೆ ಇಲ್ಲಿ ವೀರಾ, ನಂದಿ, ವೃಷಭ, ಬೃಂಗಿ, ಸ್ಕಂದ, ಎಂಬ ಐವರು ಶಿವನ ಸ್ವರೂಪರಾದ ಗೋತ್ರಾಧಿಕಾರಿಗಳು ಹುಟ್ಟಿದರು.೪೨ ಎಂಬ ಉಲ್ಲೇಖವಿದೆ. ಕಾರಣಾಗಮದಲ್ಲಿ ವೀರಭದ್ರನು ಪರಮೇಶ್ವರನಿಗೆ ಸಮನಾದ ಗುಣವುಳ್ಳ ಗಣಪುರುಷ, ಮಯಾಂಜನ ಗುಣವಿಲ್ಲದ ಮಹಾತೇಜೋವಂತ ಎಂಬುದಾಗಿ ಹೇಳಲಾಗಿದೆ.

ಶಾಸನಗಳಲ್ಲಿ ವೀರಭದ್ರ

ಕನ್ನಡ ನಾಡಿನ ಅನೇಕ ಶಾಸನಗಳಲ್ಲಿ ವೀರಭದ್ರನ ಕುರಿತ ಉಲ್ಲೇಖಗಳು ದೊರೆಯುತ್ತವೆ. ಇದಕ್ಕೆ ಕಾರಣ ವೀರಭದ್ರ ಪರಂಪರೆ ನಮ್ಮ ನಾಡಿನಲ್ಲಿ ಧಾರ್ಮಿಕ ಪರಂಪರೆಯ ದೊಡ್ಡ ಶಾಖೆಯಾಗಿದೆ. ನಮ್ಮ ಜನಪದರು ವೀರಭದ್ರನನ್ನು ಕೇವಲ ಒಬ್ಬ ದೇವರನ್ನಾಗಿ ನೋಡದೆ, ಪುರಾಣ ಪುರುಷನನ್ನಾಗಿ ನೋಡದೆ, ಐತಿಹಾಸಿಕ ವ್ಯಕ್ತಿಯನ್ನಾಗಿಯೂ ಪರಿಕಲ್ಪಿಸಿಕೊಂಡಿದ್ದಾರೆ. ಅದರಲ್ಲೂ ಶರಣ ಸಂಸ್ಕೃತಿಯಲ್ಲಿ ಧರ್ಮ ರಕ್ಷಕನೆಂದು ಶಿವಮತ ಪ್ರಚಾರಕನೆಂದು ಉಗ್ರಧರ್ಮಾಭಿಮಾನಿಯೆಂದು ಗುರುತಿಸಿ ಅದರಂತೆ ಅವನ ಬಗ್ಗೆ ಕಥೆಗಳನ್ನು ಹೆಣದಿದ್ದಾರೆ. ವೀರಭದ್ರನ ಜನನ, ಅವನ ಕಾರ್ಯಕ್ಷೇತ್ರ, ಅವನು ಕೈಗೊಂಡ ಕಾರ್ಯಗಳು ಅದರ ಪರಿಣಾಮವನ್ನು ಶರಣಧರ್ಮದೊಂದಿಗೆ ವಿಶಿಷ್ಟವಾಗಿ ಬೆಸೆಯಲಾಗಿದೆ. ಧಾರ್ಮಿಕ ವಿಧಾನದಲ್ಲಿ ವೀರಭದ್ರನಿಗೆ ಸಂಬಂಧಿಸಿದ ಅನೇಕ ಆಚರಣೆಗಳನ್ನು ಇಂದಿಗೂ ಆಚರಿಸುತ್ತಿದ್ದಾರೆ. ಇದರ ಪರಿಣಾಮವಾಗಿ ಕನ್ನಡ ನಾಡಿನ ನೂರಾರು ಶಾಸನಗಳಲ್ಲಿ ವೀರಭದ್ರನನ್ನು ವಿಭಿನ್ನ ಆಯಾಮಗಳಲ್ಲಿ ಚಿತ್ರಿಸಿದ್ದಾರೆ.

ಕ್ರಿ.ಶ. ೪ನೇ ಶತಮಾನದಿಂದ ೨೦ನೇ ಶತಮಾನದವರೆಗೂ ಕಂಡು ಬರುವ ಶಾಸನಗಳಲ್ಲಿ ವೀರಭದ್ರನ ಉಲ್ಲೇಖ ಇರುವುದನ್ನು ಕಾಣುತ್ತೇವೆ. ಇಂತಹ ವೀರಭದ್ರ ಬಾಣ, ಬಾದಾಮಿ ಚಾಲುಕ್ಯ, ಚೋಳ, ಕದಂಬ, ಹೊಯ್ಸಳ, ವಿಜಯನಗರ ಮತ್ತು ಮೈಸೂರು ಅರಸರ ಶಾಸನಗಳಲ್ಲಿ ಹೆಚ್ಚು ಉಲ್ಲೇಖಿತನಾಗಿದ್ದಾನೆ. ಶಾಸನಗಳ ಪಾಠ ಸಂಕ್ಷಿಪ್ತವಾಗಿರುವುದರಿಂದ ವೀರಭದ್ರನ ವರ್ಣನೆ ಸಂಕ್ಷಿಪ್ತವಾಗಿರುತ್ತದೆ. ದಾನಕಾರ್ಯಗಳಲ್ಲಿ, ಶೌರ್ಯದ ವರ್ಣನೆಗಳಲ್ಲಿ ಹೆಸರಿನ ಉಲ್ಲೇಖ ಮಾತ್ರವಿರುತ್ತದೆ. (ಈ ವೀರಭದ್ರನ ಆಚರಣೆ ಪ್ರಾಚೀನ

ಕಾಲದಿಂದ ಇವರೆಗೆ ಆಚರಣೆಯಲ್ಲಿದ್ದರೂ ಶಾಸನಗಳಲ್ಲಿ ಆ ಆಚರಣೆ ಬಗ್ಗೆ ವಿವರಗಳಾಗಲಿ, ಮಾಹಿತಿಗಳಾಗಲಿ ಇಲ್ಲ. ಇದಕ್ಕೆ ಕಾರಣವೇನೆಂದು ತಿಳಿದುಬಂದಿಲ್ಲ). ಆರಂಭದ ಶಾಸನಗಳಿಗಿಂತ ೧೪ ರಿಂದ ೧೬ನೇ ಶತಮಾನದ ಅವಧಿಯ ಶಾಸನಗಳಲ್ಲಿ ವೀರಭದ್ರನ ಉಲ್ಲೇಖ ಹೆಚ್ಚು ಇದೆ.[೪೩]

ಇದುವರೆಗೂ ಲಭ್ಯವಾಗಿರುವ ಶಾಸನಗಳಲ್ಲಿ ವೀರಭದ್ರನ ಮೊದಲ ಉಲ್ಲೇಖ ಕ್ರಿ.ಶ. ೩೩೮ ಮುಳಬಾಗಿಲು ತಾಲೂಕು ಮುದಯನೂರ ಗ್ರಾಮದ ಸಂಸ್ಕೃತ ಭಾಷೆ ತಾಮ್ರಪಟ ಶಾಸನದಲ್ಲಿದೆ.[೪೪] ಈ ತಾಮ್ರಪಟ ಶಾಸನದಲ್ಲಿ ಬಾಣ ವಂಶದ ದೊರೆಯಾದ ವೀರನಂದಿ ವರ್ಮನನ್ನು "ಶ್ರೀ ಮತ್ಬಾಣವೇಶ ಕಮಲಾಕರ ಪ್ರಭೋಧ ನಳಿನ ಕರಸ್ಯ ಸುನೋಸ್ತ್ರಿಭುವನಮಧ್ಯವರ್ತ್ತಿ ನಾಂಪ್ರಾಣೆನಾಮ್ಪುಮ ಕಾರುಣಿ ಕಥೆಯೂ ಭೋಧಿಸತ್ಪೋಪ ಮಾನಸ್ಯ ವೀರತೆಯೂ ಹರಹಿ ವೀರಭದ್ರ ಸನ್ನಿಭಸ್ಯ".... ಎಂದು ವೀರಭದ್ರನ ಶೌರ್ಯಕ್ಕೆ ಹೋಲಿಸಲಾಗಿದೆ. ಇದರಿಂದ ಈ ಕಾಲಕ್ಕಾಗಲೇ ವೀರಭದ್ರನ ಶೌರ್ಯವು ಜನಮಾನಸದಲ್ಲಿ ಪ್ರಭಾವಿಸಿದ್ದು ಕಂಡುಬರುತ್ತದೆ. ಒಬ್ಬ ಅರಸನ ಶೌರ್ಯವನ್ನು ಜನರು ವೀರಭದ್ರನ ಶೌರ್ಯಕ್ಕೆ ತುಲನೆ ಮಾಡುತ್ತಿದ್ದರೆಂದು ಕಾಣುತ್ತದೆ.

ಹಾವೇರಿ ಜಿಲ್ಲೆಯ ಕೋಳೂರು ಗ್ರಾಮದ ಕ್ರಿ.ಶ. ೧೦೪೫ರ ಶಾಸನದಲ್ಲಿ ಚಾಳುಕ್ಯ ಅರಸ ಒಂದನೇ ಸೋಮೇಶ್ವರನನ್ನು ಈ ರೀತಿ ವರ್ಣಿಸಲಾಗಿದೆ.೪೫ ಅವು ತನ್ನ ವೀರತನದಲ್ಲಿ ವೀರಭದ್ರನಿಗೆ ಸಮಾನನೆಂದು ವರ್ಣಿಸಿದೆ. ಕ್ರಿ.ಶ. ೧೦೦೭ರ ಅವಧಿಯ ನೀಲಗುಂದದ ಒಂದು ಶಾಸನದಲ್ಲಿ ಕಲ್ಯಾಣ ಚಾಳುಕ್ಯ ಆರನೇ ವಿಕ್ರಮಾಧಿತ್ಯನನ್ನು ಸ್ವಯಂಭೂ ವೀರೇಶ ದೇವರಿಗೆ ದಾನನೀಡಿದ ವಿಷಯವಿದೆ.[೪೬] ಸ್ವಯಂಭೂ ಕಲ್ಪನೆಯನ್ನು ಗಮನಿಸಿದರೆ ಈ ಕಾಲಕ್ಕಾಗಲೆ ವೀರಭದ್ರ ಜನಮಾನಸದಲ್ಲಿ ಭದ್ರವಾಗಿ ನೆಲೆಯೂರಿದ್ದನೆಂದು ತಿಳಿದು ಬರುತ್ತದೆ. ಮೂರ್ತಿ ಕಲ್ಪನೆಯನ್ನು ಮೀರಿದ್ದು ಸ್ವಯಂಭೂ ದೇವರ ಕಲ್ಪನೆ ಒಂದು ಕಲ್ಲು ಗುಂಡಿನಲ್ಲೋ, ಒರಟು ಕಲ್ಲಿನ ತುಂಡಿನಲ್ಲೋ ತಮಗೆ ಬೇಕಾದ ತಮ್ಮ ಕಲ್ಪನೆಯ ದೇವರುಗಳನ್ನು ಸೃಷ್ಠಿಸುವ ಶಕ್ತಿ ಜನಸಾಮಾನ್ಯರ ಮನಸ್ಸಿಗಿದೆ. ಹಾಗಾಗಿ ವೀರಭದ್ರ ಈ ರೂಪದಲ್ಲಿ ಕಾಣಿಸಿದ್ದಾನೆ.

ಕ್ರಿ.ಶ. ೧೧೬೬ರ ಮುದ್ದನಗೆರೆಯ ಶಾಸನದಲ್ಲಿ "ಸ್ವಸ್ತಿ ಶ್ರೀ ಮನ್ಮಮಹಾಮಹಿಮನಪ್ಪ ಶ್ರೀ ಕೈಲಾಸ ಪುರವರಾಧೀಶ್ವರಂ ದೇವಲೋಕದ ದೇವಗಣಂಗಳು ವೀರಭದ್ರ....... ಸ್ವಸ್ತಿಶ್ರೀ ...... ಎಂದು ಉಲ್ಲೇಖವಿದೆ.೪೭ ಕ್ರಿ.ಶ. ೧೧೮೫ರ ರಾಯಿಸೆಟ್ಟಿಪುರ ಶಾಸನದಲ್ಲಿ "...... ಅಸಂಖ್ಯಾತ ವೀರಭದ್ರ ದೇವರು ಮುಖ್ಯವಾದ ......" ಎಂಬಂತಹ ಉಲ್ಲೇಖವು ಬಂದಿದೆ.[೪೮]

ಕ್ರಿ.ಶ. ೧೨೦೦ರ ಅಬ್ಬಲೂರು ಶಾಸನದಲ್ಲಿ ಏಕಾಂತ ರಾಮಯ್ಯ ಜನನಕ್ಕೆ ವೀರಭದ್ರನ ಅಂಶವನ್ನು ಸೇರಿಸಲಾಗಿದೆ.೪೯ ಪ್ರಸಿದ್ದವಾದ ಸೋಮನಾಥಪುರದಲ್ಲಿ (ಅಳಂದೆ) ಪುರುಷೊತ್ತಮ ನೆಂಬ ಬ್ರಾಹ್ಮಣನಿದ್ದ ಇವನು ವ್ಯಾಸ, ಶಂಕ, ವಾಮದೇವ, ಪರಾಶರ, ಮತ್ತು ಕಪಿಲ ಮುಂತಾದ ಅನೇಕ ಮುನಿಗಳ ಪರಾವತಾರದಂತೆ ಇದ್ದನು, ಇವನ ಹೆಂಡತಿ ಪದ್ಮಾಂಬಿಕೆ ಇವರು ಪುತ್ರ ಸಂತತಿಗಾಗಿ ಶಿವನ ಮೊರೆ ಹೋಗುತ್ತಾರೆ. ಆ ಸಮಯದಲ್ಲಿ ಶಿವನ ಒಡ್ಡೋಲಗಕ್ಕೆ ಬಂದ ನಾರದನು ಜೈನ-ಬೌದ್ಧ ಧರ್ಮಿಯರಿಂದ ಶಿವಭಕ್ತಿಗೆ ತೊಂದರೆಯಾಗಿದೆ. ಇದನ್ನು ನಿವಾರಿಸೆಂದು ತಿಳಿಸುತ್ತಾನೆ. ಆಗ ಶಿವನು ತನ್ನ ಗಣಗಳಿದ್ದ ವೀರಭದ್ರನಿಗೆ ನೀನು ನಿನ್ನ ಅಂಶದಲ್ಲಿ ಭೂಲೋಕದಲ್ಲಿ ಒಬ್ಬನನ್ನು ಹುಟ್ಟಿಸಿ ಶಿವಧರ್ಮವನ್ನು ರಕ್ಷಿಸೆಂದು

ಅರ್ಪಣೆ ಕೊಡುತ್ತಾನೆ. ಅದರಂತೆ ವೀರಭದ್ರನು ಪುರುಷೋತ್ತಮನ ಕನಸಿನಲ್ಲಿ ಬಂದು ಅನ್ಯಧರ್ಮದವರನ್ನು ಬಗ್ಗು ಬಡಿಯುವ ಮಗ ನಿಮಗೆ ಹುಟ್ಟುತ್ತಾನೆಂದು ವರವನ್ನು ನೀಡುತ್ತಾನೆ. ವೀರಭದ್ರನ ವರದಿಂದ ಹುಟ್ಟುವ ಮಗನಿಗೆ ರಾಮನೆಂಬ ಹೆಸರನ್ನು ಇಡುತ್ತಾರೆ. ಮುಂದೆ ಇವನು ಜೈನರ ವಿರುದ್ದ ಹೋರಾಡಿ ಧರ್ಮ ರಕ್ಷಣೆ ಮಾಡಿದ್ದು ಜನಜನಿತ ವಿಷಯವಾಗಿದೆ. ಇಲ್ಲಿ ಗಮನಾರ್ಹ ಅಂಶವೆಂದರೆ ವೀರಭದ್ರನ ಅಂಶವಾಗಿ ರಾಮನು ಹುಟ್ಟುವುದು ಬ್ರಾಹ್ಮಣ ದಂಪತಿಗಳ ಹೊಟ್ಟೆಯಲ್ಲಿ ಅಂದರೆ ವೀರಶೈವ ಪೂರ್ವದ ಶೈವ ಧರ್ಮದಲ್ಲೂ ವೀರಭದ್ರನ ಪರಂಪರೆ ಪ್ರಬಲವಾಗಿತ್ತೆಂದು ತಿಳಿದುಬರುತ್ತದೆ ಈ ಶಾಸನ ಆಧಾರದಿಂದ ವೀರಭದ್ರನನ್ನು ಶೈವ ವೀರಶೈವ ಎರಡು ಪಂಥದವರು ತಮ್ಮ ತಮ್ಮ ಧರ್ಮರಕ್ಷಣೆಯ ನಾಯಕನನ್ನಾಗಿ ಬಳಸಿಕೊಂಡಿದ್ದಾರೆ.

ಕ್ರಿ.ಶ. ೧೧೬೩ರ ಕುಕನೂರಿನ ಒಂದು ಶಾಸನದಲ್ಲಿ ಬೊಪ್ಪದೇವನನ್ನು ವೀರಭದ್ರನು ಗುಣಾಕರನೂ ಆಗಿದ್ದನೆಂದು ಹೊಗಳಿದೆ.೫೦ ಬಳ್ಳಾರಿ ಜಿಲ್ಲೆ ಆಡುಗೊಡಿನ ಕ್ರಿ.ಶ. ೧೧೭೦ರ ಒಂದು ಶಾಸನದಲ್ಲಿ ರಾಜಮಲ್ಲ ದೊರೆಯು ನಂದಿನಾಥ, ನಂದಿ ಮಹಾಕಾಳ, ವೀರಭದ್ರ ಪ್ರಥಮ ಗಣಗಳನ್ನು ಜೊತೆಗೂಡಿ ಶಿವನು ಪ್ರತ್ಯಕ್ಷನಾದಾಗ ಅವರುಗಳ ಪೂಜೆಯನ್ನು ಮಾಡಿ ಶಂಕರನಲ್ಲಿ ಲೀನವಾದನೆಂದು ಶಾಸನ ಉಲ್ಲೇಖಿಸಿದೆ.೫೧ ಕುಡಿತಿನಿ ಗ್ರಾಮದ ಒಂದು ಶಾಸನದಲ್ಲಿ ಶಿವನ ಗಣಂಗಳ ನಡುವೆ ವೀರಭದ್ರ ಮುಂತಾದವರು ಭೇರಿ ನಿನಾದವನ್ನು ಮಾಡುತ್ತಿದ್ದರೆಂದು ವರ್ಣಿಸಿದೆ.೫೨ ಹಾಗೂ ಕ್ರಿ.ಶ ೧೨೦೭ರ ಬಳ್ಳಾರಿ ಜಿಲ್ಲೆಯ ಕುರುಗೋಡು ಶಾಸನದಲ್ಲಿ ವೀರಭದ್ರನನ್ನು ಪ್ರತಿಷ್ಠಾಪಿಸಿದ ವಿಚಾರವನ್ನು ಹೇಳಲಾಗಿದೆ.[೫೩]

ಹಾವೇರಿ ಜಿಲ್ಲೆಯ ಕಿ.ಶ. ೧೨೨೫ರ ಜೇಡದಾನಪುರದ ಶಾಸನವು ವೀರಭದ್ರ ದೇಗುಲದ ಜೀರ್ಣೋದ್ದಾರದ ವಿಷಯ ಹೇಳುತ್ತದೆ೫೪. ಕ್ರಿ.ಶ. ೧೨೯ರ ಶಾಸನದಲ್ಲಿ ಕೆಲವು ಸೆಟ್ಟಿಯರು ಕೂಡಿಕೊಂಡು ವೀರಭದ್ರನನ್ನು ಪ್ರತಿಷ್ಠಾಪಿಸಿ ಅದಕ್ಕೆ ಭೂಮಿ ಮತ್ತು ತೆರಿಗೆಗಳನ್ನು ದಾನನೀಡಿದ ವಿಷಯವಿದೆ.[೫೫]

ಅಲ್ಲದೇ ಆಂಧ್ರಪ್ರದೇಶದ ಮೆಹಬೂಬ ನಗರ ಜಿಲ್ಲೆಯ ಕ್ರಿ.ಶ. ೧೨೯ರ ಶಾಸನವು ವೀರಭದ್ರನ ಮೂರ್ತಿಯನ್ನು ಸ್ಥಾಪಿಸಿ ದತ್ತಿ ಬಿಟ್ಟ ವಿಚಾರವನ್ನು ಹೇಳುತ್ತದೆ.[೫೬] ಕ್ರಿ.ಶ. ೧೨೬೪ರ ಅರಕಲಗೂಡು ಶಾಸನವು ವೀರಭದ್ರನ ದೇಗುಲಕ್ಕೆ ಗದ್ದೆ ದಾನ ನೀಡಿದ ವಿಚಾರವನ್ನು ತಿಳಿಸುತ್ತದೆ.[೫೭] ತಳಲುತೊರೆ ಗ್ರಾಮದ ಕ್ರಿ.ಶ. ೧೨೭೮ರ ಶಾಸನದಲ್ಲಿ ಸಿಂಗೇದಣ್ಣಾಯಕನನ್ನು ಕೊಲ್ಲುವಾಗ ಹೋರಾಟ ನಡೆಸಿದ ಕಲ್ಲಯ್ಯ ಎಂಬ ವೀರನನ್ನು ವೀರಭದ್ರನು ಮೆಚ್ಚಿದ ಎಂಬ ವಿಷಯವಿದೆ.[೫೮] ಮಂಡ್ಯ ಜಿಲ್ಲೆಯ ಮಂಡಿಪುರದ ಕ್ರಿ.ಶ. ೧೨೮೦ರ ಶಾಸನವು ಹೀಗೆ ಉಲ್ಲೇಖ ಮಾಡಿದೆ. “ತಂತ್ರ ಶಿವಾಚಾರವೇ ಪಥವಾಗಿ ನಡೆಪ ರಿಷಿಗಣಂಗಳು ...... ಭಾಳಾಕ್ಷ ಹರ ಅಕ್ಷೇಶ್ವರ, ನಂದಿನಾಥ, ನಂದಿ ಮಹಾಕಾಳ, ವೀರಭದ್ರ, ಭೃಂಗಿನಾಥ, ... ದಾರುಕ ...... ರೇಣುಕ”[೫೯] ಹಾಸನ ಜಿಲ್ಲೆಯ ಕ್ರಿ.ಶ. ೧೨೮೫ರ ಬೇಲೂರಿನ ಶಾಸನವು ವೀರಭದ್ರನ ಸ್ಥಾಪನೆಯ ವಿಚಾರವನ್ನು ಹೇಳುತ್ತದೆ.[೬೦] ಕ್ರಿ.ಶ. ೧೨೮೫ರ ಬೇಲೂರಿನ ಮತ್ತೊಂದು ಶಾಸನದಲ್ಲಿ ಶಿವರಾತ್ರಿ ಮಾಯಂಣ್ಣಗಳು ಸಿದ್ದಾಪುರ ಗ್ರಾಮದ ವೀರಭದ್ರ ದೇವರಿಗೆ ಅದೇ ಗ್ರಾಮವನ್ನು ದಾನನೀಡಿದ ವಿಷಯ ತಿಳಿದು ಬರುತ್ತದೆ.[೬೧] ಇಲ್ಲಿ ಉಲ್ಲೇಖವಾದ ಶಿವರಾತ್ರಿ ಮಾಯಂಣ್ಣನು ಒಬ್ಬ ಶರಣನಿರಬೇಕು. ಇವನಿಗೆ ಶಿವರಾತ್ರಿ ಎಂಬುದು ವಿಶೇಷಣವಾಗಿ ಬಂದಿರಬೇಕು.

ಕ್ರಿ.ಶ. ೧೩೪೦ರ ತೊಂಡವಾಡಿ ಶಾಸನದಲ್ಲಿ ಕೊಲ್ಲಿಪಾಕಿ ರಾಚವಟ್ಟಿ ವೀರಭದ್ರರ ಉಲ್ಲೇಖವಿದೆ.[೬೨] ಕಾರವಾರ ಜಿಲ್ಲೆಯ ಬನವಾಸಿ ಮದುಕೇಶ್ವರ ದೇವಾಲಯದ ಆವರಣದಲ್ಲಿರುವ ಕ್ರಿ.ಶ. ೧೩೬೯ರ ವೀರಭದ್ರನ ಗುಡಿಯ ಶಾಸನವು ವಿರುಪಣ್ಣ ಒಡೆಯರ ಮಹಾಪ್ರಧಾನ ಮಾದರಸ ಒಡೆಯರು ವೀರಭದ್ರನಿಗೆ ಭೂಮಿದಾನ ನೀಡಿದ ವಿಷಯವನ್ನು ಹೇಳಿದೆ.[೬೩] ವಿಳಲಿಯಪ್ಪ ಎಂಬುವವನು ಪೆನುಗೊಂಡೆಯ ಕೋಟೆಯೊಳಗಡೆ ಚೆನ್ನವೀರಭದ್ರ ದೇವಾಲಯದ ಪಶ್ಚಿಮ ಬಾಗಿಲಿನ ಗೋಪುರವನ್ನು ನಿರ್ಮಿಸಿದನೆಂದು ಶಾಸವೊಂದು ತಿಳಿಸುತ್ತದೆ.[೬೪] ಇದರಿಂದ ಈ ಹೊತ್ತಿಗಾಗಲೆ ವೀರಭದ್ರ ಭಿನ್ನ ಹೆಸರುಗಳಲ್ಲಿ ಅಥವಾ ವಿಶೇಷಣಗಳಲ್ಲಿ ಬಳಕೆಯಾಗುತ್ತಿದ್ದನೆಂದು ತಿಳಿದು ಬರುತ್ತದೆ.

ಹಲವಾರು ಶಾಸನಗಳಲ್ಲಿ ವೀರಭದ್ರನನ್ನು ಪ್ರಾಸಂಗಿಕವಾಗಿ ಮತ್ತು ಮುಖ್ಯವಾಗಿ ವರ್ಣಿಸಲಾಗಿದೆ. ನಮ್ಮ ಜನಮಾನಸದಲ್ಲಿ ವೀರಭದ್ರನು ಪಡೆದ ಸ್ಥಾನವನ್ನು ಇವು ನಿರ್ದೇಶಿಸುತ್ತವೆ. ಧರ್ಮದ ರಕ್ಷಕನಾಗಿ, ಧರ್ಮದ ಸಂಕೇತವಾಗಿ ವೀರಶೈವರ ಸ್ವಾಭಿಮಾನದ ಪ್ರತೀಕವಾಗಿ, ಜನಪದರ ಭಕ್ತಿಯ ಮೂರ್ತಿ ರೂಪವಾಗಿ ವೀರಭದ್ರನು ಪರಿವರ್ತನೆಯಾಗಿರುವುದನ್ನು ಕನ್ನಡ ನಾಡಿನ ಹಲವು ಶಾಸನಗಳು ತೋರಿಸಿಕೊಡುತ್ತವೆ.

ವೀರಭದ್ರನ ಕುರಿತು ಸಾಹಿತ್ಯ ಕೃತಿಗಳು

ವೀರಭದ್ರನ ಕಥಾವಸ್ತುವನ್ನು ಒಳಗೊಂಡ ಅನೇಕ ಕೃತಿಗಳು ಕನ್ನಡ ಸಾಹಿತ್ಯದ ರಗಳೆ. ಷಟ್ಪದಿ, ಚಂಪೂ, ಭಾಮಿನಿ ಮತ್ತು ಸಾಂಗತ್ಯಗಳಲ್ಲಿ ರಚನೆಗೊಂಡಿವೆ. ವೀರಭದ್ರನ ಕಥಾವಸ್ತುವು ಸ್ಕಂದಾದಿ ಪುರಾಣಗಳಿಂದಲೂ ಸಂಗ್ರಹಿಸಲ್ಪಟ್ಟಿದ್ದು, ಮೊದಲು ಇದನ್ನು ಕನ್ನಡದಲ್ಲಿ ಬರೆದವನು ಹರಿಹರ (ವೀರಭದ್ರ ದೇವರ ರಗಳೆ). ನಂತರ ಅದನ್ನು ರಾಘವಾಂಕ ವೀರೇಶ ಚರಿತೆ ಎಂದು ಬರೆದಿದ್ದಾರೆ. ಕವಿ ವೀರಭದ್ರ ರಾಜನಲ್ಲಿ (ಕ್ರಿ.ಶ. ೧೫೩೦) ವೀರಭದ್ರ ವಿಜಯವಾಗಿ ಇದು ಚಂಪೂ ಶೈಲಿಯಲ್ಲಿ ರಚಿಸಲ್ಪಟ್ಟಿತು ಹಾಗೂ ಷಡಕ್ಷರ ಕವಿಯಲ್ಲಿ (೧೬೫೫) ವೀರಭದ್ರ ದಂಡಕವಾಗಿ ಬಂದಿದೆ. ಕರ್ಣಪಾರ್ಯನ (ಕ್ರಿ.ಶ. ೧೧೫೦) ವೀರೇಶ ಚರಿತ್ರೆ, ಶಾಂತವೀರ ವಿರಚಿತ (೧೬೦೦) ವೀರಭದ್ರ ಲೀಲಾರತ್ನ, ಚೆನ್ನಣ್ಣ ಕವಿಯ (ಕಿ.ಶ. ೧೬೫೦) ವೀರೇಶ್ವರ ಚರಿತ್ರೆ, ಸೋಮ ಕವಿಯ (೧೭೦೦) ವೀರಭದ್ರ ಸಾಂಗತ್ಯ, ವಿರೂಪಣ್ಣ ಕವಿಯ ವೀರಭದ್ರ ಕಲ್ಯಾಣ ಅಥವಾ ಭದ್ರಕಾಳಿ ವಿವಾಹ. ಚೆಲುವನ ವೀರಭದ್ರ ಚರಿತ ಕೃತಿಗಳು (೧೭೭೫) ಪ್ರಮುಖವಾದವುಗಳು. ಇದಲ್ಲದೆ ನಿಶ್ಚಂತಾತ್ಮರೂ ಸಹ ವೀರಭದ್ರನ ಕುರಿತು ಕೃತಿ ರಚಿಸಿದ ಉದಾರಣೆಗಳಿವೆ. ಅಲ್ಲದೇ ವೀರಭದ್ರ ವಿಜಯ (೧೫೩೦), ದಕ್ಷಾದ್ವರ ಧ್ವಂಸ ಚರಿತ್ರೆ, (೧೭೫೦) ದಕ್ಷಾದ್ವರ ವಿಜಯ (೧೬೫೦ –೧೭೯೦), ದಕ್ಷಾದ್ವರ ಕಥೆ (ಯಕ್ಷಗಾನ ೧೭೦೪–೧೮೬೮) ಮತ್ತು ವೀರೇಶ ತಾರಾವಳಿಗಳಲ್ಲದೆ ಅಳಿಯ ಲಿಂಗರಾಜನ ಕೃತಿ ವೀರಭದ್ರ ಶತಕ, ಮಡಿವಾಳ ಮಾಚಯ್ಯನ ತಾರಾವಳಿ, ವೀರಭದ್ರಷ್ಟಕ, ವೀರಭದ್ರ ದೇವರ ಖಡ್ಗ ಮುಂತಾದವು ವೀರಭದ್ರನನ್ನೆ ಕೇಂದ್ರವಾಗಿ ಇಟ್ಟುಕೊಂಡು ಕನ್ನಡದಲ್ಲಿ ರಚನೆಗೊಂಡ ಕೃತಿಗಳಾಗಿವೆ.[೬೫] ಕೆಳದಿ ಬಸವಭೂಪಾಲನ ಶಿವತತ್ವರತ್ನಾಕರ ಎಂಬ ಸಂಸ್ಕೃತ ವಿಶ್ವಕೋಶದಲ್ಲೂ ವೀರಭದ್ರನ ಪ್ರಸ್ತಾಪ ಕಂಡುಬರುತ್ತದೆ. ಇಷ್ಟೇ ಅಲ್ಲದೆ ವೀರಭದ್ರನ ಕುರಿತು ನೂರಾರು ಕಾವ್ಯ ಕೃತಿಗಳು, ಒಡಬುಗಳು ಮತ್ತು ವಚನಗಳು ರಚನೆಯಗಿವೆ.

ವಚನಗಳಲ್ಲಿ ವೀರಭದ್ರ

ಬಸವಣ್ಣ ಮೊದಲುಗೊಂಡು ಅನೇಕ ಶಿವಶರಣರು ರುದ್ರ, ವೀರಭದ್ರರನ್ನು ತಮ್ಮ ವಚನಗಳಲ್ಲಿ ಉಲ್ಲೇಖಿಸಿದ್ದಾರೆ. ಪ್ರಾಯಶಃ ಅವರು ವೀರಭದ್ರನನ್ನು ಪೌರಾಣಿಕ ಹಿನ್ನಲೆಯಲ್ಲಿ ನೋಡಿ ಅವನ ಮಹತ್ವನ್ನು ಎತ್ತಿ ತೋರಿಸಿದ್ದಾರೆ. ವೈದಿಕರನ್ನು ಬಗ್ಗುಬಡಿಯಲು ರುದ್ರವೀರಭದ್ರರು ಮಾಡಿದ ಅಮೋಘ ಕಾರ್ಯವನ್ನು ಅವರು ಮನಸಾರ್‍ಥೆ ಪ್ರಶಂಸೆ ಮಾಡಿದ್ದಾರೆ. ಏಕದೇವೋಪಾಸನೆಗೆ. ಇಷ್ಟಲಿಂಗೋಪಾಸನೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಅವರು ನೀಡಿದ್ದರಿಂದ ಶಿವನ ಗಣಂಗಳಿಗೆ ವಿಶೇಷ ಸ್ಥಾನವನ್ನು ಶರಣರು ನೀಡಿದಂತಿಲ್ಲ. ಆದರೆ ಸ್ವತಂತ್ರ ವಿಚಾರವಾದಿಗಳಾದ ಶಿವಶರಣರು ಶಿವಯೋಗಿ ವೀರಭದ್ರನನ್ನು ಸ್ಮರಿಸಿದ್ದಷ್ಟೆ ಅಲ್ಲ ಸ್ತುತಿ ಮಾಡಿದ್ದು ನೋಡಿದರೆ ವೀರಭದ್ರನ ಮಹತ್ವ ಇವರಿಗೆ ಮನವರಿಕೆ ಆಗಿತ್ತು ಎಂದೇ ಭಾವಿಸಬೇಕಾಗುತ್ತದೆ. ವೀರಭದ್ರನನ್ನು ಜಗಜ್ಯೋತಿ ಬಸವಣ್ಣನವರು ತಮ್ಮ ವಚನಗಳಲ್ಲಿ ಪ್ರಶಂಸಿಸಿದ್ದಾರೆ. ಅವರ ಒಂದು ವಚನ ಹೀಗಿದೆ.

"ಕೂಡಲ ಸಂಗಮ ದೇವನು ದಕ್ಷನ ಕೆಡಿಸಿದುದ ಮರೆದಿರಲ್ಲಾ
ವಿಷಯಟ್ಟಟಿ ಸುಡುವಲ್ಲಿ ವೀರಭದ್ರ ಬಡಿವಲ್ಲಿ
ಕೂಡಲ ಸಂಗಯ್ಯಂಗೆ ಶರಣೆಂದು ಮೊರೆಯಿಟ್ಟರೆಲ್ಲರು"

"ದಕ್ಷಯಾಗವ ನಡೆಸಲೆಂದು ಅಜಮುಖ್ಯರಾದ ಸುರರೆಲ್ಲ
ನೆರೆದು ಬಂದ ಬಾಯ ನೋಡಾ
ಬಾಯ ತಪ್ಪಿಸಿ ಉಣಬಂದ ದೈವದ ಚೆಂದ ಬಾಯ ನೋಡಾ
ಉಣ್ಣದೆ ಉಡದೆ ಹೊಗೆಯ ಕೈಯಲ್ಲಿ ಸತ್ತ ಅಣ್ಣಗಳ ಕೇಡ ನೋಡಾ
ಕೂಡಲ ಸಂಗಮದೇವಾ"[೬೬]

ಬಸವಣ್ಣನವರ ಈ ವಚನದಲ್ಲಿ ವೀರಭದ್ರನು ಯಜ್ಞ ಸಂಸ್ಕೃತಿಯನ್ನು ನಾಶ ಮಾಡುವಲ್ಲಿ ವಹಿಸಿದ ವಿರೋಚಿತ ಕಾರ್ಯದ ಪ್ರಶಂಸೆಯನ್ನು ಕಾಣುತ್ತೇವೆ. ಹಾಗೂ ವೀರಶೈವವನ್ನು ವಿರೋಧಿಗಳಿಂದ ರಕ್ಷಿಸಿದ ಬಗೆಯನ್ನು ಬಸವಣ್ಣನವರು ಎತ್ತಿಹಿಡಿದಿದ್ದಾರೆ. ಇವರಲ್ಲದೆ ಸಿದ್ದರಾಮ, ಅಕ್ಕಮಹಾದೇವಿ, ಶರಣೆ ಸತ್ಯಕ್ಕ, ಶರಣೆ ಮಹಾದೇವಿಯಕ್ಕನವರ ವಚನೆಗಳಲ್ಲೂ ವೀರಭದ್ರನ ವರ್ಣನೆ ಕಂಡುಬರುವುದು.

೩.೩ ಬೇಲೂರು ಪರಿಸರದ ವೀರಭದ್ರ ಪರಂಪರೆ

ಬೇಲೂರು ತಾಲೂಕು ಐತಿಹಾಸಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಅತ್ಯಂತ ಸಮೃದ್ಧವಾದ ಪ್ರದೇಶವಾಗಿದೆ. ಸಂಸ್ಕೃತಿ ಮತ್ತು ಧರ್ಮ ಸಮನ್ವಯದ ವಿಚಾರದ ಶಿಸ್ತುಗಳಲ್ಲಿ ಬೇಲೂರಿನ ಕೊಡುಗೆ ದೊಡ್ಡದು. ನಮ್ಮ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯವು ಅನೇಕತೆಯಲ್ಲಿ ಏಕತೆಯನ್ನು ಬಿಂಬಿಸುವುದಾಗಿದ್ದು. ಕಾಲ ಪ್ರವಾಹದ ಪ್ರಭಾವದಲ್ಲಿ ಸಿಲುಕಿ ನೂರಾರು ಮತ ಪರಂಪರೆಗಳು, ಹಲವಾರು ತತ್ವಗಳು ಸಂಮಿಳಿತಗೊಂಡಿರುವುದು ಸರ್ವವಿಧಿತವಾಗಿದೆ. ಕ್ರಿ.ಶ. ೧೧–೧೨ನೇ ಶತಮಾನಗಳಲ್ಲಿ ಕರ್ನಾಟಕದ ವಿವಿಧ ಭಾಗಗಳಲ್ಲಿ ಮತೀಯ ಘರ್ಷಣೆಗಳು ನಡೆದಿದ್ದು ಆ ಕಾಲವು ಸಂಕ್ರಮಣದ ಕಾಲವಾಗಿದೆ. ಹೊಯ್ಸಳರ ರಾಜಧಾನಿ ಮತ್ತು ವಾಸ್ತುಶಿಲ್ಪದ ಪ್ರಮುಖ ಕೇಂದ್ರವಾಗಿದ್ದ ಬೇಲೂರು ಕೂಡ ಇಂತಹ ಬದಲಾವಣೆಗೆ ಒಳಪಡುತ್ತದೆ.

ಅದರಲ್ಲೂ ಮುಖ್ಯವಾಗಿ ಕ್ರಿ.ಶ. ೧೦-೧೧ನೇ ಶತಮಾನದಲ್ಲಿ ಕಾಳಾಮುಖರ ಪ್ರಭಾವದಿಂದ ಈ ಪರಿಸರದಲ್ಲಿ ಹಲವು ಜೈನ ಬಸದಿಗಳು ದೇವಾಲಯಗಳಾಗಿ ಮಾರ್ಪಾಡುಗೊಂಡವು. ಪ್ರಾಚೀನ ಕಾಲದಿಂದಲೆ ಧರ್ಮ ಸಹಿಷ್ಣುತ ತಾಣವಾಗಿದ್ದ ಬೇಲೂರು ಪರಿಸರದಲ್ಲಿ ಶೈವಧರ್ಮ ಪ್ರಬಲವಾಗಿದ್ದಿತು.

ಕ್ರಿ.ಶ. ೧೦ನೇ ಶತಮಾನದ ನಂತರ ಈ ಪ್ರದೇಶಕ್ಕೆ ವೈಷ್ಣವ ಧರ್ಮದ ಪಾದಾರ್ಪಣೆಯಾದ ಮೇಲೆ ಶೈವ ಧರ್ಮದ ಕೆಲವು ಆಚರಣೆ ಮತ್ತು ಸಂಪ್ರದಾಯಗಳು ಅತೀ ಹೆಚ್ಚು ಪ್ರಚಾರಗೊಳ್ಳುತ್ತ ಹೋದವು. ಅದರಲ್ಲಿ ಶೈವರ ವೀರತನದ ಪ್ರತೀಕವಾದ ವೀರಭದ್ರನ ಆಚರಣೆ ಕೂಡ ಒಂದಾಗಿತ್ತು. ನಂತರ ಹನ್ನೆರಡನೇ ಶತಮಾನದಲ್ಲಿ ಬಸವಣ್ಣನವರಿಂದ ವೀರಶೈವ ಧರ್ಮ (ಈ ಕುರಿತು ವಿದ್ವಾಂಸ ವಲಯದಲ್ಲಿ ಸಾಕಷ್ಟು ಭಿನ್ನಾಭಿಪ್ರಾಯಗಳಿವೆ. ಪ್ರಾರಂಭವಾದ ಮೇಲೆ, ವೀರಶೈವ ಲಿಂಗಾಯಿತರು ವೀರಭದ್ರನನ್ನು ತಮ್ಮ ಪ್ರಮುಖ ದೈವವನ್ನಾಗಿ ಆರಾಧನೆ ಮಾಡತೊಡಗುತ್ತಾರೆ. ಅಂದು ಶೈವ ಮತ್ತು ವೈಷ್ಣವ ಧರ್ಮದ ಪ್ರಚಾರಗಳಲ್ಲಿ ಶೈವಧರ್ಮ ವೀರಭದ್ರ, ಮೈಲಾರ ಮುಂತಾದ ಆಚರಣೆಗಳನ್ನು ಹುಟ್ಟುಹಾಕುವ ಮೂಲಕ ಬೇಲೂರಿನಲ್ಲಿ ತನ್ನ ಪ್ರಾಬಲ್ಯತೆಯನ್ನು ಮುಂದುವರೆಸಿಕೊಂಡು ಬಂದಿರುವುದನ್ನು ಕಾಣುತ್ತೇವೆ.

ಹೊಯ್ಸಳರು ಸೇರಿದಂತೆ ಬೇಲೂರು ಪ್ರದೇಶವನ್ನು ಆಳ್ವಿಕೆ ಮಾಡಿದ ಇತರೆ ರಾಜ ಮನೆತನಗಳು ಮತ್ತು ಇತರ ಸಣ್ಣಪುಟ್ಟ ಪಾಳೆಯಗಾರರ ಪ್ರೋತ್ಸಾಹದ ಫಲವಾಗಿ ಬೇಲೂರು ತಾಲೂಕಿನಲ್ಲಿ ಈ ಪರಂಪರೆ ತನ್ನ ಅಸ್ತಿತ್ವವನ್ನು ಉಳಿಸಿಬೆಳೆಸಿಕೊಂಡು ಬಂದಿದೆ.

ವೀರಭದ್ರ ದೇವಾಲಯಗಳು

ಬೇಲೂರು ತಾಲೂಕಿನ ಒಟ್ಟು ಗ್ರಾಮಗಳ ಶೇಕಡ ೯೫% ರಷ್ಟು ಹಳ್ಳಿಗಳಲ್ಲಿ ಶೈವದೇವಾಲಯಗಳಿರುವುದು ಕಂಡುಬರುತ್ತದೆ. ಅವುಗಳ ಪೈಕಿ ೨೩ ಗ್ರಾಮಗಳಲ್ಲಿ ವೀರಭದ್ರನ ದೇವಾಲಯಗಳಿವೆ. ಅಡಗೂರು, ಹಳೆಬೀಡು, ಪುಷ್ಪಗಿರಿ, ಸಿದ್ದಾಪುರ, ಬಿಂಡೇನಹಳ್ಳಿ, ಕ್ಯಾತಲಾಪುರ, ಹಲ್ಮಿಡಿ, ಯಮಸಂಧಿ, ಘಟ್ಟದಹಳ್ಳಿ, ದೇವಿಹಳ್ಳಿ, ಯಲಹಂಕ, ಹುಸ್ಕೂರು, ಕಲ್ಯಾಣಪುರ, ಬೆಣ್ಣೂರು, ನಾರಾಯಣಪುರ ಹೊಸಹಳ್ಳಿ, ಮಾಳೆಗೆರೆ, ಇಂಟಿತೊಳಲು, ಕಣದೂರು, ಬಕ್ಕರವಳ್ಳಿ, ಬೆಟ್ಟದಾಲೂರು, ಮತ್ತು ಗೋಣಿ ಸೋಮನಹಳ್ಳಿಗಳು ವೀರಭದ್ರನ ದೇವಾಲಯಗಳನ್ನು ಹೊಂದಿದ ಪ್ರಮುಖ ಗ್ರಾಮಗಳಾಗಿವೆ.

ಬೇಲೂರಿನಲ್ಲಿ ಕಂಡು ಬರುವ ವೀರಭದ್ರನ ೨೩ ದೇವಾಲಯಗಳ ಪೈಕಿ ಹೆಚ್ಚಿನದಾಗಿ ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡಿವೆ. ವಿಜಯನಗರ ಮತ್ತು ನಂತರದ ಕಾಲದ ಅರಸರು ಅವುಗಳನ್ನು ಜೀರ್ಣೋದ್ದಾರಗಳನ್ನು ಮಾಡುವುದರೊಂದಿಗೆ ನೂತನ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಶೆಟ್ಟಿಹಳ್ಳಿ, ಹೊಸಹಳ್ಳಿ, ಕಣದೂರು, ಗೋಣಿಸೋಮನ ಹಳ್ಳಿ, ಬೆಣ್ಣೂರು, ಮುಂತಾದವುಗಳ ಕಡೆ ವೀರಭದ್ರ ದೇವಾಲಯಗಳನ್ನು ಕೆಲವು ಸ್ಥಳೀಯರು ಇತ್ತೀಚೆಗೆ ಪುನರ್ ನವೀಕರಣವನ್ನು ಸಹ ಮಾಡಿದ್ದಾರೆ. ಹೊಯ್ಸಳ ಮತ್ತು ವಿಜಯನಗರದ ಅರಸರು ಈ ದೇವಾಲಯಗಳಿಗೆ ಅತೀ ಹೆಚ್ಚಿನ ದಾನದತ್ತಿಗಳನ್ನು ನೀಡಿದ್ದಾರೆ. ವೀರಭದ್ರನಿಗೆ ದತ್ತಿಬಿಟ್ಟ ೮ ಶಾಸನಗಳು ಈ ಪ್ರದೇಶದಲ್ಲಿ ಕಂಡುಬರುತ್ತವೆ.

೧೨ನೆಯ ಶತಮಾನದಲ್ಲಿ ವಚನ ಕ್ರಾಂತಿಯ ಕಾರಣದಿಂದ ಈ ಭಾಗದಲ್ಲಿ ವೀರಭದ್ರ ಒಂದು ಜನಸಮುದಾಯದ ಪ್ರಮುಖ ಆರಾಧ್ಯ ದೈವವಾಗಿ ನಿಲ್ಲುತ್ತಾನೆ. ಅಂದು ಹೊಯ್ಸಳರ ಆಳ್ವಿಕೆ ಈ

ಭಾಗದಲ್ಲಿತ್ತು. ಸಾಂಸ್ಕೃತಿಕ ದೃಷ್ಟಿಯಿಂದ ಹೆಚ್ಚು ಶ್ರೀಮಂತಿಕೆಯನ್ನು ಹೊಂದಿದ್ದ ಬೇಲೂರು ಪ್ರದೇಶದಲ್ಲಿ ವೀರಭದ್ರನಿಗಾಗಿ ಅತಿ ಹೆಚ್ಚಿನ ದೇವಾಲಯಗಳನ್ನು ನಿರ್ಮಿಸುತ್ತಾರೆ. ಹಳೇಬೀಡು ಹೊಯ್ಸಳರ ರಾಜಧಾನಿಯಾಗಿದ್ದ ಕಾರಣ ಅಲ್ಲಿ ಎರಡು ವೀರಭದ್ರ ದೇವಾಲಯಗಳು ತಮ್ಮ ಅಸ್ಥಿತ್ವ ಪಡೆದುಕೊಂಡಿವೆ. ಇಂದು ಅವುಗಳನ್ನು ಮುತ್ತಿನ ವೀರಭದ್ರೇಶ್ವರ ಮತ್ತು ಕರಗಲ್ಲು ವೀರಭದ್ರೇಶ್ವರ ಎಂದು ಕರೆಯುತ್ತಾರೆ. ಈ ದೇವಾಲಯಗಳು ಸೂಕ್ಷ್ಮ ಕೆತ್ತನೆಯಿಂದ ಕೂಡಿದ್ದು ಹೊಯ್ಸಳರ ಕುಸುರಿ ಕೆತ್ತನೆಯ ಕಲೆಯನ್ನು ಸಾರಿ ಹೇಳುತ್ತವೆ ಹಾಗೂ ತ್ರಿಕೂಟ ದೇವಾಲಯವಾಗಿರುವ ಕರಗಲ್ಲು ವೀರಭದ್ರಸ್ವಾಮಿ ದೇವಾಲಯವು ಕೂಡ ಹೆಚ್ಚು ಶ್ರೀಮಂತವಾಗಿದೆ.

ಹೊಯ್ಸಳರ ಮತ್ತೊಂದು ಸ್ಥಳೀಯ ಆಡಳಿತ ಕೇಂದ್ರವಾಗಿದ್ದ ಯಮಸಂಧಿಯಲ್ಲೂ ಸಹ ವೀರಭದ್ರನ ದೇವಾಲಯವಿದೆ. ಘಟ್ಟದಹಳ್ಳಿ ಎಂಬ ಪ್ರಾಚೀನ ಅಗ್ರಹಾರವೂಸಹ ವೀರಭದ್ರನನ್ನು ಆರಾಧಿಸುವ ಪ್ರಮುಖ ಕೇಂದ್ರವಾಗಿತ್ತು. ಈ ಗ್ರಾಮದಲ್ಲಿ ಹಲವಾರು ಜಾತಿಯ ಜನರು ಇದ್ದರೂ ಸಹ ಬ್ರಾಹ್ಮಣರು ಮಾತ್ರ ವೀರಭದ್ರ ದೇವರ ಧಾರ್ಮಿಕ ಆಚರಣೆಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಕನ್ನಡದ ಮೊಟ್ಟಮೊದಲ ಶಾಸನ ದೊರಕಿರುವ ಹನ್ಮಿಡಿ ಗ್ರಾಮದಲ್ಲಿ ಸಹ ವೀರಭದ್ರನ ಪ್ರಾಚೀನ ದೇವಾಲಯವಿದೆ. ಇದರಲ್ಲಿಯೇ ಕದಂಬರ ಕಾಲದ ಶಾಸನ ಇತ್ತು ಎಂಬ ಮಾಹಿತಿ ಇದೆ. ಕದಂಬರ ಆಳ್ವಿಕೆಗೆ ಒಳಪಟ್ಟ ಈ ಗ್ರಾಮದ ವೀರಭದ್ರ ದೇವಾಲಯವು ಸಹ ಪ್ರಾಚೀನವಾಗಿರಬಹುದು ಎಂದು ಅಭಿಪ್ರಾಯ ಪಡಬಹುದಾಗಿದೆ.

ಬೇಲೂರು ಪರಿಸರದ ವೀರಭದ್ರನ ಪರಂಪರೆಯಲ್ಲಿ ಎರಡು ದೇವಾಲಯಗಳು ವಿಶೇಷವಾಗಿವೆ. ಮೊದಲನೆಯದು ಈ ತಾಲೂಕಿನಲ್ಲಿ ದೇವಿಹಳ್ಳಿ ಎಂಬ ಗ್ರಾಮವಿದ್ದು ಅಲ್ಲಿ ವೀರಭದ್ರ ದೇವರ ಮೊಗವಾಡ (ಮುಖ) ವನ್ನು ಮಾತ್ರ ಇಟ್ಟು ಪೂಜಿಸಲಾಗುತ್ತಿದೆ. ಮಧ್ಯಪ್ರದೇಶದ ಉಜ್ಜಯನಿಯ ಮಹಾಕಾಲ ದೇಗುಲದ ಪಕ್ಕದಲ್ಲೂ ಕೂಡ ಇದೇ ರೀತಿಯ ದೇವಾಲಯವಿದೆ. ಅಲ್ಲಿಗೂ ಮತ್ತು ಇಲ್ಲಿಗೂ ಏನಾದರೂ ಸಂಬಂಧವಿರಬಹುದೇ ಎಂದು ಸಂಶೋಧನೆಯಿಂದ ದೃಢಪಡಬೇಕಾಗಿದೆ. ಈ ಅಂಶವನ್ನು ಗಮನಿಸಿದಾಗ ದೇವಿಹಳ್ಳಿಯ ದೇವಾಲಯವು ಕೂಡ ಪ್ರಾಚೀನ ಕಾಲದ್ದೇ ಆಗಿದೆ ಎಂದು ಊಹಿಸಬಹುದು. ಅಲ್ಲಿನ ಪರಂಪರೆ ಈ ಪ್ರದೇಶಕ್ಕೆ ಬಂದಿದೆಯೆಂದರೆ ಬೇಲೂರು ಕೂಡ ಪ್ರಾಚೀನ ಕಾಲದಲ್ಲಿ ಒಂದು ಶೈವ ಕ್ಷೇತ್ರವೇ ಇರಬಹುದು ಎಂಬ ಅಭಿಪ್ರಾಯವನ್ನು ಈ ಆಧಾರದಿಂದ ವ್ಯಕ್ತಪಡಿಸಬಹುದು.

ಎರಡನೆಯದಾಗಿ ಬೇಲೂರು ತಾಲೂಕಿನ ಹಳೇಬೀಡು ಹೋಬಳಿಯಲ್ಲಿ ಕಂಡುಬರುವ ಪುಷ್ಪಗಿರಿ ಎಂಬ ಬೆಟ್ಟದ ಮೇಲೂ ವೀರಭದ್ರನ ದೇವಾಲಯವಿದೆ. ಇಲ್ಲಿನ ಪ್ರಮುಖ ದೈವ ಮಲ್ಲಿಕಾರ್ಜುನ ಸ್ವಾಮಿಯಾದರೂ ಸಹ ಅದೇ ಬೆಟ್ಟವನ್ನು ಸಮತಳವಾಗಿಸಿ ಮತ್ತೊಂದು ಭಾಗದಲ್ಲಿ ಈ ದೇವಾಲಯನ್ನು ಕಟ್ಟಲಾಗಿದೆ. ವೀರಭದ್ರನಿಗೆ ಸಂಬಂಧಿಸಿದ ನಾಲ್ಕು ಶಾಸನಗಳು ದೇವಾಲಯದ ವಿವಿಧ ದೊರೆತಿವೆ. ೧೪ ರಿಂದ ೧೬ ನೇ ಶತಮಾನದ ಕಾಲಮಾನವನ್ನೊಳಗೊಂಡಿರುವ ಶಾಸನಗಳು ವಿಜಯನಗರ ಮತ್ತು ಸಣ್ಣ ಪುಟ್ಟ ನಾಯಕ ಮನೆತನದ ಕಾಲದಲ್ಲಿ ನೀಡಿದ ದಾನದ ಮಾಹಿತಿಯನ್ನು ಒಳಗೊಂಡಿವೆ. ಅವುಗಳಲ್ಲಿ ವೊರಂಗಲ್ಲ ವೀರಭದ್ರನ ಹೆಸರನ್ನು ಉಲ್ಲೇಖಿಸಲಾಗಿದೆ. ಪುಷ್ಪಗಿರಿಯ ವೀರಭದ್ರ ದೇವರಿಗೆ ವೊರಂಗಲ್ಲಿನ ಸ್ಥಾನವನ್ನು ನೀಡಿರುವುದನ್ನು ಗಮನಿಸಿದರೆ ಇದು ಸಹ ಒಂದು ಪ್ರಸಿದ್ಧವಾದ ಧಾರ್ಮಿಕ ಕ್ಷೇತ್ರವಾಗಿತ್ತು

ಎಂದು ಪರಿಭಾವಿಸಬಹುದಾಗಿದೆ. ಪುಷ್ಪಗಿರಿ, ಹಳೇಬೀಡು, ಸಿದ್ದಾಪುರ, ಅಡಗೂರು, ಹಲ್ಮಿಡಿ ಮತ್ತು ಕ್ಯಾತಲಾಪುರದಲ್ಲಿಯೂ ವೀರಭದ್ರನ ಕುರಿತು ಹೇಳುವ ಶಾಸನಗಳು ಲಭ್ಯವಾಗಿವೆ.

ಕೊನೆಟಿಪ್ಪಣಿ

೧. ಕಡಪಟ್ಟಿ ಎಂ.ಎನ್, ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ, ಪು. ಸಂ, ೧೧.

೨. ಮಂಜುಳಾ ಆಚಾರಿ, ಕಾಳಾಮುಖ ಪರಂಪರೆ ಮತ್ತು ಮೂರು ಜಾವಿಪೀಠ ಸಾಂಸ್ಕೃತಿಕ ಅಧ್ಯಯನ (ಅಪ್ರಕಟಿತ, ಪಿಎಚ್.ಡಿ ಮಹಾಪ್ರಬಂಧ), ಪು. ಸಂ, ೧೨-೧೩.

೩. ಅದೇ, ಪು. ಸಂ, ೧೨-೧೩.

೪. ಕಪಟರಾಳ ಕೃಷ್ಣರಾಯ, ಕರ್ನಾಟಕ ಲಾಕುಳ ಶೈವ ಇತಿಹಾಸ, ಪು. ಸಂ, ೧.

೫. ಸುನೀಲ್.ಕೆ.ಎಂ, ಪುಷ್ಪಗಿರಿ ಮಲ್ಲಿಕಾರ್ಜುನ ದೇವಾಲಯ ಮತ್ತು ಶ್ರೀಮಠದ ಒಂದು ಸಾಂಸ್ಕೃತಿಕ ಅಧ್ಯಯನ (ಅಪ್ರಕಟಿತ ಕಿರು ಪ್ರಬಂಧ) ಪು. ಸಂ, ೧೪.

೬. ಕೊಟ್ಟೂರು ಬಸವೇಶ್ವರ ಶಿವಾಚಾರ್ಯ, ವೀರಭದ್ರ ಪರಂಪರೆ ಮತ್ತು ಸಂಸ್ಕೃತಿ, ಪು.ಸಂ ೧

೭. ನಾಗರಾಜ್ ಎಂ.ಜಿ, ಮಹಾವೀರಭದ್ರ, ಪು. ಸಂ, ೨.

೮. ಅದೇ, ಪು. ಸಂ, ೨.

೯. ಅದೇ, ಪು. ಸಂ, ೩.

೧೦. ಕನ್ನಡ ವಿಷಯ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ ಪು. ಸಂ. ೧೬೧.

೧೧. ಕೊಟ್ಟೂರು ಬಸವೇಶ್ವರ ಶಿವಾಚಾರ್ಯ, ಪೂರ್ವೋಕ್ತ ಪು. ಸಂ, ೬.

೧೨. ಅದೇ, ಪು. ಸಂ, ೧೪.

೧೩. ಅದೇ, ಪು. ಸಂ, ೧೯.

೧೪. ಅದೇ, ಪು. ಸಂ, ೧೫೪.

೧೫. ಅದೇ, ಪು. ಸಂ, ೮.

೧೬. ಅದೇ, ಪು. ಸಂ, ೮.

೧೭. ಅದೇ, ಪು. ಸಂ, ೯.

೧೮. ಅದೇ, ಪು. ಸಂ, ೯.

೧೯. ಅದೇ, ಪು. ಸಂ, ೯.

೨೦. ಶ್ವೇತಾಶ್ವತರಃ, ಅಧ್ಯಾಯ ೨, ಶ್ಲೋಕ ೨.

೨೧. ಅದೇ, ಶ್ಲೋಕ ೩.

೨೨. ಅದೇ, ಶ್ಲೋಕ ೫.

೨೩. ಅದೇ, ಶ್ಲೋಕ ೬.

೨೪. ಕೊಟ್ಟೂರು ಬಸವೇಶ್ವರ ಶಿವಾಚಾರ್ಯ, ಪೂರ್ವೋಕ್ತ, ಪು. ಸಂ, ೬.

೨೫. ಅದೇ, ಪು. ಸಂ, ೪.

೨೬. ಅದೇ, ಪು. ಸಂ, ೪.

೨೭. ಅದೇ, ಪು. ಸಂ, ೪.

೨೮. ಅದೇ, ಪು. ಸಂ, ೪.

೨೯. ಅದೇ, ಪು. ಸಂ, ೪.

೩೦. ಅದೇ, ಪು. ಸಂ, ೨೮೫.

೩೧. ಶಿವಪಂಚವಿಂಶತಿಲೀಲಾ ಶತಕ, ಪು. ಸಂ, ೧೨೮.

೩೨. ಕೊಟ್ಟೂರು ಬಸವೇಶ್ವರ ಶಿವಾಚಾರ್ಯ, ಪೂರ್ವೋಕ್ತ, ಪು. ಸಂ, ೧೨೨.

೩೩. ಅದೇ, ಪು. ಸಂ, ೧೨೨.

೩೪. ಅದೇ, ಪು. ಸಂ, ೧೨೩.

೩೫. ನಾಗರಾಜ ಎಂ.ಜಿ, ಪೂರ್ವೋಕ್ತ, ಪು. ಸಂ, ೨೦.

೩೬. ಕೊಟ್ಟೂರು ಬಸವೇಶ್ವರ ಶಿವಾಚಾರ್ಯ, ಪೂರ್ವೋಕ್ತ, ಪು. ಸಂ, ೧೯.

೩೭. ಅದೇ, ಪು. ಸಂ, ೧೫.

೩೮. ಅದೇ, ಪು .ಸಂ, ೫೮.

೩೯. ಡಾ. ಶೆಲ್ವ ಪಿಳ್ಳೈ ಅಯ್ಯಂಗಾರ ಅವರ ಹೇಳಿಕೆ, (ರಾಜ್ಯ ಪುರಾತತ್ವ ಇಲಾಖೆಯ ಕರ್ನಾಟಕ ವಾಸ್ತುಶಿಲ್ಪ ವಿಚಾರ ಸಂಕಿರಣ.

೪೦. ಕೊಟ್ಟೂರು ಬಸವೇಶ್ವರ ಶಿವಾಚಾರ್ಯ, ಪೂರ್ವೋಕ್ತ, ಪು. ಸಂ, ೧೧೮.

೪೧. ಅದೇ, ಪು. ಸಂ, ೧೧೯.

೪೨. ಅದೇ, ಪು. ಸಂ, ೧೧೯.

೪೩. ಅದೇ, ಪು. ಸಂ, ೩೮೮.

೪೪. ನಾಗರಾಜ ಎಂ.ಜಿ, ಪೂರ್ವೋಕ್ತ, ಪು. ಸಂ, ೯೪.

೪೫. ಕೊಟ್ಟೂರು ಬಸವೇಶ್ವರ ಶಿವಾಚಾರ್ಯ, ಪೂರ್ವೋಕ್ತ, ಪು. ಸಂ, ೩೯೦.

೪೬. ಅದೇ, ಪು. ಸಂ, ೩೯೦.

೪೭. ನಾಗರಾಜ ಎಂ.ಜಿ, ಕಲ್ಯಾಣ ನಾಡಿನಲ್ಲಿ ವೀರಭದ್ರ ಪು. ಸಂ, ೭೩.

೪೮. ಅದೇ, ಪು. ಸಂ, ೭೩.

೪೯. ಕೊಟ್ಟೂರು ಬಸವೇಶ್ವರ ಶಿವಾಚಾರ್ಯ, ಪೂರ್ವೋಕ್ತ, ಪು. ಸಂ, ೩೯೦–೩೯೧.

೫೦. ಅದೇ, ಪು. ಸಂ, ೩೯೨.

೫೧. ಅದೇ, ಪು. ಸಂ, ೩೯೨.

೫೨. ಅದೇ, ಪು. ಸಂ, ೩೯೨.

೫೩. ನಾಗರಾಜ ಎಂ.ಜಿ, ಕಲ್ಯಾಣ ನಾಡಿನಲ್ಲಿ ವೀರಭದ್ರ, ಪು. ಸಂ, ೭೩.

೫೪. ಅದೇ, ಪು. ಸಂ, ೭೩.

೫೫. ಕೊಟ್ಟೂರು ಬಸವೇಶ್ವರ ಶಿವಾಚಾರ್ಯ, ಪೂರ್ವೋಕ್ತ, ಪು. ಸಂ, ೩೯೨.

೫೬. ಅದೇ, ಪು. ಸಂ, ೧೮೨.

೫೭. ನಾಗರಾಜ ಎಂ.ಜಿ, ಕಲ್ಯಾಣ ನಾಡಿನಲ್ಲಿ, ವೀರಭದ್ರ ಪೂರ್ವೋಕ್ತ, ಪು. ಸಂ, ೭೩.

೫೮. ಕೊಟ್ಟೂರು ಬಸವೇಶ್ವರ ಶಿವಾಚಾರ್ಯ, ಪೂರ್ವೋಕ್ತ, ಪು. ಸಂ, ೩೯೨.

೫೯. ನಾಗರಾಜ ಎಂ.ಜಿ, ಕಲ್ಯಾಣ ನಾಡಿನಲ್ಲಿ, ವೀರಭದ್ರ ಪೂರ್ವೋಕ್ತ, ಪು. ಸಂ, ೭೩.

೬೦. ಎಪಿಗ್ರಾಫಿಯ ಕರ್ನಾಟಿಕ, ಸಂ–೯, ಸಿದ್ದಾಪುರ, ಪು. ಸಂ, ೪೩೯.

೬೧. ಅದೇ, ಪು. ಸಂ, ೪೩೯.

೬೨. ಕೊಟ್ಟೂರು ಬಸವೇಶ್ವರ, ಶಿವಾಚಾರ್ಯ, ಪೂರ್ವೋಕ್ತ, ಪು. ಸಂ, ೧೬೭.

೬೩. ಅದೇ, ಪು. ಸಂ, ೧೬೮.

೬೪. ಅದೇ, ಪು. ಸಂ, ೨೯೨–೯೩.

೬೫. ಅದೇ, ಪು. ಸಂ, ೨೬೪.

೬೬. ಅದೇ, ಪು. ಸಂ, ೨೨೦.

೬೭. ಅಂತರ್ಜಾಲ ತಾಣ ಗೂಗಲ್ ಮಾಹಿತಿ.

ಅಧ್ಯಾಯ – ನಾಲ್ಕು

ಕಲೆ ಮತ್ತು ವಾಸ್ತುಶಿಲ್ಪ

೪.೧ ದೇವಾಲಯಗಳು

೪.೨ ವೀರಗಲ್ಲುಗಳು

೪.೩ ಶಾಸನಗಳು

ಅಧ್ಯಾಯ – ನಾಲ್ಕು

ಕಲೆ ಮತ್ತು ವಾಸ್ತುಶಿಲ್ಪ

೪.೧ ದೇವಾಲಯಗಳು

ಭಾರತೀಯ ಸಂಸ್ಕೃತಿಯಲ್ಲಿ ಧಾರ್ಮಿಕತೆಯ ಸಂಕೇತವಾದ ದೇವಾಲಯಗಳ ಉಗಮ ಮತ್ತು ವಿಕಾಸವನ್ನು ಗಮನಿಸುವುದಾದರೆ ಕ್ರಿ.ಶ ಕ್ಕೆ ಮುನ್ನವೇ ದೇವಾಲಯಗಳು ರಚನೆಗೊಂಡವು ಎಂದು ಹೇಳಲು ಸಾಧ್ಯವಿದ್ದರೂ ಅವುಗಳ ಸ್ವರೂಪ ವ್ಯಕ್ತವಾಗುವುದಿಲ್ಲ. ಹರಪ್ಪ, ಮೊಹೆಂಜೋದಾರೋ ಉತ್ಖನನಗಳಲ್ಲಿ ಸಾರ್ವತ್ರಿಕ ಕಟ್ಟಡಗಳನ್ನು ಗುರುತಿಸಬಹುದೇ ಹೊರತು ದೇವಾಲಯಗಳೆಂದು ಗುರುತಿಸಲಾಗುವ ಯಾವುದೇ ರಚನೆಗಳಿಲ್ಲ. ಆದರೆ ಕ್ರಿ.ಪೂ ೨ ನೇ ಶತಮಾನದಲ್ಲಿ ವಿದಿಶಾ ನಗರದಲ್ಲಿ ವಾಸುದೇವನ ಆಲಯಕ್ಕೆ ಸಂಬಂಧಿಸಿದ ಹೆಲಿಯೋಡೊರಸ್ ಸ್ಥಾಪಿಸಿದ ಶಾಸನೋಕ್ತ ಗರುಡಗಂಬದ ಉಲ್ಲೇಖ ದೇವಾಲಯದ ಅಸ್ತಿತ್ವವನ್ನು ಗುರುತಿಸುವ ಪ್ರಾಚೀನ ಮಾಹಿತಿಯಾಗಿದೆ.[೧] ಇದರೊಂದಿಗೆ ರಾಜಸ್ಥಾನದ ಕೌಶಂಬಿಯಲ್ಲಿ ಪರಾಶರಿಪುತ್ರ ಗಜಾಯನನು ವಾಸುದೇವ ಸಂಕರ್ಷಣರಿಗಾಗಿಯೇ ಕ್ರಿ.ಶ ೧ ನೇ ಶತಮಾನದಲ್ಲಿ ನಾರಾಯಣನಿಗಾಗಿ ಕಟ್ಟಲ್ಪಟ್ಟ ನಾರಾಯಣ ವಾಟಿಕಾದ ಉಲ್ಲೇಖವಿದೆ. ಇವೆಲ್ಲವೂ ಶಾಸನೋಲ್ಲೇಖಗಳಾದ್ದರಿಂದ ಇವುಗಳ ಕಾಲದ ಬಗ್ಗೆ ಖಚಿತತೆ ಇದೆ. ಹಾಗೂ ಇವುಗಳ ರಚನೆ ಕೈಗೊಂಡವರು ಪರಮ ಭಾಗವತರು. ಅಲ್ಲದೇ ಈ ಕಟ್ಟಡಗಳೊಂದಿಗೆ ಗುರುತಿಸಲಾಗುವ ಅತೀ ಪ್ರಾಚೀನ ದೇವಾಲಯ ತಿಗುವಾದಲ್ಲಿರುವ ವಿಷ್ಣು ದೇವಾಲಯವೆಂದು ಹೆಸರಿಸಬಹುದು.[೨]

ಒಟ್ಟಿನಲ್ಲಿ ಶಿಲಾಯುಗ, ಸಿಂಧೂ ನಾಗರೀಕತೆ ಮತ್ತು ವೇದಗಳ ಕಾಲದಲ್ಲಿ ನಮಗೆ ದೇವಾಲಯಗಳು ಕಂಡುಬರುವುದಿಲ್ಲ. ಆದರೆ ದೇವಾಲಯಗಳ ಪರಿಕಲ್ಪನೆ ನಮಗೆ ಬೌದ್ಧ ಮತ್ತು ಜೈನರ ಕಾಲದಲ್ಲಿ ಸ್ತೂಪ, ಚೈತ್ಯ ಮತ್ತು ಬಸದಿಗಳಾಗಿ ಕಂಡುಬರುತ್ತದೆ. ಹಾಗೂ ಶಾತವಾಹನರ ಕಾಲದಲ್ಲಿ ಇಟ್ಟಿಗೆಗಳಿಂದ ನಿರ್ಮಿಸಿದ ಹಿಂದೂ ಪರಿವಾರದ ದೇವಾಲಯಗಳು ಕಂಡುಬರುತ್ತವೆ. ನಂತರ ರಾಜ ಪ್ರಭುತ್ವದ ಹಿನ್ನಲೆಯಲ್ಲಿ ವೈಧಿಕ ಧರ್ಮದ ಶೈವ, ವೈಷ್ಣವ ಮುಂತಾದ ಪಂಥಗಳಿಗನುಗುಣವಾಗಿ ದ್ರಾವಿಡ, ನಾಗರ, ವೇಸರ, ಭೂಮಿಜ ಮುಂತಾದ ಶೈಲಿಗಳಲ್ಲಿ ದೇವಾಲಯಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆ.

ಬೇಲೂರು ಪರಿಸರದಲ್ಲಿ ನೂರಾರು ದೇವಾಲಯಗಳು ನಿರ್ಮಿಸಲ್ಪಟ್ಟಿದ್ದು ಅವುಗಳ ಪ್ರಾಚೀನತೆಯನ್ನು ಕ್ರಿ.ಶ. ೫–೬ ನೇ ಶತಮಾನದಿಂದಲೇ ಗುರುತಿಸಬಹುದು. ಬೇಲೂರು ಪ್ರಾರಂಭದಿಂದಲೂ ಧಾರ್ಮಿಕ ಸಹಿಷ್ಣುತಾ ತಾಣವಾಗಿದ್ದರಿಂದ ಇಲ್ಲಿ ಶೈವ, ವೈಷ್ಣವ, ಜೈನ ಸೇರಿದಂತೆ ಇತರ ಪಂಥಗಳ ದೇವಾಲಗಳು

ಹೆಚ್ಚಾಗಿ ನಿರ್ಮಾಣಗೊಂಡಿವೆ. ಹೊಯ್ಸಳರ ಕಾಲದಲ್ಲಂತೂ ವಾಸ್ತು ಶಿಲ್ಪ ಕ್ಷೇತ್ರದಲ್ಲಿ ಬೇಲೂರು ವಿಶ್ವ ಪ್ರಸಿದ್ಧಿಯನ್ನು ಪಡೆಯಿತು. ಅದಕ್ಕೆ ಕಾರಣ ಬೇಲೂರಿನಲ್ಲಿ ಕ್ರಿಶ ೧೧೧೭ ರಲ್ಲಿ ವಿಷ್ಣುವರ್ಧನನಿಂದ ನಿರ್ಮಾಣವಾದ ವಿಜಯ ನಾರಾಯಣ ಅಥವಾ ಚೆನ್ನಕೇಶವ ಎಂಬ ಸುಂದರ ದೇವಾಲಯ ಎನ್ನಬಹುದು. ಇಂತಹ ದೇವಾಲಯಗಳು ಪ್ರಾಚೀನ ಕಾಲದ ರಾಜಮನೆತನಗಳ ಕಲೆ ಮತ್ತು ಅಂದಿನಿಂದ ಹಿಡಿದು ಇಂದಿನ ಕಾಲದ ವರೆಗೂ ಧಾರ್ಮಿಕತೆಯ ರೂಪಕವಾಗಿ ಪ್ರತಿಬಿಂಬಿಸುವುದನ್ನು ಕಾಣಬಹುದು.

ಪ್ರಸ್ತುತದಲ್ಲಿ ಅಧ್ಯಯನ ಕೈಗೊಂಡಿರುವ ಬೇಲೂರು ತಾಲೂಕಿನ ವೀರಭದ್ರ ಪರಂಪರೆ ಎಂಬ ವಿಷಯದಲ್ಲಿ ಈ ಪರಿಸರದ ಕೆಲವು ಗ್ರಾಮಗಳಲ್ಲಿ ಈ ಧೈವದ ಆರಾಧನೆ ಯತೇಚ್ಛವಾಗಿದ್ದು ಅದಕ್ಕಾಗಿ ಹಲವು ದೇವಾಲಯಗಳನ್ನು ನಿರ್ಮಿಸಿದ್ದಾರೆ. ಅಂತಹ ಪ್ರಮುಖ ವೀರಭದ್ರ ದೇವಾಲಯಗಳೆಂದರೆ.

೧ ಮುತ್ತಿನ ವೀರಭದ್ರೇಶ್ವರ ದೇವಾಲಯ – ಹಳೇಬೀಡು

ಈ ದೇವಾಲಯವು ಹಳೇಬೀಡಿನ ಆಗ್ನೇಯದ ಕೋಟೆಯ ಗೋಡೆಯ ಹತ್ತಿರವಿದ್ದು ಪೂರ್ವಾಭೀಮುಖವಾಗಿದೆ. ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡ ಈ ದೇವಾಲಯ ವಾಸ್ತುವಿನ್ಯಾಸ ಮತ್ತು ಕುಸುರಿ ಕೆತ್ತನೆಯಲ್ಲಿ ಶ್ರೀಮಂತಿಕೆಯನ್ನು ಹೊಂದಿದೆ. ಆದರೆ ಇದರ ಮುಖ ಮಂಟಪವು ಮಾತ್ರ ವಿಜಯನಗರ ಕಾಲದಾಗಿದ್ದು ನಂತರದ ಕಾಲಘಟ್ಟಗಳಲ್ಲಿ ಜೀರ್ಣೋದ್ಧಾರಗೊಳ್ಳುತ್ತ ಬಂದಿದೆ.

ಈ ದೇವಾಲಯದ ತಳವಿನ್ಯಾಸಕ್ಕೆ ಬರುವುದಾದರೆ ಇದು ವೃತ್ತಾಯತಾಕಾರವಾಗಿದ್ದು, ಭದ್ರತೆ ಮತ್ತು ಸೌಂದರ್ಯಗಳ ದೃಷ್ಟಿಯಿಂದ ಗೋಡೆಯ ಹೊರ ವಲಯದ ರಚನೆಯನ್ನು ರೂಪಿಸಲಾಗಿದೆ. ಗರ್ಭಗೃಹ, ಶುಕನಾಸ ಮತ್ತು ನವರಂಗಗಳ ಹೊರ ಮುಖವು ಹಿಂದೆ ಮುಂದೆ ಸರಿತಗಳನ್ನು ಹೊಂದಿದೆ. ಕಾರಣ ಗೋಡೆಗೆ ಹೆಚ್ಚಿನ ದೃಡತೆಯನ್ನು ಕೊಡುವುದು, ನೇರಗೋಡೆಯ ಏಕತಾನತೆಯನ್ನು ಹೋಗಲಾಡಿಸುವುದು ಮತ್ತು ಶಿಲ್ಪಕೆತ್ತನೆಗೆ ಹೆಚ್ಚಿನ ಸ್ಥಳಾವಕಾಶವನ್ನು ಮಾಡಿಕೊಟ್ಟು ಭಿತ್ತಿಯ ಶಿಲ್ಪಗಳಿಗೆ ನೆರಳು ಬೆಳಕಿನ ಹೊನಲಾಟದ ಮೂಲಕ ಹೆಚ್ಚಿನ ಆಕರ್ಷಣೆಯನ್ನು ಒದಗಿಸುವುದು ಅವರ ಉದ್ದೇಶವಾಗಿತ್ತು. ಕೊನೆಯ ಈ ಲಕ್ಷಣಕ್ಕೆ ಇಟಾಲಿಯನ್ ಭಾಷೆಯಲ್ಲಿ ಕ್ಯಾರಸ್–ಕ್ಯೂರೋ ಎನ್ನಲಾಗುತ್ತದೆ.[೩] ನವರಂಗದ ಮುಂದಿನ ಭಾಗವಾದ ಸಭಾಮಂಟಪದ ಹೊರಭಾಗವು ನೇರಗೋಡೆಯನ್ನು ಹೊಂದಿದ್ದು ಅಲಂಕಾರ ರಹಿತವಾಗಿದೆ.

ಅಧಿಷ್ಠಾನ

ಈ ದೇವಾಲಯವು ಹೊಯ್ಸಳ ಪ್ರತಿಬಂಧ ಅಧಿಷ್ಠಾನವನ್ನು ಹೊಂದಿದ್ದು ಇದು ಉಪಾನ, ಜಗತಿ, ಕುಮುದ, ಕಪೋತ ಮತ್ತು ಗಳಗಳಿಂದ ಕೂಡಿದೆ. ಅಧಿಷ್ಠಾನದ ಜಗತಿಯ ಮೇಲೆ ಆನೆ ಸಾಲುಗಳ ಕೆತ್ತನೆ ಇದ್ದು, ಕುಮುದದ ಮೇಲೆ ಅಲ್ಲಲ್ಲಿ ದುಂಡನೆಯ ಚಿತ್ರದ ಮೇಲೆ ಅಲಂಕಾರವನ್ನು ಕಾಣಬಹುದು. ಈ ದೇವಾಲಯದ ಭಿತ್ತಿ ಭಾಗ ಸಾಂಪ್ರದಾಯಿಕ ದ್ರಾವಿಡ ಮಾದರಿಯದಾಗಿದ್ದು, ಅದನ್ನು ಶಿಲ್ಪಗಳಿಂದ ಅಲಂಕರಿಸಲಾಗಿದೆ. ಈ ರೀತಿಯ ರಚನೆಗೆ ಸಾಲಂಕೃತ ಭಿತ್ತಿ ಎಂದು ಕರೆಯುತ್ತಾರೆ. ಈ ಭಿತ್ತಿಯಲ್ಲಿ ಸುಮಾರು ಎರಡುವರೆ ಅಡಿ ಎತ್ತರವಿರುವ ಲಕ್ಷ್ಮೀ ನಾರಾಯಣ, ನಂದಿ ವಾಹನ, ಕಾಳಿ, ನೃತ್ಯ ಸರಸ್ವತಿ, ಮೋಹಿನಿ, ಮಹಿಷ ಮರ್ಧಿನಿ, ಬ್ರಹ್ಮ, ತಾಂಡವೇಶ್ವರ, ನರಸಿಂಹ, ವರಾಹ, ವೇಣುಗೋಪಾಲ, ಉಮಾ

ಮಹೇಶ್ವರ, ಗಣಪತಿ, ಡೊಳ್ಳುದಾರಿಗಳು ಸೇರಿದಂತೆ ಹಲವು ನೃತ್ಯಗಾರ್ತಿಯರ ಶಿಲ್ಪಗಳಿವೆ ಹಾಗೂ ಅಲ್ಲದೆ ಭಿತ್ತಿಯ ಶಿಲ್ಪಗಳ ಮಧ್ಯಭಾಗದಲ್ಲಿ ಹಲವಾರು ಕೋಷ್ಟಕಗಳಿವೆ. ಭಿತ್ತಿಯ ನಂತರ ಮೇಲಿನ ಭಾಗದಲ್ಲಿ ಛಜ್ಜದ ರಚನೆ ಇದ್ದು ಅದು ಮಳೆಯಿಂದ ಗೋಡೆಯನ್ನು ರಕ್ಷಿಸುತ್ತದೆ.

ಈ ದೇವಾಲಯದ ಶಿಖರ ಪಾಂಸನ ಶೈಲಿಯದಾಗಿದ್ದು ಮೆಟ್ಟಿಲುಗಳ ಆಕಾರದಲ್ಲಿ ಈ ಭಾಗ ಕಂಡುಬರುತ್ತದೆ. ಶಿಖರದ ಮೇಲೆ ಸ್ತೂಪಿ ಮತ್ತು ಕುಂಭದ ಆಕಾರದ ರಚನೆ ಇದೆ. ಅದರ ಮುಂಭಾಗದಲ್ಲಿ ಶುಕನಾಸಿ ಇದ್ದು ಅದರ ಮೇಲೆ ಹೊಯ್ಸಳರ ರಾಜಲಾಂಛನವಾದ ಸಳನು ಹುಲಿಯನ್ನು ಕೊಲ್ಲುತ್ತಿರುವ ಶಿಲ್ಪವಿದೆ.

ದೇವಾಲಯದ ಒಳಭಾಗದ ಲಕ್ಷಣಗಳು

ಪ್ರಸ್ತುತ ಈ ಮುತ್ತಿನ ವೀರಭದ್ರೇಶ್ವರ ದೇವಾಲಯವು ಒಳಭಾಗದಲ್ಲಿ ಗರ್ಭಗೃಹ, ಅಂತರಾಳ, ನವರಂಗ, ಸಭಾಮಂಟಪ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಅದರ ಪ್ರಮುಖ ಅಂಶಗಳು ಈ ರೀತಿ ಇವೆ.

ಗರ್ಭಗೃಹ

ಇದರ ಒಳಭಾಗ ಆರು ಅಡಿ ಎತ್ತರವಾಗಿದ್ದು ಮೇಲಿನ ವಿತಾನ ಸ್ವಲ್ಪ ಮೇಲಕ್ಕೆ ಎತ್ತರಿಸಲ್ಪಟ್ಟಿದೆ. ಈ ವಿತಾನವು ಪದ್ಮಶಿಲಾ ಪ್ರಕಾರವಾಗಿದ್ದು. ಕಮಲದಳಗಳ ಮಧ್ಯ ಚೂಪಾದ ದುಂಡನೆಯ ಕಲ್ಲು ಹೊರಬಂದಂತೆ ಇದ್ದು ಅದರ ಸುತ್ತಲೂ ಮೂಲೆಯ ಭಾಗದಲ್ಲಿ ಚಿಕ್ಕ ಚಿಕ್ಕ ಪದ್ಮದಳಗಳಿವೆ. ಗರ್ಭಗೃಹದ ಒಳಭಾಗವನ್ನು ಮಾತ್ರ ಸ್ವಲ್ಪ ಮಟ್ಟಿಗೆ ನವೀಕರಣ ಮಾಡಲಾಗಿದೆ. ಅದರ ಮಧ್ಯಭಾಗದಲ್ಲಿ ಚಿಕ್ಕದಾದ ಅಂದರೆ ಅರ್ಧ ಅಡಿಯ ಪಾಣಿಪೀಠವಿದೆ. ಅದರ ಮೇಲೆ ಸುಮಾರು ನಾಲ್ಕು ಅಡಿ ಎತ್ತರದ ವೀರಭದ್ರನ ಕಲ್ಲಿನ ವಿಗ್ರಹವಿದೆ. ಈ ಮೂರ್ತಿಯು ಸುಂದರವಾಗಿದ್ದು ಇದಕ್ಕೆ ನಾಲ್ಕು ಕೈಗಳಿವೆ. ಬಲಭಾಗದ ಮೇಲಿನ ಕೈಯಲ್ಲಿ ತ್ರಿಶುಲ ಮತ್ತು ಕೆಳಗಿನ ಕೈಯಲ್ಲಿ ಖಡ್ಗವಿದ್ದರೆ ಕ್ರಮವಾಗಿ ಎಡಭಾಗದ ಮೇಲಿನ ಕೈಯಲ್ಲಿ ಡಮರುಗ ಕೆಳಗಿನ ಕೈ ಗುರಾಣಿಯ ಮೇಲೆ ಇದೆ. ಈ ವಿಗ್ರಹಕ್ಕೆ ಉಡುಪು ಮತ್ತು ಹಾರಗಳನ್ನು ಕೆತ್ತಿ ಅಲಂಕೃತಗೊಳಿಸಲಾಗಿದೆ. ಮತ್ತು ಕಾಲಿನಲ್ಲಿ ಕಾಲ್ಗಡಗಗಳನ್ನು ಕಾಣಬಹುದು. ಈ ಶಿಲ್ಪವು ಮುಖದ ವಿನ್ಯಾಸವನ್ನು ಹೊಂದಿದೆ ಹಾಗೂ ತಲೆಯ ಮೇಲೆ ಕೀರಿಟ ಅದರ ಮುಂಭಾಗದಲ್ಲಿ ಚಿಕ್ಕದಾದ ಶಿವಲಿಂಗದ ಕೆತ್ತನೆ ಇದೆ.

ಅಂತರಾಳ ಅಥವಾ ಶುಕನಾಸ

ಗರ್ಭಗೃಹದ ಮುಂಭಾಗ ಅಲ್ಪಾಲಂಕಾರವಿರುವ ಅಂತರಾಳವಿದೆ. ಅದರ ಮೂಲೆಗಳಲ್ಲಿ ಮುಂದಕ್ಕೆ ಉಬ್ಬಿದ ಕಂಬಗಳ ರಚನೆ ಕಂಡುಬರುತ್ತದೆ ಹಾಗೂ ಇದರ ಬಾಗಿಲುವಾಡ ಅಲಂಕಾರ ರಹಿತವಾಗಿದೆ.

ನವರಂಗ

ಅಂತರಾಳದ ಮುಂಭಾಗದಲ್ಲಿ ನವರಂಗವಿದ್ದು ಇಲ್ಲಿನ ನಾಲ್ಕು ಕಂಬಗಳು ತಿರುಗಣೆಯಿಂದ ಮಾಡಿ ನಯಗೊಳಿಸಿದ ಶ್ರೀಕರ ಕಂಬಗಳಾಗಿವೆ. ಈ ಕಂಬಗಳ ಮಧ್ಯದ ವಿತಾನದಲ್ಲಿ ಅಲಂಕೃತ ಪದ್ಮಶಿಲೆ ಇದೆ.

ಮತ್ತು ನವರಂಗದ ಗೋಡೆಗಳ ಸಮಾಂತರಕ್ಕೆ ಎರಡು ಗೂಡುಗಳಿವೆ. ಈ ಉತ್ತರ ಮತ್ತು ದಕ್ಷಿಣದ ಗೂಡುಗಳಲ್ಲಿ ಕ್ರಮವಾಗಿ ಕಾಳಿ ಮತ್ತು ಯೋಗಿ (ವ್ಯಾಪಾರಸ್ಥನಾದ ಮುತ್ತಿನಶೆಟ್ಟಿ ಎಂದು ಹೇಳಲಾಗುತ್ತದೆ.)ಳ ಯ ಶಿಲ್ಪಗಳಿವೆ. ಉತ್ತರದ ಈ ಕಾಳಿಯ ಶಿಲ್ಪವು ಪೀಠದ ಮೇಲಿದ್ದು ಸುಮಾರು ಎರಡುವರೆ ಅಡಿಗಳಷ್ಟು ಎತ್ತರವಿದೆ. ಈ ದೇವಿಯು ಸಹ ನಾಲ್ಕು ಕೈಗಳನ್ನು ಹೊಂದಿದೆ. ಅದರ ಬಲಗೈಗಳಲ್ಲಿ ಬಾಣ ಮತ್ತು ಕತ್ತಿಗಳಿದ್ದರೆ ಎಡಗೈಗಳಲ್ಲಿ ಕ್ರಮವಾಗಿ ಬಿಲ್ಲು ಮತ್ತು ಗುರಾಣಿಯಿದೆ. ಕಾಳಿದೇವಿಯ ಈ ವಿಗ್ರಹ ಅಲಂಕೃತವಾಗಿದ್ದು ಉಡುಪು ಮತ್ತು ಆಭರಣಗಳ ಕೆತ್ತನೆಯನ್ನು ಹೊಂದಿದೆ. ಇದರ ಹಿಂಭಾಗದಲ್ಲಿ ಪ್ರಭಾವಳಿ ಇದ್ದು ಈ ವಿಗ್ರಹದ ಕಾಲ ಕೆಳಗೆ ಎರಡು ಬದಿಗಳಲ್ಲಿ ಆಶೀರ್ವಾದ ಮಾಡುತ್ತಿರುವ ಮತ್ತು ಕೈಮುಗಿಯುತ್ತಿರುವ ಪುರುಷ ಮತ್ತು ಸ್ತ್ರೀಯ ಕೆತ್ತನೆಯಾಗಿದೆ. ಹಾಗೂ ಕಾಳಿದೇವಿಯು ಪಾದರಕ್ಷೆಗಳನ್ನು ಧರಿಸಿರುವುದು ಕಂಡು ಬಂದಿದೆ. ಇದರ ಕೆಳಗೆ ಅಸ್ಪಷ್ಟವಾದ ಶಾಸನವಿದೆ.

ಹಾಗೆಯೇ ದಕ್ಷಿಣದ ಗೂಡಿನಲ್ಲಿ ಯೋಗಿಯ ವಿಗ್ರಹವಿದ್ದು ಅದು ಯೋಗಮುದ್ರೆಯನ್ನು ತೋರಿಸುತ್ತಿದೆ. ಈ ಯೋಗಿಯು ಅಂದು ಮುತ್ತಿನ ವ್ಯಾಪಾರ ಮಾಡುತ್ತಿದ್ದ ಮುತ್ತಿನಶೆಟ್ಟಿಯಾಗಿದ್ದ ಇವನು ಈ ದೇವಾಲಯಕ್ಕೆ ತನ್ನ ಅಪಾರ ಸಂಪತ್ತನ್ನು ದಾನ ಮಾಡಿದನು ಆದ್ದರಿಂದ ಈ ದೇವರಿಗೆ ಮುತ್ತಿನ ವೀರಭದ್ರ ಎಂಬ ಹೆಸರು ಬಂದಿದೆ ಎಂದು ಅಲ್ಲಿನ ಸ್ಥಳೀಯರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಇದರ ಪಕ್ಕದಲ್ಲಿ ಪುರುಷ ಯೋಗಿಗಳು ಮತ್ತು ಸ್ತ್ರೀ ಯೋಗಿಗಳು, ಭೃಂಗಿ ಮೇಲೆ ತಾಂಡವೇಶ್ವರ, ನಂದಿ ವಾಹನ, ವೀರಭದ್ರ, ದ್ವಿಭುಜದೇವಿ, ನಾಲ್ಕು ಭುಜದ ವೃಷಭ ಮುಖವುಳ್ಳ ನಂದಿ ಶೋಮ ಸೇರಿದಂತೆ ಇತ್ಯಾದಿ ಶಿಲ್ಪಗಳನ್ನು ಕೆತ್ತನೆ ಮಾಡಲಾಗಿದೆ. ಸುಮಾರು ೧೪ನೇ ಶತಾಬ್ದದ ಅಕ್ಷರಗಳ ಒಂದು ಶಾಸನ ಮೇಲಿನ ಅಂಚಿನಲ್ಲಿ ಕಂಡುಬರುತ್ತದೆ ಹಾಗೂ ಆ ಶಾಸನವನ್ನು ಈ ಅಧ್ಯಾಯದ ಕೊನೆಯಲ್ಲಿ ವಿವರಿಸಲಾಗಿದೆ. ಈ ಎರಡು ಗೂಡುಗಳ ದ್ವಾರಬಂದದಲ್ಲಿ ಯಾವುದೇ ಕೆತ್ತನೆಗಳು ಕಂಡುಬರುವುದಿಲ್ಲ.

ಸಭಾಮಂಟಪ

ನವರಂಗದ ಮುಂಭಾಗದಲ್ಲಿ ಸಭಾಮಂಟಪವಿದ್ದು ಇದು ಕೂಡ ನಯವಾದ ನಾಲ್ಕು ಕಂಬಗಳಿಂದ ಕೂಡಿದೆ. ಇದರ ವಿತಾನದಲ್ಲಿ ಶಿವನ ಅವತಾರಗಳು, ಮಕರ, ಕುದುರೆ ಮೇಲಿನ ಶಿವಗಣಗಳು, ವೀರಭದ್ರನ ಶಿಲ್ಪ ಮುಂತಾದವುಗಳ ಕೆತ್ತನೆ ಇದೆ. ಒಂಭತ್ತು ಅಂಕಣಗಳಿಂದ ಕೂಡಿರುವ ಈ ಮಂಟಪದ ಬಲಭಾಗದಲ್ಲಿ ಬಸವಣ್ಣನ ಶಿಲ್ಪವು ಸಹ ಇದೆ.

ಮುಖಮಂಟಪ

ಈ ದೇವಾಲಯದ ಮುಂಭಾಗದಲ್ಲಿ ಮುಖಮಂಟಪವಿದ್ದು, ಇದು ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡಿದೆ. ಈ ಮಂಟಪವು ಪ್ರವೇಶ ದ್ವಾರದ ನೇರಕ್ಕೆ ಎರಡು ಕಂಬಗಳಿಂದ ನಿಲ್ಲಿಸಲ್ಪಟ್ಟಿದ್ದು ಇವುಗಳನ್ನು ಬೇರೆ ದೇವಾಲಯಗಳಿಂದ ತಂದು ಇದರ ರಚನ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ. ಇದರ ಮೇಲೆ ದೊಡ್ಡದಾದ ನಂದಿಯ ಶಿಲ್ಪವಿದೆ. ಮಂಟಪದ ಮುಂಭಾಗದಲ್ಲಿ ಎರಡು ಕಡೆ ಕಂಬಗಳಿಗೆ ಹೊಂದಿಕೊಂಡಂತೆ ಆನೆಗಳ ಶಿಲ್ಪಗಳನ್ನು ನಿಲ್ಲಿಸಲಾಗಿದೆ. ಬಹುಶಃ ಇವುಗಳನ್ನು ಸಹ ಹೊರಗಡೆಯಿಂದ ತಂದು ಇಲ್ಲಿ ಇಟ್ಟಿರುವ ಸಾಧ್ಯತೆ ಇದೆ.

ದೀಪ ಸ್ತಂಭ

ಈ ದೇವಾಲಯದ ಮುಂಭಾಗದಲ್ಲಿ ನಾಲ್ಕು ಅಡಿ ಎತ್ತರದ ವೇದಿಕೆಯ ಮೇಲೆ ಸುಮಾರು ೧೨ ಅಡಿಗಳಷ್ಟು ಉದ್ದವಿರುವ ದೀಪ ಸ್ತಂಭವಿದೆ. ಇದರ ಕೆಳಗಿನ ನಾಲ್ಕು ಅಡಿ ಚೌಕಾಕಾರವಾಗಿದ್ದು ಮೇಲಿನ ಭಾಗ ದುಂಡಾಗಿದೆ. ಅದರ ಮೇಲೆ ದೀಪ ಹಚ್ಚಲು ಸಮತಟ್ಟಾದ ಕಲ್ಲಿನ ಮೇಲೆ ಬಟ್ಟಲಿನಾಕಾರದ ಬೋಗಣಿಯಿದೆ.

ಕಲ್ಯಾಣಿ

ಇದರ ಬಲಭಾಗದಲ್ಲಿ ಸುಮಾರು ೨೦ ಅಡಿ ಆಳ, ೩೦ ಅಡಿ ಉದ್ದ ಮತ್ತು ೧೬ ಅಡಿ ಅಗಲವಿರುವ ಬೃಹತ್ ಪ್ರಮಾಣದ ಕಲ್ಯಾಣಿ ಇದೆ. ಹಿಂದಿನ ಕಾಲದಲ್ಲಿ ದೇವಾಲಯದ ನೀರಿನ ವ್ಯವಸ್ಥೆಗಾಗಿ ಇದನ್ನು ಉಪಯೋಗಿಸುತ್ತಿದ್ದರು ಎಂದು ಕಾಣುತ್ತದೆ. ಆದರೆ ಇಂದು ಇದು ಪಾಳುಬಿದ್ದ ಸ್ಥಿತಿಯಲ್ಲಿರುವುದನ್ನು ಕಾಣಬಹುದು. ಈ ದೇವಾಲಯದ ಮುಂಭಾಗದ ಸ್ವಲ್ಪ ಎಡಭಾಗಕ್ಕೆ ಪೂರ್ವ ದಿಕ್ಕಿಗೆ ಮುಖಮಾಡಿದಂತೆ ಇರುವ ಮಧ್ಯಮ ಗಾತ್ರದ ಶಿವಲಿಂಗವನ್ನು ಇಡಲಾಗಿದೆ. ಇದು ಸುಮಾರು ಎರಡುವರೆ ಅಡಿಗಳಷ್ಟು ಎತ್ತರವಾಗಿದ್ದು ಅದರ ಮುಂದೆ ಚಿಕ್ಕದಾದ ನಂದಿ ಶಿಲ್ಪವಿದೆ. ಈ ಶಿವಲಿಂಗದ ಮುಂಭಾಗದಲ್ಲಿ ಒಂದು ಕಲ್ಲಿನ ಮೇಲೆ ಮತ್ತೊಂದು ಲಿಂಗ ಮತ್ತು ಅದರ ಹಿಂಭಾಗದಲ್ಲಿ ಸುಮಾರು ೧೫ ಕ್ಕೂ ಹೆಚ್ಚು ನಾಗಶಿಲ್ಪಗಳಿವೆ. ರಾಘವಾಂಕ, ಕೆರೆಯ ಪದ್ಮರಸರ ಸಂಬಂಧವಾದ ಕಥೆಗಳಲ್ಲಿ ವಾರಂಗಲ್ಲು ವೀರಭದ್ರನ ವಿಷಯ ಬರುತ್ತದೆ. ಬಹುಶಃ ಹಳೇಬೀಡಿನಲ್ಲಿ ಅದರ ಪ್ರತೀಕವನ್ನು ೧೩ನೇ ಶತಾಬ್ದದ ಅಂತ್ಯದಲ್ಲಿ ಸ್ಥಾಪಿಸಿರುವ ಸಾಧ್ಯತೆ ಇದೆ.

೨. ವೀರಭದ್ರೇಶ್ವರ ದೇವಾಲಯ – ಅಡಗೂರು

ಅಡಗೂರು ಗ್ರಾಮವು ಹೊಯ್ಸಳರ ರಾಜಧಾನಿಯಾಗಿದ್ದ ಹಳೇಬೀಡಿನಿಂದ ಸುಮಾರು ನಾಲ್ಕು ಕಿ.ಮೀ. ದೂರದಲ್ಲಿದೆ. ಅಲ್ಲಿರುವ ೧೨–೧೩ನೇ ಶತಮಾನದ ವೀರಭದ್ರ ದೇವಾಲಯ ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡಿದೆ. ಇದು ಹೊಯ್ಸಳ ವಾಸ್ತುಶೈಲಿ ಹೊಂದಿದ್ದರೂ ಸಹ ವಿಜಯನಗರೋತ್ತರ ಕಾಲದಲ್ಲಿ ಮತ್ತು ಆನಂತರದ ಕೆಲವು ಅರಸು ಮನೆತನಗಳಿಂದ ಕಾಲಕಾಲಕ್ಕೆ ಜೀರ್ಣೋದ್ಧಾರವಾಗಿರುವುದನ್ನು ಕಾಣಬಹುದಾಗಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯ ಚೌಕಾಕಾರವಾಗಿರುವುದರ ಜೊತೆಗೆ ಸಾಮಾನ್ಯವಾದ ಸರಳ ಅಧಿಷ್ಠಾನವನ್ನು ಹೊಂದಿದೆ. ಮತ್ತು ಗರ್ಭಗೃಹದ ಮೇಲೆ ಯಾವುದೇ ಶಿಖರ ಕಂಡುಬರುವುದಿಲ್ಲ. ಇದರ ಮುಂದಿನ ಭಾಗದ ನವರಂಗವು ಹೊರಚಾಚಿರುವುದರ ಜೊತೆಗೆ ಗೋಡೆಯು ಎರಡು ಹಂತದ ಅಡ್ಡಪಟ್ಟಿಕೆಗಳಿಂದ ಕೂಡಿದೆ. ಈ ಆಲಯದ ಭಿತ್ತಿಗೊಡೆಯು ಸಾಧಾರಣವಾಗಿ ಸಮನಾಂತರವಾಗಿದ್ದು ಅಲ್ಲಿ ಯಾವುದೇ ಕೆತ್ತನೆಗಳಾಗಲಿ ಅಥವಾ ಶಿಲ್ಪಗಳಾಗಲಿ ಇಲ್ಲ. ಇದರ ಮೇಲೆ ಛಜ್ಜವಿದ್ದು, ಇದು ಮಳೆಯ ನೀರು ಗೋಡೆಯ ಮೇಲೆ ಬೀಳದಂತೆ ತಡೆಯುತ್ತದೆ. ಅದರ ಮೇಲ್ಭಾಗದಲ್ಲಿ ಕೈಪಿಡಿ ಗೋಡೆ ಇದೆ. ಅದರ ಮುಂಭಾಗದಲ್ಲಿ ಇತ್ತೀಚಿನ ಬಸವಣ್ಣನ ಶಿಲ್ಪಗಳು ಮತ್ತು ಹಿಂಭಾಗದಲ್ಲಿ ನವಿಲುಗಳ ಶಿಲ್ಪವಿದೆ. ಪ್ರವೇಶದ್ವಾರದಲ್ಲಿ ಎರಡು ಅರ್ಧಗಂಬಗಳು ಕಂಡುಬಂದಿದ್ದು ಆ ಬಾಗಿಲುಗಳ

ಬಳಿ ಪಟ್ಟಿಕೆಗಳ ಸಹಿತ ಕೆಳಗೆ ಶೈವ ದ್ವಾರಪಾಲಕರಿರುವ ಶಿಲ್ಪಗಳಿವೆ. ಹಾಗೂ ಬಾಗಿಲುವಾಡ ಅಲಂಕಾರ ಸಹಿತವಾಗಿದೆ. ಅದರ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪ ಮತ್ತು ಮೇಲ್ಭಾಗದಲ್ಲಿ ತೋರಣದ ವಿನ್ಯಾಸವಿದೆ.

ಗರ್ಭಗೃಹ

ಈ ದೇವಾಲಯದ ಗರ್ಭಗೃಹವು ಸುತ್ತಲೂ ನಾಲ್ಕು ಕಂಬಗಳಿಂದ ಆವರಿಸಲ್ಪಟ್ಟಿದೆ. ಇದು ಪ್ರಾಚೀನ ಕಾಲದಾಗಿದ್ದರೂ ಸಹ ಒಳಭಾಗದಲ್ಲಿ ಇತ್ತಿಚೀಗೆ, ಟೈಲ್ಸ್‌ಗಳನ್ನು ಬಳಸಿ ಜೀರ್ಣೊದ್ಧಾರ ಮಾಡಿದ್ದಾರೆ ಹಾಗೂ ಗರ್ಭಗೃಹದ ಮೇಲ್ಭಾಗವು ಯಾವುದೇ ಬದಲಾವಣೆಗೆ ಒಳಗಾಗದ ಕಾರಣ ವಿತಾನದಲ್ಲಿ ಪದ್ಮಶಿಲೆಯು ಹಾಗೆಯೇ ಇದೆ. ಇದರ ಮುಂಭಾಗದಲ್ಲಿ ಅಂತರಾಳವಿದ್ದು ಇದು ಯಾವುದೇ ಕೆತ್ತನೆಯನ್ನು ಒಳಗೊಂಡಿಲ್ಲ.

ನವರಂಗ

ಈ ದೇವಾಲಯದ ನವರಂಗದ ಬಾಗಿಲುವಾಡವು ಯಾವುದೇ ಕೆತ್ತನೆ ಇಲ್ಲದೆ ಸಾಧಾರಣವಾಗಿದೆ. ಮಧ್ಯದ ನಾಲ್ಕು ಕಂಬಗಳು ಶ್ರೀಕಾರ ಕಂಬಗಳಾಗಿದ್ದು ಒಂಭತ್ತು ಅಂಕಣಗಳಿಂದ ಕೂಡಿವೆ. ಮಧ್ಯದ ವಿತಾನವು ಹೆಚ್ಚು ಅಲಂಕೃತಗೊಂಡಿದ್ದು ಕುಸುರಿ ಕೆತ್ತನೆಯನ್ನು ಹೊಂದಿದೆ. ಅದರಲ್ಲಿ ಅಂಧಕಾಸುರ ಸಂಹಾರ ಮೂರ್ತಿಯ ಶಿಲ್ಪ ಹಾಗೂ ಅದರ ಸುತ್ತಲೂ ಶಿವಗಣಗಳ ಚಿತ್ರಣವಿದೆ. ಹಾಗೂ ಸುತ್ತಲಿನ ಅಂಕಣಗಳ ವಿತಾನಗಳು ಪದ್ಮಮಂಡಲ ಮತ್ತು ಪದ್ಮಶಿಲೆಗಳಿಂದ ಕೂಡಿದೆ. ಈ ಮಂಟಪದ ಎಡಭಾಗದಲ್ಲಿ ನಂದಿಯ ವಿಗ್ರಹವಿದೆ. ಈ ನಂದಿ ತನ್ನ ಮೂಲ ಸ್ವರೂಪವನ್ನು ಪಡೆಯದೆ ಹೊರಗಡೆಗೆ ಕಿತ್ತು ಇಟ್ಟಸ್ಥಿತಿಯಲ್ಲಿದೆ. ಇದು ಹೊಯ್ಸಳರ ಕಾಲದಾಗಿದ್ದರೂ ಸಹ ಜೀರ್ಣೋದ್ಧಾರದ ಸಂದರ್ಭದಲ್ಲಿ ಕಿತ್ತಿರುವ ಅಥವಾ ಹೊರಗಡೆಯಿಂದ ತಂದು ಇಟ್ಟಿರುವ ಸಾಧ್ಯತೆ ಇದೆ. ಆ ಶಿಲ್ಪದ ಪಕ್ಕದಲ್ಲಿ ಗೋಡೆಗೆ ಅಂಟಿಕೊಂಡಂತಿರುವ ಹಾಗೇ ಒಂದು ಪೀಠದ ಮೇಲೆ ಶೈವ ಶಾಸನವಿದೆ. ಇದು ಈ ವೀರಭದ್ರನ ದೇವಾಲಯಕ್ಕೆ ದೀಪ, ಧೂಪ ಮತ್ತು ನೈವೇದ್ಯಕ್ಕೆ ದಾನ ನೀಡಿದ ಮಾಹಿತಿಯನ್ನು ತಿಳಿಸುತ್ತದೆ.

ಈ ದೇವಾಲಯದ ಗರ್ಭಗೃಹದಲ್ಲಿರುವ ವೀರಭದ್ರನ ವಿಗ್ರಹ ಸುಮಾರು ಒಂದುವರೆ ಅಡಿ ಎತ್ತರದ ಪಾಣಿಪೀಠದ ಮೇಲಿದೆ. ಸುಮಾರು ನಾಲ್ಕು ಅಡಿಗಳಷ್ಟು ಉದ್ದವಿರುವ ವೀರಭದ್ರನ ಕೈಗಳಲ್ಲಿ ಬಾಣ, ಕತ್ತಿ, ಬಿಲ್ಲು, ಗುರಾಣಿ, ಇದ್ದು ತಲೆಯ ಮೇಲೆ ಕಿರೀಟ ಹಾಗೂ ಕೊರಳಲ್ಲಿ ರುದ್ರಾಕ್ಷಿ ಹಾರ ಇದೆ. ಈ ಆಲಯದ ಹಿಂಭಾಗದಲ್ಲಿ ಕನಿಷ್ಟ ಸ್ಥಿತಿಯಲ್ಲಿರುವ ಮತ್ತೊಂದು ವೀರಭದ್ರನ ಮೂರ್ತಿಯಿರುವುದು ಕಂಡುಬಂದಿದೆ.

೩. ವೀರಭದ್ರ ದೇವಾಲಯ – ಕ್ಯಾತಲಾಪುರ

ಈ ಗ್ರಾಮವು ಬೇಲೂರು ತಾಲೂಕು ಕೇಂದ್ರದಿಂದ ೧೪.೮ ಕಿ.ಮೀ. ದೂರದಲ್ಲಿದೆ. ಇಲ್ಲಿನ ಇತಿಹಾಸ ಪ್ರಸಿಧ್ಧ ವೀರಭದ್ರ ದೇವಾಲಯವು ಊರಿನ ಹೊರ ಭಾಗ ಪಶ್ಚಿಮಕ್ಕೆ ಒಂದು ಕಿ.ಮೀ. ದೂರದಲ್ಲಿದೆ. ಇದು ಹೊಯ್ಸಳರ ಕಾಲದಲ್ಲಿ ನಿರ್ಮಾಣಗೊಂಡು ಆನಂತರ ಕಾಲಘಟ್ಟಗಳಲ್ಲಿ ಜೀರ್ಣೋದ್ಧಾರಗೊಳ್ಳುತ್ತ

ಬಂದಿದೆ. ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿರುವ ಈ ಆಲಯ ಪೂರ್ವ ದಿಕ್ಕಿಗೆ ಮುಖಮಾಡಿದೆ. ಚೌಕಾಕಾರವಾಗಿರುವ ಈ ದೇವಾಲಯವು ಚಿಕ್ಕದಾದ ಜಗತಿಯ ಮೇಲೆ ನಿರ್ಮಾಣವಾಗಿದೆ. ಇದರ ಭಿತ್ತಿಭಾಗ ಅಲಂಕಾರ ರಹಿತವಾಗಿದ್ದು ಅದರ ಮೇಲ್ಭಾಗದಲ್ಲಿ ಛಜ್ಜವಿದೆ. ಇದರ ನಂತರ ಭಾಗದಲ್ಲಿ ದ್ರಾವಿಡ ಶೈಲಿಯ ಶಿಖರ, ಶುಕನಾಸಿ, ಸ್ತೂಪಿ ಹಾಗೂ ಕಳಸವಿದೆ.

ಗರ್ಭಗೃಹ

ಈ ದೇವಾಲಯದ ಗರ್ಭಗೃಹವು ನಾಲ್ಕು ಕಂಬಗಳಿಂದ ಆವೃತವಾಗಿದೆ. ಅದರ ಮಧ್ಯದಲ್ಲಿ ಸುಮಾರು ಒಂದೂವರೆ ಅಡಿ ಎತ್ತರದ ಪಾಣಿಪೀಠವಿದ್ದು ಅದರ ಮೇಲೆ ನಾಲ್ಕುವರೆ ಅಡಿಗಳುಳ್ಳ ವೀರಭದ್ರನ ಮೂರ್ತಿಯಿದೆ. ಈ ವೀರಭದ್ರನಿಗೆ ನಾಲ್ಕು ಕೈಗಳಿದ್ದು ಬಲಗೈಗಳಲ್ಲಿ ಕ್ರಮವಾಗಿ ತ್ರಿಶೂಲ ಮತ್ತು ಕತ್ತಿಯನ್ನು ಹಿಡಿದುಕೊಂಡಿದ್ದರೇ ಎಡಗೈನ ಮೇಲಿನ ಕೈನಲ್ಲಿ ಡಮರುಗವಿದ್ದರೆ ಕೆಳಗಿನ ಕೈ ಗುರಾಣಿಯ ಮೇಲಿದೆ. ಹಾಗೇ ಕೊರಳ ಮೇಲೆ ಉದ್ದವಾದ ಹಾರವನ್ನು ಧರಿಸಿರುವ ಇದರ ಮುಖ ಸೌಮ್ಯಭಂಗಿಯಲ್ಲಿದೆ. ಗರ್ಭಗೃಹದ ವಿತಾನದಲ್ಲಿ ಪದ್ಮಶಿಲೆಯಿದೆ. ಅದರ ಸುತ್ತಲಿನ ನಾಲ್ಕು ಭಾಗಗಳಲ್ಲಿ ಕಮಲದ ದಳಗಳಿವೆ.

ಅಂತರಾಳ

ಗರ್ಭಗೃಹದ ಮುಂಭಾಗದಲ್ಲಿ ಅಂತರಾಳವಿದ್ದು ಅದರಲ್ಲಿ ನಂದಿಶಿಲ್ಪ ಮತ್ತು ಗಣಪತಿ ಶಿಲ್ಪಗಳಿವೆ. ಅಂತರಾಳದಿಂದ ಗರ್ಭಗೃಹಕ್ಕೆ ಹೋಗುವ ಬಾಗಿಲುವಾಡದ ಲಲಾಟ ಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಇದರ ಬಾಗಿಲವಾಡ ಅಲಂಕೃತವಾಗಿದ್ದು ತೋರಣಗಳಿಂದ ಕೂಡಿದೆ. ಇದರ ವಿತಾನದಲ್ಲೂ ಸಹ ಪದ್ಮಶಿಲೆಯಿದೆ.

ನವರಂಗ

ಈ ಗುಡಿಯ ನವರಂಗ ನಾಲ್ಕು ಕಂಬಗಳಿಂದ ಕೂಡಿದ್ದು ಒಂಭತ್ತು ವಿತಾನಗಳಿವೆ. ಮಧ್ಯದ ವಿತಾನದಲ್ಲಿ ಪದ್ಮದಳವಿದೆ. ಇನ್ನುಳಿದ ವಿತಾನಗಳಲ್ಲಿ ಯಾವುದೇ ದಳಗಳಾಗಲಿ ಅಥವಾ ಕೆತ್ತನೆಗಳಾಗಲಿ ಕಂಡುಬರುವುದಿಲ್ಲ. ಈ ಮಂಟಪದ ಕಂಬಗಳನ್ನು ಸಾಧಾರಣವಾಗಿ ಕೆತ್ತಲಾಗಿದೆ. ಹಾಗೆ ನವರಂಗ ಮತ್ತು ಅಂತರಾಳದ ಬಾಗಿಲುವಾಡವು ಇತ್ತೀಚೆಗೆ ಜೀರ್ಣೋದ್ದಾರಗೊಂಡಿದೆ ಹಾಗೂ ಈ ದೇವಾಲಯದ ಮುಂದೆ ವೀರಭದ್ರನಿಗೆ ಸಂಬಂಧಪಡದ ಒಂದು ಶಾಸನವಿದೆ. ಇದರ ಮುಂಭಾಗ ೨೦ ಮೀ. ಗಳಷ್ಟು ದೂರದಲ್ಲಿ ಮತ್ತೊಂದು ಗುಡಿಯಿದ್ದು ಅದರಲ್ಲಿ ವಿಜಯನಗರ ಕಾಲದಂತೆ ಕಂಡುಬರುವ ಆಂಜನೇಯನ ದೊಡ್ಡದಾದ ಮೂರ್ತಿಶಿಲ್ಪವಿದೆ. ಅದರ ಮುಂದೆ ೧೫ ಅಡಿಗಳಷ್ಟು ಉದ್ದವಿರುವ ದೀಪಸ್ತಂಭವಿದೆ. ದೀಪಸ್ತಂಭದ ದಕ್ಷಿಣಕ್ಕೆ ಸ್ವಲ್ಪ ದೂರದಲ್ಲಿ ಎತ್ತರವಾದ ಕಲ್ಲುಗಳ ಜೋಡಣೆಯ ಮೇಲೆ ೮ ಅಡಿ ಎತ್ತರದ ಮತ್ತೊಂದು ಸ್ತಂಭವಿದೆ. ಅದರ ಮೇಲಿರುವ ಚಿಕ್ಕದಾದ ಗೂಡಿನಲ್ಲಿ ಬಸವಣ್ಣನ ಶಿಲ್ಪ ಕಂಡುಬಂದಿದೆ. ಆದರೆ ವೀರಭದ್ರನ ದೇವಾಲಯದಿಂದ ಈ ಸ್ತಂಭ ದೂರವಿರುವುದು ಏಕೆ ಎಂಬುದು ಚರ್ಚೆಗೆ ಗ್ರಾಸವಾದ ವಿಷಯವಾಗಿದೆ. ಹೊಯ್ಸಳ ಕಾಲದ ಅರ್ಧಗಂಬಗಳು ಸಹ ಅಲ್ಲಲ್ಲಿ ಬಿದ್ದಿರುವುದನ್ನು ಕಾಣಬಹುದು. ಅಲ್ಲದೆ ದೇವಾಲಯದ ಅಂತರಾಳದಲ್ಲಿ ಸುಮಾರು ಏಳು ನಾಗಶಿಲ್ಪಗಳಿವೆ.

೪. ಯಮಸಂಧಿ ವೀರಭದ್ರ ದೇವಾಲಯ

ಬೇಲೂರು ತಾಲೂಕು ಕೇಂದ್ರದಿಂದ ೧೨ ಕಿ.ಮೀ. ದೂರದಲ್ಲಿರುವ ಯಮಸಂಧಿ ಗ್ರಾಮವು ಬೇಲೂರಿನಿಂದ ಚಿಕ್ಕಮಗಳೂರಿಗೆ ಹೋಗುವ ಹೆದ್ದಾರಿಯಲ್ಲಿ ಎಡಗಡೆಗೆ ಕಂಡುಬರುತ್ತದೆ. ಯಮಸಂಧಿಗೂ ಕನ್ನಡದ ಮೊದಲನೆಯ ಶಾಸನ ದೊರೆತಿರುವ ಹಲ್ಮಿಡಿ ಗ್ರಾಮಕ್ಕೂ ನಡುವೆ ಯಗಚಿ ನದಿ ಹರಿಯುತ್ತದೆ.

ಹೊಯ್ಸಳ ವೀರಬಲ್ಲಾಳನ ಮಂತ್ರಿಯಾಗಿದ್ದ ತಂತ್ರಪಾಲಕ ಶಿಖಾಮಣಿ ಹೆಮ್ಮಾಡಿ (ಪೆಮ್ಮೂಡಿ) ಕ್ರಿ.ಶ. ೧೧೭೭ರಲ್ಲಿ ಯಮಸಂಧಿಯನ್ನು ಆ ಪ್ರಾಂತ್ಯದ ಮುಖ್ಯ ಸ್ಥಳವನ್ನಾಗಿ ಮಾಡಿಕೊಂಡು ಸಮೀಪದಲ್ಲಿರುವ ಕೂಡಲೂರಿನಲ್ಲಿ ಹರಿಹರೇಶ್ವರ ದೇವಾಲಯವನ್ನು ನಿರ್ಮಿಸಿದನೆಂದು ತಿಳಿಯುತ್ತದೆ. ಯಮಸಂಧಿ ಗ್ರಾಮದಲ್ಲಿ ಒಂದು ಕಂದಕದ ಗೂಡಿನಲ್ಲಿರುವ ಪ್ರತಿಮೆಯನ್ನು ಅಲ್ಲಿನ ಜನರು ನೆಗೆ ಮುದ್ದಮ ಎಂದು ಕರೆಯುತ್ತಾರೆ. ಆದರೆ ವಾಸ್ತವವಾಗಿ ಇದು ಲಕ್ಷ್ಮಿಯ ಸಂಕೇತವಾಗಿದ್ದು ಶ್ರೀ ಫಲವನ್ನು ಹೊಂದಿರುವ ವಿಷ್ಣುವಿನ ಪ್ರತಿಮೆಯಾಗಿದೆ. ಇದರ ಬಳಿಯಲ್ಲಿಯೇ ಇರುವ ಹೊಯ್ಸಳರ ಪ್ರಾರಂಭದ ಕಾಲದ ಚಾಮುಂಡೇಶ್ವರಿ ಮತ್ತು ಗಣೇಶನ ಪ್ರತಿಮೆಗಳು ಸುಂದರವಾಗಿವೆ. ಈ ಊರಿನಲ್ಲಿ ಪ್ರಸಿದ್ಧವಾಗಿರುವ ವೀರಭದ್ರ ದೇವಾಲಯವು ಇದೇ ಕಾಲಕ್ಕೆ ಸೇರುತ್ತದೆ. ಊರಿನ ಆಚೆ ಇರುವ ದೊಡ್ಡ ಶಿಲಾಮಂಟಪ ವಿಜಯನಗರ ಕಾಲದ್ದಾಗಿದೆ.೫೫

ವೀರಭದ್ರ ದೇವಾಲಯ

ಯಮಸಂಧಿ ಗ್ರಾಮದ ಮಧ್ಯ ಬಾಗದಲ್ಲಿರುವ ಈ ವೀರಭದ್ರ ದೇವಾಲಯವು ಪೂರ್ವದಿಕ್ಕಿಗೆ ಮುಖ ಮಾಡಿದೆ. ಇದರ ಗರ್ಭಗೃಹದ ಮುಂದಿನ ಭಾಗಕ್ಕೆ ಹೆಂಚುಗಳನ್ನು ಹೊದಿಸಲಾಗಿದ್ದು ಒಳ ಭಾಗದಲ್ಲಿ ಹೊಯ್ಸಳರ ವಾಸ್ತು ಕಲಾಶೈಲಿ ಇದೆ. ಈ ದೇವಾಲಯವು ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಂಭಾಗದಲ್ಲಿ ತೆರೆದ ಮುಖಮಂಟಪವನ್ನು ಹೊಂದಿದೆ. ಇದು ಹೊಯ್ಸಳರ ಕಲಾಶೈಲಿಯನ್ನು ಹೊಂದಿದ್ದಾರು ಸಹ ಯಾವುದೇ ಸೂಕ್ಷ್ಮ ಕೆತ್ತನೆಗಳಿರುವುದಿಲ್ಲ ಮತ್ತು ಈ ದೇವಾಲಯ ವಿಜಯನಗರ ಹಾಗೂ ನಂತರದ ಮೈಸೂರು ಒಡೆಯರ ಕಾಲದಲ್ಲಿ ಜೀರ್ಣೋದ್ದಾರಗೊಂಡಿದೆ.

ತಳವಿನ್ಯಾಸ ಮತ್ತು ಹೊರ ಭಾಗದ ರಚನೆ

ಈ ದೇವಾಲಯವು ಚೌಕಾಕಾರವಾಗಿದ್ದು ನೆಲದಿಂದಲೇ ಇದರ ಅಧಿಷ್ಠಾನ ಪ್ರಾರಂಭವಾಗಿದೆ. ಗರ್ಭಗೃಹದ ಹಿಂದಿನ ಮತ್ತು ಎಡ ಬಲದ ಭಾಗದಲ್ಲಿ ದೊಡ್ಡ ಕಲ್ಲಿನ ಹೊದಿಕೆಗಳ ರಚನೆ ಇದೆ. ಕಾರಣ ಇದು ಗೋಡೆಯ ರಕ್ಷಣೆಗಿರಬಹುದು ಎನಿಸುತ್ತದೆ. ಇದರ ಭಿತ್ತಿ ಭಾಗ ಯಾವುದೇ ಅಲಂಕಾರದಿಂದ ಕೂಡಿರದೆ ಸಮಾನಾಂತರವಾಗಿದೆ. ಮೇಲೆ ಕಪೋತ ಮತ್ತು ಛಜ್ಜಗಳಿದ್ದು ನಂತರದ ಭಾಗದಲ್ಲಿ ಜೀರ್ಣೋದ್ದಾರಗೊಂಡ ಶಿಖರ ಮತ್ತು ಅದರ ಮೇಲೆ ಕಳಸವಿದೆ.

ಗರ್ಭಗೃಹದ ಮುಂಭಾಗಕ್ಕೆ ಹೆಂಚುಗಳನ್ನು ಹೊದಿಸಲಾಗಿದ್ದು ದೇವಾಲಯವನ್ನು ಮನೆಯ ರೀತಿ ನಿರ್ಮಾಣ ಮಾಡಲಾಗಿದೆ. ಕಾರಣ ಇದು ಮಲೆನಾಡು ಭಾಗವಾಗಿರುವುದರಿಂದ ಜೀರ್ಣೋದ್ದಾರದ ಸಂದರ್ಭದಲ್ಲಿ ಮಳೆಯಿಂದ ದೇವಾಲಯವನ್ನು ರಕ್ಷಣೆ ಮಾಡಲು ಹೀಗೆ ಮಾಡಿರಬಹುದು. ನಂತರ ಗರ್ಭಗೃಹದ ಮುಂದಿನ ಭಾಗದ ಅಂತರಾಳ ಮತ್ತು ನವರಂಗದ ಹೊರ ಭಿತ್ತಿಯ ಗೋಡೆಯ ಮೇಲೆ

ಸಣ್ಣ ಸಣ್ಣ ಗೆರೆಗಳುಳ್ಳ ಚಿತ್ರಗಳನ್ನು ಬಿಡಿಸಲಾಗಿದೆ. ಹಾಗೂ ಈ ದೇವಾಲಯದ ನವರಂಗದ ಮೇಲಿನ ಭಾಗ ವಿಶಾಲವಾಗಿದ್ದು ಅಲ್ಲಿಗೆ ಬೆಳಕು ಹೋಗಲು ಎಡಭಾಗದ ಭಿತ್ತಿಯ ಮೇಲೆ ಸಣ್ಣಬಾಗಿಲನ್ನು ಇಡಲಾಗಿದೆ. ಇದರ ಕಪೋತದ ಭಾಗವು ಸ್ವಲ್ಪ ಅಲಂಕೃತಗೊಂಡಿದ್ದು ದೇವಾಲಯದ ಸುತ್ತಲೂ ನಾಲ್ಕು ಅಡಿ ಎತ್ತರದ ಕಾಂಪೌಂಡ್ ಗೋಡೆ ಇದೆ.

ಗರ್ಭಗೃಹ

ಈ ದೇವಾಲಯದ ಗರ್ಭಗೃಹವು ಸುಮಾರು ಏಳು ಅಡಿಗಳಷ್ಟು ಎತ್ತರವಿದ್ದು ವಿತಾನದ ಭಾಗ ಒಂದು ಅಡಿ ಮೇಲಕ್ಕೆ ಹೋಗಿದೆ. ಗರ್ಭಗೃಹದ ಬಾಗಿಲು ಐದುವರೆ ಅಡಿಗಳಷ್ಟು ಎತ್ತರವಿದ್ದು ಅದರ ಮಧ್ಯಭಾಗದಲ್ಲಿ ಪಾಣಿಪೀಠದ ಮೇಲೆ ಕೀರಿಟವನ್ನು ಹೊಂದಿರುವ ವೀರಭದ್ರನ ಮೂರ್ತಿಶಿಲ್ಪವಿದೆ. ಈ ಪೀಠದ ಮುಂಭಾಗದಲ್ಲಿ ಉತ್ತರಕ್ಕೆ ಮುಖ ಮಾಡಿದಂತೆ ಇರುವ ಬಸವಣ್ಣನ ಕೆತ್ತನೆ ಇದೆ. ಪೀಠದ ಮೇಲಿರುವ ಸ್ವಾಮಿಗೆ ನಾಲ್ಕು ಕೈಗಳಿದ್ದು, ಕೊರಳಿನಲ್ಲಿ ಮಾಲೆ ಕಂಡುಬರುತ್ತದೆ. ಬಲಗೈನಲ್ಲಿ ಕ್ರಮವಾಗಿ ತ್ರಿಶೂಲ ಮತ್ತು ಮುಂಗೈಯಲ್ಲಿ ಕತ್ತಿ ಇದ್ದರೆ ಎಡಭಾಗದ ಮೇಲಿನ ಕೈಯಲ್ಲಿ ಡಮರುಗವಿದ್ದು ಕೆಳಗಿನ ಕೈಯನ್ನು ಗುರಾಣಿಯ ಮೇಲೆ ಇಟ್ಟುಕೊಂಡಿದೆ.

ಅಂತರಾಳಃ ಈ ಆಲಯದ ಅಂತರಾಳ ಅಲಂಕಾರ ರಹಿತವಾಗಿದ್ದು ಅಲ್ಲಿ ವೀರಭದ್ರನ ಎಡಭಾಗಕ್ಕೆ ಬಸವಣ್ಣನ ಮೂರ್ತಿ ಶಿಲ್ಪವಿದೆ.

ನವರಂಗ

ಅಂತರಾಳದ ಮುಂದಿರುವ ನವರಂಗವು ವಿಶಾಲವಾಗಿದ್ದು ಇಲ್ಲಿನ ಕಂಬಗಳನ್ನು ಸೂಕ್ಷ್ಮವಾಗಿ ಮತ್ತು ನಯವಾಗಿ ಕೆತ್ತಲಾಗಿದೆ. ಇವು ತಿರುಗಣಿಯಂತ್ರದಿಂದ ಮಾಡಿದ ಶ್ರೀಕರ ಕಂಬಗಳಾಗಿವೆ. ಈ ನವರಂಗವು ಒಂಭತ್ತು ವಿತಾನಗಳಿಂದ ಕೂಡಿದ್ದು ಮಧ್ಯದ ವಿತಾನದಲ್ಲಿ ಪದ್ಮಶಿಲೆ ಕಂಡು ಬಂದರೆ ಉಳಿದ ವಿತಾನಗಳು ಕಮಲದಳ ರಹಿತವಾಗಿದೆ. ಈ ನವರಂಗದ ಬಲಭಾಗದಲ್ಲಿ ಒಂದು ಗಣಪತಿಯ ಶಿಲ್ಪವಿದೆ.

ಮುಖಮಂಟಪ

ನವರಂಗದ ಮುಂದೆ ಮುಂಭಾಗದಲ್ಲಿ ಮಾತ್ರ ತೆರೆದುಕೊಂಡಿರುವ ಮುಖಮಂಟಪವಿದೆ. ಇದು ಸಹ ನಾಲ್ಕು ಕಂಬಗಳಿಂದ ಕೂಡಿದ್ದು, ಹೆಚ್ಚಿನ ವಿನ್ಯಾಸವನ್ನೇನು ಹೊಂದಿಲ್ಲ. ಹಾಗೂ ಮುಖಮಂಟಪದ ಮೇಲಿನ ಮಧ್ಯದ ಗೂಡಿನಲ್ಲಿ ಗಣಪತಿಯ ಶಿಲ್ಪ ಮತ್ತು ಎರಡು ಕಡೆಗಳಲ್ಲಿ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಇವುಗಳನ್ನು ಇತ್ತೀಚೆಗೆ ನಿರ್ಮಿಸಿದಂತೆ ಕಾಣುತ್ತದೆ. ಈ ದೇವಾಲಯದ ಮುಂಭಾಗದಲ್ಲಿ ಗಟ್ಟಿಯಾದ ಕಲ್ಲುಗಳಿಂದ ಜೋಡಿಸಲ್ಪಟ್ಟ ಚಿಕ್ಕದಾದ ತೆರೆದ ದ್ವಾರ ಮಂಟಪವಿದೆ. ಇದು ಆರು ಕಂಬಂಗಳಿಂದ ಕೂಡಿದ್ದು ವಿಜಯನಗರ ಕಾಲದಲ್ಲಿ ನಿರ್ಮಾಣ ಆದಂತಹ ಲಕ್ಷಣಗಳು ಕಂಡು ಬರುತ್ತವೆ.

೫. ಕರಗಲ್ಲು ವೀರಭದ್ರಸ್ವಾಮಿ – ಹಳೇಬೀಡು

ಹೊಯ್ಸಳರ ಪ್ರಮುಖ ರಾಜಧಾನಿಯಾಗಿದ್ದ ದ್ವಾರಸಮುದ್ರ(ಹಳೇಬೀಡು)ದ ವೀರಭದ್ರನ ಪರಂಪರೆಗೆ ಸಂಬಂಧಿಸಿದ ಮತ್ತೊಂದು ದೇವಾಲಯವೆಂದರೆ ಕರಗಲ್ಲು ವೀರಭದ್ರಸ್ವಾಮಿ. ಈ ದೇವಾಲಯ

ಹಳೇಬೀಡಿನ ಮಧ್ಯಭಾಗದಲ್ಲಿದ್ದು ಹೊಯ್ಸಳೇಶ್ವರ ದೇವಾಲಯದ ಪಶ್ಚಿಮಕ್ಕಿದೆ. ವೀರಭದ್ರನ ಆರಾಧನೆ, ಕಲೆ ಮತ್ತು ವಾಸ್ತುಶಿಲ್ಪದ ದೃಷ್ಟಿಯಿಂದ ಇದು ಪ್ರಮುಖ ಆಲಯವಾಗಿದೆ. ಕಾರಣ ಇದು ವೀರಭದ್ರನಿಗೆ ಸಂಬಂಧಿಸಿದ ಬೇಲೂರು ತಾಲೂಕಿನ ಏಕಮಾತ್ರ ತ್ರಿಕೂಟ ದೇವಾಲಯವಾಗಿದೆ. ಕರ್ನಾಟಕ ರಾಜ್ಯ ಸಂರಕ್ಷಿತ ಸ್ಮಾರಕಗಳ ಪಟ್ಟಿಯಲ್ಲಿರುವ ಇದನ್ನು ಸ್ಥಳೀಯರು ಜೀರ್ಣೋದ್ದಾರ ಮಾಡಿದ್ದಾರೆ. ಸುಮಾರು ನಾಲ್ಕು ಗುಂಟೆ ವಿಸ್ತೀರ್ಣದಲ್ಲಿ ಇರುವ ಇದು ಹೊಯ್ಸಳರ ಕಾಲದ ಪಾಂಸನ ಶಿಖರಗಳನ್ನು ಹೊಂದಿದೆ. ಈ ಆಲಯವು ಗರ್ಭಗೃಹ, ಅಂತರಾಳ, ರಂಗಮಂಟಪ ಮತ್ತು ದ್ವಾರ ಮಂಟಪವನ್ನು ಹೊಂದಿದೆ.

ತಳವಿನ್ಯಾಸ ಮತ್ತು ಹೊರರಚನೆ

ಈ ದೇವಾಲಯವು ನಕ್ಷತ್ರಾಕಾರವಾಗಿದ್ದು ಮುಖ್ಯದ್ವಾರ ದಕ್ಷಿಣ ದಿಕ್ಕಿಗಿದೆ. ತಳವಿನ್ಯಾಸದ ನಂತರ ಅಧಿಷ್ಠಾನ, ಭಿತ್ತಿ ಮತ್ತು ಶಿಖರದ ಭಾಗಗಳು ಕಂಡುಬರುತ್ತದೆ. ಇದರ ಅಧಿಷ್ಠಾನವು ಉಪಾನ, ಜಗತಿ, ವೇದಿ ಹಾಗೂ ಕಂಠವನ್ನು ಹೊಂದಿದೆ. ಗರ್ಭಗೃಹವಿರುವ ಹೊರಭಾಗದ ಭಿತ್ತಿಯು ಸಾಧಾರಣವಾಗಿ ಅಲಂಕಾರರಹಿತವಾಗಿದ್ದು ಹೊರಚಾಚಿದ ಮೂಲಗಳಲ್ಲಿ ಕುಡ್ಯ ಸ್ತಂಭಗಳಿವೆ. ಅದರ ಮೇಲೆ ಕಪೋತವಿದ್ದು ನಂತರದ ಭಾಗದಲ್ಲಿ ಶಿಖರವಿದೆ. ಇದು ತ್ರಿಕೂಟ ಅಂದರೆ ಮೂರು ಗರ್ಭಗುಡಿಗಳನ್ನು ಹೊಂದಿದ್ದು ಅದರ ಮೇಲೆ ಶಿಖರಗಳಿವೆ. ಅದರ ಪೈಕಿ ಎರಡರ ಮುಂಭಾಗದಲ್ಲಿ ಮಾತ್ರ ಶುಕನಾಸಿ ಇದೆ. ಈ ಶಿಖರಗಳು ಪಾಂಸನ ಮಾದರಿಯವಾಗಿದ್ದು ಮೆಟ್ಟಿಲು ಮೆಟ್ಟಿಲಾಕಾರವಾಗಿವೆ. ಅದರ ಮೇಲೆ ನಾಸಿ, ಘಂಟಾ ಮತ್ತು ಕಳಶವಿದೆ. ಮುಂಭಾಗದ ದ್ವಾರ ಬಾಗಿಲಿನ ಮೇಲೆ ಕೈಪಿಡಿ ಗೋಡೆಯಿದ್ದು ಪಕ್ಕದಲ್ಲಿರುವ ಎರಡು ಬಸವಣ್ಣನ ಶಿಲ್ಪಗಳು ದಕ್ಷಿಣ ದಿಕ್ಕಿಗೆ ಮುಖಮಾಡಿವೆ. ಮತ್ತು ದ್ವಾರಬಾಗಿಲಿನ ಎರಡೂ ಕಡೆಗಳಲ್ಲಿ ಹಾಗೂ ಮುಂಭಾಗದ ದ್ವಾರ ಬಾಗಿಲಿನಲ್ಲಿ ಸಾಧಾರಣವಾದ ಜಾಲಾಂದ್ರಗಳಿವೆ. ಇದರ ಎಡಭಾಗದಲ್ಲಿ ಮತ್ತೊಂದು ಗುಡಿಯಿದ್ದು ಅದರಲ್ಲಿ ಶಿವಲಿಂಗವಿದೆ. ಈ ದೇವಾಲಯದ ವೀರಭದ್ರನಿರುವ ಗರ್ಭಗುಡಿಯ ಶುಕನಾಸಿಯ ಮೇಲೆ ಸಳನು ಹುಲಿಯನ್ನು ಕೊಲ್ಲುತ್ತಿರುವ ಹೊಯ್ಸಳ ರಾಜಲಾಂಛನದ ಶಿಲ್ಪವಿದೆ.

ಗರ್ಭಗುಡಿ – ೧

ಮೊದಲನೆ ಗರ್ಭಗುಡಿ ದ್ವಾರಬಾಗಿಲಿನಿಂದ ಒಳಗೆ ಹೋದರೆ ರಂಗಮಂಟಪದ ಬಲಭಾಗಕ್ಕಿದೆ. ಇದು ವೀರಭದ್ರಸ್ವಾಮಿಯ ವಿಗ್ರಹವಿರುವ ಗರ್ಭಗುಡಿ ಇದೆ. ಇದರ ಮಧ್ಯಭಾಗದಲ್ಲಿ ಸುಮಾರು ಒಂದುವರೆ ಅಡಿ ಎತ್ತರವಿರುವ ಪಾಣಿಪೀಠದ ಮೇಲೆ ನಾಲ್ಕು ಅಡಿಯ ಸ್ವಾಮಿಯ ಶಿಲ್ಪವಿದೆ. ಈ ಪೀಠದ ಮುಂಭಾಗದಲ್ಲಿ ಬಲಕ್ಕೆ ಮುಖಮಾಡಿದ ಬಸವಣ್ಣನ ಕೆತ್ತನೆಯಿರುವುದರ ಜೊತೆಗೆ ವಿಗ್ರಹದ ಬಲಭಾಗಕ್ಕೆ ಪ್ರಣಾಳಿಕೆಯಿದೆ. ಇದರ ಹಿಂಭಾಗದಲ್ಲಿ ಗೋಡೆಗೆ ಹೊಂದಿಕೊಂಡ ಹಾಗೆ ಅರ್ಧಗಂಬಗಳಿವೆ. ವಿತಾನದಲ್ಲಿ ಕಮಲದ ದಳಗಳಿಂದ ಕೂಡಿದ ನಾಭಿಚ್ಛಂದವಿದೆ. ಈ ಗರ್ಭಗೃಹದ ಮುಂದೆ ಅಂತರಾಳವಿದ್ದು ಅದು ಅಲಂಕಾರರಹಿತವಾಗಿದೆ. ಇದರ ಬಾಗಿಲುವಾಡದ ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಹಾಗೂ ಅಂತರಾಳದ ವಿತಾನದಲ್ಲಿ ಪದ್ಮಶಿಲೆಯಿದ್ದು ಆ ಭಾಗ ಅಲಂಕಾರರಹಿತವಾಗಿದೆ.

ಆದರೆ ಅಂತರಾಳದ ದ್ವಾರಬಾಗಿಲಿನಲ್ಲಿ ಸಾಮಾನ್ಯ ಅಲಂಕಾರವಿದೆ. ಬಾಗಿಲುವಾಡದಲ್ಲಿ ಜಾಲಾಂದ್ರಗಳಿದ್ದು ಅದರ ಕೆಳಗೆ ಶೈವ ದ್ವಾರಪಾಲಕರ ಶಿಲ್ಪಗಳಿವೆ. ಅದರ ಮುಂಭಾಗದಲ್ಲಿ ವೀರಭದ್ರನ ಕಡೆಗೆ ಮುಖಮಾಡಿದಂತೆ ಇರುವ ನಂದಿ ಶಿಲ್ಪವಿದೆ. ಒಳಗಿನ ವೀರಭದ್ರನ ಬಲಭಾಗದ ಕೈಯಲ್ಲಿ ಕತ್ತಿಯಿದ್ದು ಎಡಭಾಗದ ಕೈಯನ್ನು ಪೀಠದ ಮೇಲೆ ಇಟ್ಟುಕೊಂಡಿರುವ ವಿನ್ಯಾಸವಿದೆ. ಮತ್ತು ಕೊರಳಲ್ಲಿ ಹಾರ, ತಲೆಯಲ್ಲಿ ಕಿರೀಟವಿದೆ.

ಗರ್ಭಗೃಹ-೨

ಈ ಎರಡನೇ ಗರ್ಭಗೃಹ ದ್ವಾರಬಾಗಿಲಿಗೆ ನೇರವಾಗಿದ್ದು ವೀರಭದ್ರ ಗುಡಿಯ ಬಲಭಾಗಕ್ಕಿದೆ. ಇದರ ಒಳಭಾಗದಲ್ಲಿರುವ ಪಾಣಿಪೀಠದ ಮೇಲೆ ಚಿಕ್ಕ ಗಾತ್ರದ ಶಿವಲಿಂಗವಿದೆ. ಹಾಗೂ ವಿತಾನದಲ್ಲಿ ಪದ್ಮಶಿಲೆ ಕಂಡು ಬರುತ್ತದೆ. ಮುಂಭಾಗದಲ್ಲಿ ಅಂತರಾಳವಿರುವುದರ ಜೊತೆಗೆ ಅದರ ವಿತಾನದಲ್ಲಿ ಸರಳ ಕಮಲದಳಗಳಿವೆ. ಈ ಭಾಗದ ರಚನೆ ಮತ್ತು ಅರ್ಧಗಂಭಗಳು ಸಾದಾ ಕೆತ್ತನೆಯಿಂದ ಕೂಡಿದೆ. ಅಂತರಾಳದ ಬಾಗಿಲುವಾಡವು ಸಾಮಾನ್ಯವಾಗಿದೆ.

ಗರ್ಭಗೃಹ-೩

ವೀರಭದ್ರನ ಮುಂಭಾಗದ ಮೂರನೇ ಗರ್ಭಗೃಹವು ಪೂರ್ವಾಭಿಮುಖವಾಗಿದೆ. ಇದರ ಶಿಖರದ ಮುಂದೆ ಶುಕನಾಸಿಯಿಲ್ಲದ ಕಾರಣ ಇದು ಅಂತರಾಳವನ್ನು ಹೊಂದಿಲ್ಲ. ಇದರ ಒಳಭಾಗದಲ್ಲೂ ಸಹ ಶಿವಲಿಂಗವಿದೆ.

ಈ ಗರ್ಭಗೃಹಗಳ ಮುಂಭಾಗದಲ್ಲಿ ನಾಲ್ಕು ಕಂಬಗಳಿಂದ ಕೂಡಿದ ರಂಗಮಂಟಪವಿದೆ. ಈ ಕಂಬಗಳು ಕೆಳಗೆ ಚೌಕಾಕಾರದ ಕಾಂಡ ಮತ್ತು ಮದ್ಯದಲ್ಲಿ ವೃತ್ತಾಕಾರವಾಗಿವೆ. ಇದರ ಮೇಲ್ಭಾಗದಲ್ಲಿ ವಿತಾನವಿದ್ದು ಅದರಲ್ಲಿ ಚಿಕ್ಕದಾದ ಭುವನೇಶ್ವರಿ ಇದೆ.

ದ್ವಾರಮಂಟಪದಿಂದ ಒಳಹೋದರೆ ಬಲಭಾಗದಲ್ಲಿ ಮತ್ತೊಂದು ಶಿವಲಿಂಗವಿರುವ ಗುಡಿಯಿದೆ. ಇದು ಕೂಡ ಎತ್ತರದ ಅಧಿಷ್ಠಾನವನ್ನು ಹೊಂದಿದೆ ಹಾಗೂ ಅದರಲ್ಲಿ ಉಪಾನ, ಜಗತಿ, ವೇದಿ ಮತ್ತು ಕಂಠಗಳಿವೆ. ಮುಂಭಾಗದಲ್ಲಿ ಅರ್ಧಗಂಬಗಳಿಂದ ಕೂಡಿದ ಮತ್ತು ಜಾಲಂದ್ರಗಳಿರುವ ಅಲ್ಪಾಲಂಕೃತ ಬಾಗಿಲುವಾಡವಿದೆ. ಇದರ ಅಧಿಷ್ಠಾನದ ಮೇಲೆ ಭಿತ್ತಿಯಿದ್ದು ಅದು ಅಲಂಕಾರರಹಿತವಾಗಿದೆ. ಅದರ ಮೇಲೆ ಕಪೋತವಿದ್ದರೂ ಸಹ ಮೇಲ್ಭಾಗದಲ್ಲಿ ಯಾವುದೇ ಶಿಖರವಿಲ್ಲ. ಇದರ ಒಳಭಾಗದಲ್ಲಿ ಮತ್ತು ಮುಂಭಾಗದಲ್ಲಿ ಎದುರು ಮಂಟಪವಿದೆ. ಗರ್ಭಗೃಹದ ಒಳಗೆ ಬಲಭಾಗದ ಪ್ರಣಾಳಿಕೆಯಿರುವ ಸುಮಾರು ಒಂದುವರೆ ಅಡಿ ಎತ್ತರದ ಶಿವಲಿಂಗವಿದೆ. ಇದರ ಬಾಗಿಲುವಾಡವು ನಾಲ್ಕು ಅಡಿ ಎತ್ತರವಿರುವುದು ಕಂಡು ಬರುತ್ತದೆ. ಶಿವಲಿಂಗದ ಎದುರು ಮಂಟಪದ ಬಲಭಾಗದಲ್ಲಿ ಒಂದು ದೊಡ್ಡದಾದ ಮತ್ತು ಆರು ಮಧ್ಯಮದ ಗಾತ್ರದ ನಾಗಶಿಲ್ಪಗಳಿವೆ ಹಾಗೂ ಎಡಭಾಗದಲ್ಲಿ ನಾಲ್ಕು ಹಂತ ಮತ್ತು ಮೂರು ಹಂತಗಳಿಂದ ಕೂಡಿದ ಎರಡು ವೀರಗಲ್ಲುಗಳಿವೆ. ಲಿಂಗವಿರುವ ಬಾಗಿಲುವಾಡದ ಎಡಭಾಗದ ಗೋಡೆಯಲ್ಲಿ ಒಂದು ಗಣಪತಿಯ ಶಿಲ್ಪವು ಸಹ ಇದೆ.

ಈ ದೇವಾಲಯದ ಮುಂಭಾಗದಲ್ಲಿ ದಕ್ಷಿಣ ದಿಕ್ಕಿಗೆ ಮುಖಮಾಡಿದಂತೆ ಇರುವ ದ್ವಾರಮಂಟಪವಿದೆ. ಇದರಲ್ಲಿ ನಾಲ್ಕು ಪೂರ್ಣಕಂಬಗಳು ಮತ್ತು ಹತ್ತು ಅರ್ಧಗಂಬಗಳಿವೆ. ಈ ಪೂರ್ಣಕಂಬಗಳ ಕಾಂಡವು ಚೌಕಾಕಾರವಾಗಿದ್ದು ಅದರ ಮಧ್ಯಭಾಗ ವೃತ್ತಾಕಾರವಾಗಿದೆ. ಇದು ಕೂಡ ಎತ್ತರದ ಅಧಿಷ್ಠಾನ ಹೊಂದಿದ್ದು ಮುಂಭಾಗದಲ್ಲಿ ಎರಡು ಆನೆಗಳ ಶಿಲ್ಪಗಳಿವೆ.

೬. ಪುಷ್ಪಗಿರಿ ವೀರಭದ್ರ ದೇವಾಲಯ

ಹಳೇಬೀಡಿನಿಂದ ದಕ್ಷಿಣಕ್ಕೆ ಸುಮಾರು ಒಂದುವರೆ ಕಿ.ಮೀ ದೂರದಲ್ಲಿರುವ ಒಂದು ಸಣ್ಣಬೆಟ್ಟ ಈ ಪುಷ್ಪಗಿರಿ. ಸುಮಾರು ಮುನ್ನೂರು ಅಡಿ ಎತ್ತರವಾಗಿರುವ ಈ ಬೆಟ್ಟದ ಮಧ್ಯಭಾಗವನ್ನು ಸಮತಳವಾಗಿಸಿ ವಿಸ್ತಾರವಾಗಿ ಮಲ್ಲಿಕಾರ್ಜುನ, ವೀರಭದ್ರ ಮತ್ತು ಬಸವಣ್ಣನ ದೇವಾಲಯಗಳನ್ನು ನಿರ್ಮಿಸಲಾಗಿದೆ. ಇಲ್ಲಿರುವ ಮಲ್ಲಿಕಾರ್ಜುನ ದೇವಾಲಯ ಮೊದಲು ಬಸದಿಯಾಗಿದ್ದು ನಂತರ ಕಾಳಾಮುಖರ ಪ್ರಭಾವದಿಂದ ಹೊಯ್ಸಳರ ಕಾಲದಲ್ಲಿ ಹೆಚ್ಚಿನ ಬದಲಾವಣೆಗಳೊಂದಿಗೆ ಪುನರ್ ನಿರ್ಮಾಣಗೊಂಡು ಶೈವ ದೇವಾಲಯವಾಗಿದೆ. ಹಾಗೆಯೇ ಅದೇ ಸಂದರ್ಭದಲ್ಲಿ ನಿರ್ಮಿಸಿದ ಈ ವೀರಭದ್ರ ದೇವಾಲಯವೂ ಸಹ ಹನ್ನೆರಡನೆಯ ಶತಮಾನದ ಹೊಯ್ಸಳ ವಾಸ್ತುಶೈಲಿಯನ್ನು ಹೊಂದಿದೆ. ಈ ಶಿವಾಲಯವು ಎತ್ತರವಾದ ಅಧಿಷ್ಠಾನವನ್ನು ಹೊಂದಿದ್ದು ಇದರ ಮೇಲೆ ಜೀರ್ಣೋದ್ಧಾರಗೊಂಡಿರುವ ಅಲಂಕಾರರಹಿತವಾದ ಗಾರೆಯ ಭಿತ್ತಿಯಿದೆ. ಭಿತ್ತಿಗೋಡೆಯ ಮೇಲೆ ಸರಳವಾದ ಸ್ತಂಭಿಕೆಗಳು ಕಂಡುಬಂದಿದ್ದು ಈ ಗುಡಿಯ ಎಡಭಾಗದ ಭಿತ್ತಿಯಲ್ಲಿ ತೋರಣದ ರೀತಿಯ ಉಬ್ಬಿದ ಶಿಲ್ಪಗಳಿವೆ. ಹಾಗೂ ಇದು ಮೇಲ್ಭಾಗದಲ್ಲಿ ಯಾವುದೇ ರೀತಿಯ ಶಿಖರವನ್ನು ಹೊಂದಿಲ್ಲ. ಹೊಯ್ಸಳರ ಸೂಕ್ಷ್ಮ ಕೆತ್ತನೆಯಿರುವ ಈ ದೇಗುಲದಲ್ಲಿ ಗರ್ಭಗೃಹ, ಅರ್ಧಮಂಟಪ ಮತ್ತು ನವರಂಗವಿದೆ.

ಗರ್ಭಗೃಹ

ಈ ದೇವಾಲಯದ ಗರ್ಭಗೃಹವು ಅಲಂಕೃತ ಅರ್ಧಗಂಬಗಳಿಂದ ಕೂಡಿದ್ದು ಮಧ್ಯದಲ್ಲಿ ಒಂದು ಅಡಿ ಎತ್ತರದ ಪಾಣಿಪೀಠದ ಮೇಲೆ ಸುಮಾರು ಐದು ಅಡಿಗಳ ವೀರಭದ್ರನ ಶಿಲ್ಪವಿದೆ. ಕಿರೀಟವನ್ನು ಹೊಂದಿರುವ ಈ ಶಿಲ್ಪವು ಸೌಮ್ಯ ಭಂಗಿಯಲ್ಲಿದ್ದು ನಾಲ್ಕು ಕೈಗಳನ್ನು ಹೊಂದಿದೆ. ಬಲಭಾಗದ ಹಿಂದಿನ ಕೈಯಲ್ಲಿ ಬಾಣ ಮತ್ತು ಮುಂದಿನ ಕೈಯಲ್ಲಿ ಕತ್ತಿ ಇದ್ದರೆ ಎಡಭಾಗದಲ್ಲಿ ಕ್ರಮವಾಗಿ ಬಿಲ್ಲು ಮತ್ತು ಗುರಾಣಿಯಿದೆ. ಕೊರಳಿನಲ್ಲಿ ಹಾರವಿದ್ದು ಎಡಭಾಗದ ಕಾಲನ್ನು ಪೂರ್ಣವಾಗಿ ಎಡಕ್ಕೆ ತಿರುಗಿಸಿದಂತೆ ಇದೆ. ಈ ಮೂರ್ತಿಯ ಬಲಭಾಗದ ಕೆಳಗೆ ದಕ್ಷನು ನಮಿಸುತ್ತಿರುವಂತಹ ಶಿಲ್ಪದ ಕೆತ್ತನೆಯಿದೆ.

ಅರ್ಧಮಂಟಪ

ಗರ್ಭಗೃಹದ ಮುಂಭಾಗದಲ್ಲಿ ಅರ್ಧಮಂಟಪವಿದ್ದು ಅಲಂಕೃತವಾಗಿದೆ. ಬಾಗಿಲುವಾಡದ ತೋರಣವು ಸಾಲಂಕೃತ ಮಾದರಿಯದಾಗಿದ್ದು ಲಲಾಟಬಿಂಬದಲ್ಲಿ ಗಜಲಕ್ಷ್ಮಿಯ ಶಿಲ್ಪವಿದೆ. ಇದರ ಬಾಗಿಲು ಸಹ ಸೂಕ್ಷ್ಮ ಕೆತ್ತನೆಯಿಂದ ಕೂಡಿದ್ದು ಅದರ ಕೆಳಗೆ ದ್ವಾರಪಾಲಕರ ಶಿಲ್ಪಗಳಿವೆ. ಇದರ ಮೇಲೆ ಅಷ್ಟಕೋನಾಕೃತಿಯ ಪದ್ಮಶಿಲಾ ವಿತಾನವು ಸಹ ಇದೆ.

ನವರಂಗ

ಅರ್ಧಮಂಟಪದ ಮುಂದಿನ ಭಾಗದಲ್ಲಿ ನವರಂಗವಿದ್ದು ಇದರ ನಾಲ್ಕು ಕಂಬಗಳು ಹೆಚ್ಚು ಅಲಂಕೃತಗೊಂಡಿವೆ. ಇವು ತಿರುಗಣಿಯಿಂದ ಮಾಡಲ್ಪಟ್ಟ ಶ್ರೀಕರ ಕಂಬಗಳಾಗಿದ್ದು, ನಯವಾಗಿ ಮತ್ತು ಸೂಕ್ಷ್ಮವಾಗಿ ಕೆತ್ತನೆ ಮಾಡಿದಂತಹವುಗಳಾಗಿವೆ. ಇದರ ಬಾಗಿಲುವಾಡವು ಜಾಲಾಂಧ್ರಗಳಿಂದ ವಿನ್ಯಾಗೊಂಡಿದ್ದು ಅದರ ಮೇಲಿನ ಭಾಗದಲ್ಲಿ ಮಕರತೋರಣವಿದೆ. ಈ ತೋರಣದ ಮಧ್ಯೆ ಲಕ್ಷ್ಮಿಯ ಶಿಲ್ಪವಿದ್ದು ಅದರ ಎರಡೂ ಭಾಗದಲ್ಲಿ ಮಕರ ತೋರಣದ ಕೆತ್ತನೆಯಿದೆ. ಇದರ ಮೇಲೆ ಒಂದು ಶಾಸನವೂ ಸಹ ಇದ್ದು ಅದು ಸ್ವಲ್ಪಮಟ್ಟಿಗೆ ಅಸ್ಪಷ್ಟವಾಗಿದೆ. ಹಾಗೂ ಇದರ ಅರ್ಧಗಂಬಗಳ ಪಕ್ಕದಲ್ಲಿ ಎರಡು ಶೈವ ದ್ವಾರಪಾಲಕರ ಶಿಲ್ಪಗಳಿದ್ದು ಅದರ ಹತ್ತಿರ ಇತ್ತೀಚೆಗೆ ತಂದಿಟ್ಟಿರುವ ನಾಗರ ಕಲ್ಲುಗಳಿವೆ. ಈ ಮಂಟಪಕ್ಕೆ ಒಂಭತ್ತು ಅಂಕಣಗಳಿದ್ದು ಮಧ್ಯದ ವಿತಾನದಲ್ಲಿ ಪದ್ಮಶಿಲೆ ಮತ್ತು ನಾಭಿಚ್ಛಂದವಿದೆ. ಹಾಗೂ ಇತರ ವಿತಾನಗಳಲ್ಲಿ ಪದ್ಮದಳಗಳು ಮತ್ತು ತಾವರೆ ಹೂವುಗಳ ಅಲಂಕರಣವಿದೆ. ಈ ಗುಡಿಯ ಪ್ರವೇಶ ದ್ವಾರದ ಬಾಗಿಲುವಾಡವು ಸಾಮಾನ್ಯವಾಗಿದ್ದು ಅರ್ಧಗಂಬಗಳು ಹಾಗೂ ತೋರಣ ಕಂಬಗಳಲ್ಲಿ ಮಾತ್ರ ಹೆಚ್ಚಿನ ಅಲಂಕಾರವಿದೆ. ಇದರ ಮುಂಭಾಗದಲ್ಲಿ ಹದಿನಾಲ್ಕು ಅಡಿ ಎತ್ತರದ ದೀಪಸ್ತಂಭವೂ ಸಹ ಇರುವುದು ಕಂಡುಬರುತ್ತದೆ. ಹಾಗೂ ನವರಂಗದ ಮುಂದೆ ಚಿಕ್ಕದಾದ ಮುಖಮಂಟಪವಿದ್ದು ಅದರ ಮೇಲ್ಭಾಗದಲ್ಲಿ ಇತ್ತೀಚಿನ ವೀರಭದ್ರ, ದಕ್ಷ ಮತ್ತು ಈಶ್ವರನ ಶಿಲ್ಪಗಳಿವೆ.

೭. ಶೆಟ್ಟಿಹಳ್ಳಿ ದೇವಾಲಯ

ಬೇಲೂರಿನಿಂದ ಚಿಕ್ಕಮಗಳೂರಿಗೆ ಹೋಗುವ ಮಾರ್ಗಮಧ್ಯದಲ್ಲಿ ಕನಾಯ್ಕನಹಳ್ಳಿಯಿಂದ ಬಲಕ್ಕೆ ತಿರುಗಿ ಸುಮಾರು ೮–ಮೀ ದೂರ ಕ್ರಮಿಸಿದರೆ ಶೆಟ್ಟಿಹಳ್ಳಿ ಗ್ರಾಮ ಸಿಗುತ್ತದೆ. ಇಲ್ಲಿರುವ ಮೂಲ ವೀರಭದ್ರ ದೇವಾಲಯವನ್ನು ಕೆಡವಿ ಇತ್ತೀಚೆಗೆ ಹೊಸದನ್ನು ನಿರ್ಮಿಸಲಾಗುತ್ತಿದೆ. ಆದರೆ ಗರ್ಭಗುಡಿಯ ಒಳಗೆ ಪ್ರಾಚೀನಕಾಲದ ಮೂಲ ವೀರಭದ್ರನ ವಿಗ್ರಹವಿದೆ. ಇದರ ರಚನೆ ಮತ್ತು ದೇವಾಲಯದ ಮುಂದಿನ ದೀಪಸ್ತಂಭವನ್ನು ನೋಡಿದರೆ ಇಲ್ಲಿ ಒಂದು ಪ್ರಾಚೀನ ದೇವಾಲಯವಿತ್ತು ಎಂದು ಹೇಳಬಹುದು. ಇತ್ತೀಚೆಗೆ ಕಟ್ಟಿರುವ ಈ ದೇವಸ್ಥಾನದಲ್ಲಿ ಗರ್ಭಗೃಹವು ವಿಸ್ತಾರವಾಗಿದ್ದು ಅದರ ಮಧ್ಯಭಾಗದಲ್ಲಿ ವೀರಭದ್ರನ ಮೂರ್ತಿಯಿದೆ ಸುಮಾರು ಒಂದು ಅಡಿ ಎತ್ತರದ ಪಾಣಿಪೀಠವಿದ್ದು ಅದರ ಮೇಲೆ ವೀರಭದ್ರನ ಶಿಲ್ಪವಿದೆ. ಈ ಮೂರ್ತಿಯು ನಾಲ್ಕು ಕೈಗಳನ್ನು ಹೊಂದಿದ್ದು ಬಲಭಾಗದಲ್ಲಿ ಬಾಣ ಮತ್ತು ಕತ್ತಿ ಹಿಡಿದುಕೊಂಡಿದ್ದರೆ ಎಡಭಾಗದ ಕೈಗಳಲ್ಲಿ ಬಿಲ್ಲು ಮತ್ತು ಗುರಾಣಿಯಿದೆ. ಕಿರೀಟಧಾರಿಯಾಗಿರುವ ಈ ವಿಗ್ರಹದ ಕೊರಳಿನಲ್ಲಿ ಹಾರಗಳಿದ್ದು ಎರಡು ಕಾಲುಗಳಲ್ಲಿ ಕಾಲ್ಗಡಗಳಿವೆ. ಈ ಕಾಲುಗಳ ಮಧ್ಯ ಚಿಕ್ಕದಾದ ಬಸವಣ್ಣನ ಶಿಲ್ಪವಿದೆ.

೮. ಮಾಳೆಗೆರೆ ವೀರಭದ್ರೇಶ್ವರ ದೇವಾಲಯ

ಮಾಳೆಗೆರೆ ಗ್ರಾಮವು ಬೇಲೂರಿನಿಂದ ಸಕಲೇಶಪುರಕ್ಕೆ ಹೋಗುವ ಮಾರ್ಗದಲ್ಲಿ ಇದ್ದು ತಾಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಇಲ್ಲೂ ಸಹ ವೀರಭದ್ರ ಸ್ವಾಮಿಯ ದೇವಾಲಯವಿದ್ದು ಇದರ

ಪ್ರಾಚೀನತೆ ತಿಳಿದು ಬಂದಿಲ್ಲ. ಆದರೆ ಈ ದೇವಾಲಯವನ್ನು ಇತ್ತೀಚೆಗೆ ನಿರ್ಮಿಸಿದ್ದರೂ ಸಹ ಗರ್ಭಗೃಹದ ಒಳಗಿರುವ ವೀರಭದ್ರ ಕಾಳಿ ಶೂಲಬ್ರಹ್ಮಶಿಲ್ಪ ಮಹಾಸತಿಗಲ್ಲುಗಳ ಶಿಲ್ಪಗಳು ಪ್ರಾಚೀನವವೇ ಆಗಿವೆ. ಈ ದೇವಾಲಯದ ಮುಂದಿರುವ ಮಂಟಪವನ್ನು ನೋಡಿದರೆ ಇಲ್ಲಿ ಒಂದು ಪ್ರಾಚೀನ ಗುಡಿಯಿತ್ತೆಂದು ಅರ್ಥೈಸಿಕೊಳ್ಳಬಹುದು. ಇತ್ತೀಚಿನ ಈ ಆಲಯವು ಗರ್ಭಗೃಹ ಮತ್ತು ಕಂಬ ರಹಿತ ಮಂಟಪವನ್ನು ಹೊಂದಿದ್ದು ಜಗತಿಯ ಮೇಲೆ ಇದನ್ನು ಕಟ್ಟಲಾಗಿದೆ. ಭಿತ್ತಿಯ ಸಾಮಾನ್ಯವಾಗಿದ್ದು ಮೇಲೆ ಛಜ್ಜ ಮತ್ತು ಕೈಫಿಡಿ ಗೋಡೆಯಿದೆ ಅದರ ಮೇಲೆ ಇತ್ತೀಚಿನ ಶಿಖರ ಮತ್ತು ಕಳಸವನ್ನು ನಿರ್ಮಾಣ ಮಾಡಲಾಗಿದೆ.

೯. ಇಂಟಿತೊಳಲು

ಬೇಲೂರಿನಿಂದ ಸಕಲೇಶಪುರಕ್ಕೆ ಹೋಗುವ ಮಾರ್ಗ ಮಧ್ಯದಲ್ಲಿ ಬಿಕ್ಕೋಡಿನಿಂದ ಎಡಕ್ಕೆ ತಿರುಗಿ ಎಂಟು ಕಿ.ಮೀ. ಕ್ರಮಿಸಿದರೆ ಇಂಟಿತೊಳಲು ಗ್ರಾಮ ಸಿಗುತ್ತದೆ. ಇಲ್ಲಿರುವ ವೀರಭದ್ರ ದೇವಾಲಯ ಪ್ರಾದೇಶಿಕವಾಗಿ ಪ್ರಸಿದ್ಧಿ ಪಡೆದಿದ್ದು, ತನ್ನ ಭಕ್ತರ ಸಂಖ್ಯೆಯನ್ನು ಹೆಚ್ಚಿಸಿಕೊಂಡಿದೆ ಈ ದೇವಾಲಯದ ಮುಂದೇ ವೀರಗಲ್ಲುಗಳು ಮತ್ತು ಪ್ರಾಚೀನ ಬಾವಿ ಇರುವುದನ್ನು ಗಮನಿಸಿದರೆ ವೀರಭದ್ರ ದೇವಾಲಯವು ಪ್ರಾಚೀನವಾದದ್ದು ಎಂಬ ಸಂಶಯಕ್ಕೆ ಎಡೆಮಾಡಿಕೊಡುತ್ತವೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವನ್ನು ಇತ್ತೀಚೆಗೆ ಜೀರ್ಣೋದ್ಧಾರ ಮಾಡಲಾಗಿದೆ. ಒಳಗೆ ಎರಡು ಗರ್ಭಗುಡಿಗಳು ಮತ್ತು ಮುಂಭಾಗದಲ್ಲಿ ವಿಶಾಲವಾದ ಕಂಬರಹಿತ ಸಭಾಮಂಟಪವಿದೆ. ಈ ಗರ್ಭಗೃಹದ ಮೇಲೆ ನೂತನ ಮಾಧರಿಯ ಶಿಖರಗಳನ್ನು ನಿರ್ಮಿಸಲಾಗಿದೆ. ದ್ವಿಕೂಟ ದೇವಾಲಯವಾಗಿರುವ ಇದು ಸರಳ ಅದಿಷ್ಟಾನವನ್ನು ಹೊಂದಿದ್ದು ಗರ್ಭಗುಡಿಯು ಭಿತ್ತಿ ಸಾಧಾರಣವಾಗಿರುವುದರಿಂದ ಜೊತೆಗೆ ಸಭಾಮಂಟಪದ ಭಿತ್ತಿಗೋಡೆಯ ಮೇಲೆ ನಾಲ್ಕು ಕಿಟಕಿಗಳಿವೆ ಅದರ ಮೇಲೆ ಒಂದು ಪಟ್ಟಿಕೆಯಿದ್ದು ಮೇಲೆ ಕೈಫಿಡಿ ಗೋಡೆಯಿದೆ. ದೇವಾಲಯದ ಗರ್ಭಗುಡಿಯಲ್ಲಿ ವೀರಭದ್ರೇಶ್ವರ ಮತ್ತು ಭೈರವೇಶ್ವರರ ಮೂರ್ತಿ ಶಿಲ್ಪಗಳಿವೆ.

೧೦. ವೀರಭದ್ರ ದೇವಾಲಯ ಸಿದ್ದಾಪುರ

ಹಳೇಬೀಡಿನಿಂದ ಸುಮಾರು ಒಂದು ಕಿ.ಮೀ ದೂರದಲ್ಲಿ ಪುಷ್ಪಗಿರಿ ಮಲ್ಲಿಕಾಜುನ ಸ್ವಾಮಿ ಬೆಟ್ಟಕ್ಕೆ ಹೋಗುವ ಮಾರ್ಗಮಧ್ಯೆ ಈ ಗ್ರಾಮವಿದೆ ಇಲ್ಲಿನ ಸಿದ್ದೇಶ್ವರ ದೇವಾಲಯದ ಹಿಂಭಾಗದಲ್ಲಿ ವೀರಭದ್ರೇಶ್ವರನ ದೇವಾಲಯವಿದ್ದು ಇದು ಉತ್ತರ ದಿಕ್ಕಿಗೆ ಮುಖ ಮಾಡಿದೆ. ಇಲ್ಲಿನ ಶಾಸನ ದೇವಾಲಯದ ರಚನೆ ಹಾಗೂ ಕಂಬಗಳ ವಿನ್ಯಾಸವನ್ನು ನೋಡಿದರೆ ಇದೊಂದು ಸಾದಾ ಕೆತ್ತನೆಯಿರುವ ಅಲಂಕಾರ ರಹಿತವಾದ ಹೊಯ್ಸಳ ದೇವಾಲಯವಾಗಿದೆ. ಇದನ್ನು ಜೀರ್ಣೋದ್ದಾರಗೊಳಿಸಲಾಗಿದ್ದು ಒಳಭಾಗದಲ್ಲಿ ಗರ್ಭಗುಡಿ ಅಂತರಾಳ ಮತ್ತು ಮುಂಭಾಗದಲ್ಲಿ ಇತ್ತೀಚೆಗೆ ನಿರ್ಮಿಸಿರುವ ಮುಖ ಮಂಟಪವಿದೆ. ದೇವಾಲಯದ ಬಾಗಿಲು ವಾಡಗಳು ಸಹ ಯಾವುದೇ ಶಿಲ್ಪಗಳಿಲ್ಲದ ಸಾಧಾರಣ ರಚನಾ ವಿನ್ಯಾಸವನ್ನು ಹೊಂದಿದೆ.

ಗರ್ಭಗೃಹದ ಮಧ್ಯಭಾಗದಲ್ಲಿ ಪಾಣಿಪೀಠವಿದ್ದು ಅದರ ಮೇಲೆ ವೀರಭದ್ರನ ಮೂರ್ತಿಇದೆ. ಈ ಪೀಠದ ಕೆಳಗೆ ಮಧ್ಯಭಾಗದಲ್ಲಿ ಬಲಗಾಲನ್ನು ಮೇಲಕ್ಕೆತ್ತಿ ಪೂರ್ವದಿಕ್ಕಿಗೆ ಮುಖ ಮಾಡಿರುವಂತೆ ಇರುವ ಬಸವಣ್ಣನ ಕೆತ್ತನೆಯಿದೆ. ಈ ವೀರಭದ್ರ ಶಿಲ್ಪದ ಹಿಂಭಾಗ ಪ್ರಭಾವಳಿ ಇದ್ದು ಅದರ ಎರಡೂ

ಕಡೆ ಸಿಂಹಗಳು ಬಾಯಿತೆರೆದು ಕೊಂಡಿರುವ ವಿನ್ಯಾಸವನ್ನು ಕಾಣಬಹುದು. ನಾಲ್ಕು ಕೈಗಳಿರುವ ಈ ವೀರಭದ್ರನ ಬಲಗೈಗಳಲ್ಲಿ ತ್ರಿಶೂಲ, ಕತ್ತಿ ಹಾಗೂ ಎಡಗೈಗಳಲ್ಲಿ ಕ್ರಮವಾಗಿ ಡಮರುಗ ಮತ್ತು ಗುರಾಣಿ ಇದೆ. ಈ ಗರ್ಭಗೃಹವು ಕೇವಲ ಎಂಟು ಅಡಿಗಳಷ್ಟು ಮಾತ್ರ ಎತ್ತರವಿದ್ದು ಇದರ ಬಾಗಿಲು ಐದು ಅಡಿ ಉದ್ದವಿದೆ. ಹಾಗೂ ಇದರ ಬಲಭಾಗದಲ್ಲಿ ಅರ್ಧಭಾಗ ಮಣ್ಣಿನಲ್ಲಿ ಹುದುಗಿಕೊಂಡಿರುವ ಹೊಯ್ಸಳರ ಕಾಲದ ಶಾಸನವನ್ನು ಕಾಣಬಹುದು. ಇದು ೧೩ನೇ ಶತಮಾನದ ಶೈವ ಶಾಸನವಾಗಿದ್ದು ಶಿವಶರಣರು, ಮಲ್ಲಿನಾಥ ಹಾಗೂ ವೀರಭದ್ರನ ಉಲ್ಲೇಖವನ್ನು ಒಳಗೊಂಡಿದೆ.

೧೧. ನಾರಾಯಣಪುರ ಹೊಸಹಳ್ಳಿ ದೇವಾಲಯ

ಬೇಲೂರಿನಿಂದ ೧೨ ಕಿ.ಮೀ. ದೂರದಲ್ಲಿ ಈ ಗ್ರಾಮವಿದ್ದು ಇಲ್ಲಿ ಸಹ ವೀರಭದ್ರನ ಆಚರಣೆಯಿದೆ. ಮೊದಲು ಅಂಚಿನ ಗುಡಿಯಾಗಿದ್ದ ಇಲ್ಲಿನ ವೀರಭದ್ರ ದೇವಾಲಯವು ಇತ್ತೀಚೆಗೆ ಪುನರ್ ನವೀಕರಣಗೊಂಡಿದೆ. ಇದರ ಗರ್ಭಗೃಹ ಮತ್ತು ಅರ್ಧಮಂಟಪ ಪ್ರಾಚೀನ ಕಾಲದ್ದಾಗಿದ್ದು ಅದರ ಮುಂದಿನ ಭಾಗದಲ್ಲಿ ಕಂಬ ರಹಿತವಾದ ವಿಶಾಲವಾದ ಸಭಾ ಮಂಟಪವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ.

ಚೌಕಾಕಾರವಾಗಿರುವ ಈ ದೇವಾಲಯವು ಹೊಯ್ಸಳೋತ್ತರ ಕಾಲದ್ದಾಗಿದ್ದು ಗರ್ಭಗೃಹವನ್ನು ಉಪಾನದ ಮೇಲೆ ಕಟ್ಟಲಾಗಿದೆ. ಇದರ ಎಡಭಾಗದಲ್ಲಿ ಸಾಧಾರಣವಾದ ಪ್ರನಾಳವಿದೆ ದೇವಾಲಯದ ಭಿತ್ತಿ ಭಾಗ ಅಲಂಕಾರರಹಿತವಾಗಿದ್ದು, ಗೋಪುರವನ್ನು ಇತ್ತೀಚೆಗೆ ನಿರ್ಮಿಸಲಾಗಿದೆ. ಗರ್ಭಗೃಹ ಅಂತರಾಳ ಸಭಾಮಂಟಪ ಮತ್ತು ಮುಖಮಂಟಪವನ್ನು ಹೊಂದಿರುವ ಈ ದೇವಾಲಯದ ಮೇಲೆ ನಾಲ್ಕೂ ಮೂಲೆಗಳಲ್ಲಿ ಬಸವಣ್ಣನ ಶಿಲ್ಪಗಳಿವೆ.

ಗರ್ಭಗೃಹದ ಮಧ್ಯಭಾಗದಲ್ಲಿ ಪಾಣಿಪೀಠವಿದ್ದು ಅದರ ಮೇಲೆ ಸೌಮ್ಯ ಭಂಗಿಯಲ್ಲಿ ನಿಂತ ವೀರಭದ್ರನ ಶಿಲ್ಪವಿದೆ. ಪೀಠದ ಮೇಲಿನ ಈ ಮೂರ್ತಿ ಸುಮಾರು ನಾಲ್ಕುವರೆ ಅಡಿಗಳಷ್ಟು ಎತ್ತರವಿದೆ. ಈ ವೀರಭದ್ರನಿಗೂ ಸಹ ನಾಲ್ಕು ಕೈಗಳಿದ್ದು ಬಲಗೈಗಳಲ್ಲಿ ಬಾಣ. ಕತ್ತಿ ಇದ್ದರೆ ಎಡಭಾಗದ ಮೇಲಿನ ಕೈಯಲ್ಲಿ ಬಿಲ್ಲು ಇದ್ದು ಕೆಳಗಿನ ಕೈ ಗುರಾಣಿಯ ಮೇಲೆ ಇಟ್ಟುಕೊಂಡಿದೆ. ತಲೆಯ ಮೇಲೆ ಕಿರೀಟವಿದ್ದು ಕಾಲುಗಳಲ್ಲಿ ಕಾಲ್ಗಡಗಳಿವೆ. ಕೊರಳಲ್ಲಿ ಸರಮಾಲೆಯಿದ್ದು ಪಂಚೆ ಉಡುಪು ಧರಿಸಿರುವ ವೀರಭದ್ರನ ಸೊಂಟದಲ್ಲಿ ಕಠಾರಿ ಇದೆ. ಹಾಗೂ ವೀರಭದ್ರನ ಬಲಭಾಗದಲ್ಲಿ ನಮಸ್ಕರಿಸುತ್ತಿರುವ ಭಂಟನ ಚಿತ್ರವಿದೆ. ಅಲ್ಲದೆ ಈ ಮೂರ್ತಿಯ ಎಡಭಾಗದಲ್ಲಿ ಬಸವಣ್ಣನ ಶಿಲ್ಪವಿದೆ. ಇದರ ಮುಂಭಾಗದ ಅಂತರಾಳವು ಸುಮಾರು ಏಳುವರೆ ಅಡಿಗಳಷ್ಟು ಎತ್ತರವಿದ್ದು ಬಾಗಿಲು ಚಿಕ್ಕದಾದ ರಚನೆಯನ್ನು ಹೊಂದಿದೆ. ಈ ದೇವಾಲಯದ ಹತ್ತು ಮೀಟರ್ ದೂರದಲ್ಲಿ ಕರಗಲ್ಲು ಮತ್ತು ಇಪ್ಪತ್ತೈದು ಮೀಟರ್ ದೂರದಲ್ಲಿ ಬ್ರಹ್ಮದೇವರ ವಿಗ್ರಹವಿದೆ.

೧೨. ಹೊರಕೇರಿ ವೀರಭದ್ರ ಸ್ವಾಮಿ ಘಟ್ಟದಹಳ್ಳಿ

ಬೇಲೂರಿನಿಂದ ೩೧ ಕಿ.ಮೀ. ದೂರದಲ್ಲಿರುವ ಈ ಗ್ರಾಮ ಹಿಂದೆ ಒಂದು ಧಾರ್ಮಿಕ ಕೇಂದ್ರವಾಗಿತ್ತು ಎಂದು ಹೇಳಲಾಗುತ್ತದೆ. ಇಂದು ಇದು ಸುಮಾರು ೫೦೦ ಮನೆಯ ಗ್ರಾಮವಾಗಿದ್ದರೂ ಸಹ ಮೂರು ಭಾಗಗಳಾಗಿವೆ. ಅವೆಂದರೆ ಘಟ್ಟದಹಳ್ಳಿ ಬ್ರಾಹ್ಮಣರು, ಗೌಡರು ಮತ್ತು ಘಟ್ಟದಹಳ್ಳಿ ರೈತರ ಕೊಪ್ಪಲು

(ಹರಿಜನರ ಕೇರಿ) ಎಂದು ತಮ್ಮಲ್ಲೇ ವಿಭಾಗಿಸಿಕೊಂಡಿದ್ದಾರೆ. ಈ ಬ್ರಾಹ್ಮಣರಿರುವ ಸ್ಥಳದಲ್ಲಿ ಚನ್ನಕೇಶವ, ಸಿದ್ದೇಶ್ವರ ಮತ್ತು ವೀರಭದ್ರನ ದೇವಾಲಯವಿದ್ದು ಇವರೇ ಇವುಗಳ ಪೂಜೆ ಪುನಸ್ಕಾರಗಳನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಬ್ರಾಹ್ಮಣರು ಇರುವ ಸ್ಥಳವೇ ಹೊರಕೇರಿಯಾಗಿದ್ದು ಅಲ್ಲಿರುವ ವೀರಭದ್ರ ದೇವಾಲಯನ್ನು ಹೊರಕೇರಿ ವೀರಭದ್ರ ಎಂದು ಕರೆಯಲಾಗುತ್ತದೆ.

ವೀರಭದ್ರ ದೇವಾಲಯ

ಬ್ರಾಹ್ಮಣರ ಕೇರಿಯಲ್ಲಿದ್ದ ಹಳೆಯ ವೀರಭದ್ರ ದೇವಾಲಯವನ್ನು ಕ್ರಿ.ಶ ೮೧೨ ರಲ್ಲಿ ಕಟ್ಟಲ್ಪಟ್ಟಿದೆ ಎಂದು ಹೇಳಲಾಗಿದೆ. ಆದರೆ ಇಟ್ಟಿಗೆ ಮತ್ತು ಕಂಬಗಳಿಂದ ಕಟ್ಟಿದ ಆ ದೇವಾಲಯ ಇಂದು ನಶಿಸಿ ಹೋಗಿದ್ದು ಅದರ ಛಾಯಾಚಿತ್ರಗಳು ಮಾತ್ರ ಲಭ್ಯವಿದೆ. ಈ ವೀರಭದ್ರ ದೇವಾಲಯವು ಇಂದು ಚಿಕ್ಕ ಗುಡಿಯಾಗಿದ್ದು ಗರ್ಭಗೃಹ ಮತ್ತು ವಿಶಾಲವಾದ ಮಂಟಪವನ್ನು ಒಳಗೊಂಡಿದೆ. ಆ ಗುಡಿಯಲ್ಲಿ ಹೊಸ ವೀರಭದ್ರನ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಮೂಲ ದೇವಾಲಯದ ವೀರಭದ್ರನ ಮೂರ್ತಿ ಹತ್ತಿರದ ಪ್ರಾಚೀನ ಸಿದ್ದೇಶ್ವರ ದೇವಾಲಯದಲ್ಲಿದೆ. ಈ ಮೂರ್ತಿಯನ್ನು ಒಂದೇ ಕಲ್ಲಿನಲ್ಲಿ ಕೆತ್ತಲಾಗಿದ್ದು ಹಿಂದಿನ ಕಲ್ಲಿಗೆ ಅಂಟಿಕೊಂಡಿರುವ ಹಾಗೆ ಇದೆ. ಬಲಗೈಗಳಲ್ಲಿ ಕತ್ತಿ ಮತ್ತು ಬಾಣ ಹಾಗೂ ಎಡಗೈಗಳಲ್ಲಿ ಗುರಾಣಿ ಬಿಲ್ಲು ಇದೆ. ಅಲ್ಲದೇ ಸೊಂಟದಲ್ಲಿ ಹಾರಾಡುತ್ತಿರುವ ವಸ್ತ್ರದ ಕೆತ್ತನೆ ಇದೆ. ಈ ದೇವಾಲಯವು ಗರ್ಭಗುಡಿ ಅಂತರಾಳ ಮತ್ತು ನವರಂಗವನ್ನು ಹೊಂದಿದ್ದು ಸಂಪೂರ್ಣ ಹೊಯ್ಸಳ ಶೈಲಿಯಲ್ಲಿವೆ. ಶಿವಲಿಂಗ ಬಸವಣ್ಣ ಮತ್ತು ಸಪ್ತಮಾತೃಕೆಯರ ಶಿಲ್ಪಗಳಿವೆ. ಹಾಗೂ ಈ ದೇವಾಲಯದಲ್ಲಿ ಮೂರು ಹಂತಗಳಿಂದ ಕೂಡಿದ ಒಂದು ಶೈವವೀರಗಲ್ಲು ಇದೆ. ಇದನ್ನು ಬೇರೆಲ್ಲಿಂದಲೋ ತಂದಿಟ್ಟುರುವಂತೆ ಕಾಣುತ್ತದೆ. ಅದರಪಕ್ಕದಲ್ಲಿ ಗಣಪತಿಯ ಶಿಲ್ಪವೂ ಸಹ ಇದೆ.

೧೩. ಯಲಹಂಕ

ಬೇಲೂರಿನಿಂದ ಹಾಸನಕ್ಕೆ ಹೋಗುವ ಮಾರ್ಗದಲ್ಲಿ ಯಲಹಂಕ ಗ್ರಾಮವಿದ್ದು ಗ್ರಾಮ ಪಂಚಾಯತ್ ಕಾರ್ಯಾಲಯವನ್ನು ಹೊಂದಿದೆ. ಇಲ್ಲಿ ತರಳಬಾಳು ಪರಂಪರೆಗೆ ಸೇರಿದೆ ವೀರಶೈವ ಮಠವಿರುವುದರ ಜೊತೆಗೆ ಈ ಮಠದ ಮುಂಭಾಗದಲ್ಲೇ ವೀರಭದ್ರನ ದೇವಾಲಯವಿದೆ. ಇಂದು ಮೂಲ ದೇವಾಲಯವನ್ನು ಸಂಪೂರ್ಣವಾಗಿ ಕೆಡವಿ ಹೊಸ ಕಟ್ಟಡವನ್ನು ನಿರ್ಮಿಸಲಾಗುತ್ತಿದ್ದು ಅದಕ್ಕೆ ಗ್ರಾನೈಟ್‌ಗಳನ್ನು ಬಳಸಲಾಗುತ್ತಿದೆ. ಒಳಭಾಗದಲ್ಲಿ ಗರ್ಭಗೃಹ ಅಂತರಾಳ ನವರಂಗ ಹಾಗೂ ಮುಖಮಂಟಪದ ನಿರ್ಮಾಣ ಕಾರ್ಯ ನೆಡೆಯುತ್ತಿದೆ.

ಮೂರ್ತಿಶಿಲ್ಪಗಳು

ವೀರಭದ್ರಶಿಲ್ಪ–ದೇವಾಲಯದ ಗರ್ಭಗೃಹದಲ್ಲಿರುವ ಈ ಶಿಲ್ಪ ಎತ್ತರವಾದ ಪಾಣಿಪೀಠದ ಮೇಲಿದ್ದು ಅದರ ಮೇಲಿನ ವೀರಭದ್ರ ಶಿಲ್ಪ ಸುಮಾರು ನಾಲ್ಕು ಅಡಿಗಳಷ್ಟು ಉದ್ದವಿದೆ. ಈ ಪೀಠದ ಮುಂಭಾಗದಲ್ಲಿ ಬಸವಣ್ಣನ ಕೆತ್ತನೆಯಿದೆ. ಈ ವೀರಭದ್ರನಿಗೆ ನಾಲ್ಕು ಕೈಗಳಿದ್ದು ಬಲಭಾಗದ ಮೇಲಿನ ಕೈಯಲ್ಲಿ ಎರಡು ಬೆರಳುಗಳಿಂದ ಹಿಡಿದ ತ್ರಿಶೂಲ ಹಾಗೂ ಕೆಳಗಿನ ಕೈಯಲ್ಲಿ ಕತ್ತಿ ಇದೆ. ಹಾಗೂ ಎಡಭಾಗದ ಮೇಲಿನ

ಕೈನಲ್ಲಿ ಡಮರುಗವಿದ್ದು, ಕೆಳಗಿನ ಕೈಯನ್ನು ಗುರಾಣಿಯ ಮೇಲೆ ಇಟ್ಟುಕೊಂಡಿದೆ. ಈ ವಿಗ್ರಹದ ಹಾಗೂ ಕೊರಳಿನಲ್ಲಿ ಹಾರ ಮತ್ತು ಕಾಲಿನಲ್ಲಿ ಕಾಲ್ಗಡಗಗಳಿವೆ ಹಾಗೂ ದೇವಾಲಯದ ಮುಂಭಾಗದಲ್ಲಿ ಕಲ್ಲಿನಿಂದ ನಿರ್ಮಿಸಿದ ಗೂಡುಗಳ ಒಳಗೆ ನಾಗಶಿಲ್ಪಗಳಿವೆ. ಈ ದೇವಾಲಯದ ಬಲಭಾಗದಲ್ಲಿ ಮತ್ತು ಶ್ರೀ ಮಠಕ್ಕೆ ಸಮಾನಂತರವಾಗಿ ವಿಜಯನಗರೋತ್ತರ ಕಾಲದ ನಾಲ್ಕು ಕಂಬಗಳುಳ್ಳ ಮಂಟಪವಿದೆ. ಈ ಕಂಬದ ಕೆಳಗೆ ನಾಗಶಿಲ್ಪದ ಕೆತ್ತನೆಯಿದ್ದು ಮೇಲ್ಭಾಗದಲ್ಲಿ ನಾಲ್ಕು ಬಸವಣ್ಣನ ಶಿಲ್ಪಗಳಿವೆ. ಇದರ ಒಳಭಾಗದಲ್ಲಿ ಗಣಪತಿ ಮತ್ತು ಬಸವಣ್ಣನ ಮೂರ್ತಿಗಳು ಸಹ ಇವೆ.

೧೪. ಹುಸ್ಕೂರು

ಬೇಲೂರು ತಾಲೂಕಿನ ಬಿಕ್ಕೋಡಿನಿಂದ ಸಕಲೇಶಪುರಕ್ಕೆ ಹೋಗುವ ಮಾರ್ಗದಲ್ಲಿ ಬಲಕ್ಕೆ ತಿರುಗಿ ಎರಡು ಕಿ.ಮಿ. ಕ್ರಮಿಸಿದರೆ ಹುಸ್ಕೂರು ಗ್ರಾಮ ಕಂಡುಬರುತ್ತದೆ. ಸುಮಾರು ೫೦ ಮನೆಗಳಿರುವ ಈ ಗ್ರಾಮದಲ್ಲಿ ಒಂದು ವೀರಭದ್ರನ ದೇವಾಲಯವಿದೆ ಆದರೆ ಇದರ ಪ್ರಾಚೀನತೆ ತಿಳಿದು ಬಂದಿಲ್ಲ.

ಈ ದೇವಾಲಯವು ಪೂರ್ವದಿಕ್ಕಿಗೆ ಮುಖಮಾಡಿದ ಒಂದು ಮನೆಯ ರೀತಿ ಇದ್ದು ಇದರಲ್ಲಿ ಎರಡು ಭಾಗಗಳಿವೆ. ಅದರ ಹಿಂಭಾಗ ಗರ್ಭಗೃಹವಾಗಿದ್ದು ಅಲ್ಲಿನ ಸಮನಾಂತರವಾದ ಒಂದೇ ಪೀಠ ಅಥವಾ ಭಾಗದಲ್ಲಿ ಶಿವಲಿಂಗವಿದೆ. ಈ ಲಿಂಗದ ಬಲಭಾಗದಲ್ಲಿ ವೀರಭದ್ರ ಶಿಲ್ಪ ವಿರುವುದನ್ನು ಕಾಣಬಹುದು. ಲಿಂಗಕ್ಕೆ ನಮಸ್ಕರಿಸುವಂತೆ ಒಂದು ದೊಡ್ಡದಾದ ಮತ್ತು ಚಿಕ್ಕದಾದ ನಂದಿಶಿಲ್ಪಗಳಿವೆ. ಹಾಗೂ ಶಿವ ಲಿಂಗದ ಎಡಭಾಗದಲ್ಲಿ ಮೂರು ನಾಗರಕಲ್ಲುಗಳನ್ನು ಇಡಲಾಗಿದೆ. ಗರ್ಭಗೃಹದ ಮುಂದಿನ ಭಾಗ ವಿಶಾಲವಾಗಿದ್ದು ಕೆಳಗೆ ಗಾರೆಯ ನೆಲವಿದೆ. ಇಲ್ಲಿರುವ ವೀರಭದ್ರ ಶಿಲ್ಪವು ನಾಲ್ಕು ಕೈಗಳನ್ನು ಹೊಂದಿದ್ದು ಬಲಭಾಗದ ಕೈಗಳಲ್ಲಿ ಬಾಣ ಮತ್ತು ಕತ್ತಿಗಳಿವೆ. ಎಡಭಾಗದ ಕೈಗಳಲ್ಲಿ ಕ್ರಮವಾಗಿ ಬಿಲ್ಲು ಮತ್ತು ಗುರಾಣಿ ಇದೆ. ಈ ದೇವಾಲಯದ ಎಡಭಾಗದಲ್ಲಿ ಪ್ರಾಚೀನ ಕಾಲದ ಬಾವಿಯು ಸಹ ಇದೆ.

೧೫. ಬೆಣ್ಣೂರು

ಬೇಲೂರಿನಿಂದ ಸುಮಾರು ೧೨ ಕಿ.ಮಿ. ದೂರದಲ್ಲಿ ಬೆಣ್ಣೂರು ಗ್ರಾಮವಿದೆ. ಇಲ್ಲಿರುವ ವೀರಭದ್ರೇಶ್ವರ ದೇವಾಲಯ ನಾಶವಾಗಿದ್ದು ಮೂಲ ವೀರಭದ್ರನ ವಿಗ್ರಹವನ್ನು ಗ್ರಾಮದ ಮಧ್ಯಭಾಗದಲ್ಲಿರುವ ಬಸವೇಶ್ವರ ಸ್ವಾಮಿ ದೇವಾಲಯದಲ್ಲಿ ಇಡಲಾಗಿದೆ. ಜೀರ್ಣೋದ್ದಾರಗೊಂಡಿರುವ ಈ ದೇವಾಲಯವು ಗರ್ಭಗೃಹ ಅಂತರಾಳ ಪ್ರಾಚೀನ ಮತ್ತು ವಿಶಾಲಮಂಟಪವನ್ನು ಹೊಂದಿದೆ ಗರ್ಭಗೃಹ ಅಂತರಾಳ ಪ್ರಾಚೀನವಾಗಿದ್ದು ಮುಂದಿನ ಮಂಟಪ ಮುಖಮಂಟಪವನ್ನು ಇತ್ತೀಚೆಗೆ ನಿರ್ಮಿಸಲಾಗಿದ್ದು ಇದಕ್ಕೆ ಹೆಂಚುಗಳನ್ನು ಹೊದಿಸಲಾಗಿದೆ.

ಪೂರ್ವಾಭಿಮುಖವಾಗಿರುವ ಈ ದೇವಾಲಯವು ಚೌಕಾಕಾರವಾಗಿದ್ದು ಒಂದು ಅಡಿ ಎತ್ತರದ ಜಗತಿಯ ಮೇಲೆ ಗರ್ಭಗೃಹವನ್ನು ನಿರ್ಮಿಸಲಾಗಿದೆ. ಅದಿಷ್ಠಾನವು ಯವುದೇ ಪಟ್ಟಿಕೆಗಳಿಂದ ಕೂಡಿಲ್ಲ ಮತ್ತು ದೇವಾಲಯದ ಭಿತ್ತಿಯು ಅಲಂಕಾರ ರಹಿತವಾಗಿದೆ. ಭಿತ್ತಿಯ ಮೇಲ್ಭಾಗದಲ್ಲಿ ಪುನರ್‌ನವೀಕರಣಗೊಂಡ ದ್ರಾವಿಡ ಶೈಲಿಯ ಶಿಖರವಿದೆ. ಗರ್ಭಗೃಹದ ಒಳಭಾಗದಲ್ಲಿ ಪಾಣಿಪೀಠದ ಮೇಲೆ ಬಸವಣ್ಣ ಮತ್ತು ಬಲಭಾಗದಲ್ಲಿ ಉತ್ತರ ದಿಕ್ಕಿಗೆ ಮುಖಮಾಡಿದ ವೀರಭದ್ರನ ಮೂರ್ತಿಶಿಲ್ಪವಿದೆ. ಆದರೆ ಬಸವಣ್ಣನ

ಮುಖ ಪೂರ್ವದಿಕ್ಕಿಗಿದೆ ಎತ್ತರದ ಪೀಠದ ಮೇಲೆ ಬಸವಣ್ಣನಿದ್ದರೆ ಅದರ ಬಲಭಾಗದಲ್ಲಿ ಸುಮಾರು ಒಂದುವರೆ ಅಡಿ ಎತ್ತರದ ವೇದಿಕೆಯ ಮೇಲೆ ಎರಡು ಅಡಿ ಎತ್ತರದ ವೀರಭದ್ರನ ಮೂರ್ತಿಇದೆ. ಈ ವೀರಭದ್ರನಿಗೆ ನಾಲ್ಕು ಕೈಗಳಿದ್ದು ಬಲಭಾಗದ ಮೇಲಿನ ಕೈನಲ್ಲಿ ಬಾಣ ಮತ್ತು ಕೆಳಗಿನ ಕೈಯಲ್ಲಿ ಬಿಲ್ಲು ಹಿಡಿದು ಕೆಳಗಿನ ಕೈಯನ್ನು ಗುರಾಣಿಯ ಮೇಲೆ ಇಟ್ಟಿದ್ದಾರೆ. ಹಾಗೂ ಕೊರಳಲ್ಲಿ ಪದಕ ಮತ್ತು ರುದ್ರಾಕ್ಷಿಯ ಹಾರವಿದೆ. ಇದರ ಅಂತರಾಳ ವಿಶಾಲವಾಗಿದ್ದು ಇಲ್ಲಿ ಯಾವುದೇ ಕಿತ್ತನೆ ಕಂಡುಬರುವುದಿಲ್ಲ. ಮುಂದಿರುವ ಮಂಟಪದಿಂದ ಅಂತರಾಳಕ್ಕೆ ಪ್ರವೇಶಿಸುವ ಬಾಗಿಲವಾಡದಲ್ಲಿ ಸ್ತಂಭ ಪಂಜರವಿದ್ದು ಇದು ಮಿಥುನ ಶಿಲ್ಪಗಳಿಂದ ಅಲಂಕೃತವಾಗಿದೆ. ಈ ಮಂಟಪವು ವಿಶಾಲವಾಗಿದ್ದು ದೇವಾಲಯದ ಪುನರ್ ನವೀಕರಣದ ಸಂದರ್ಭದಲ್ಲಿ ಕಟ್ಟಿದಂತೆ ಕಂಡುಬರುತ್ತದೆ. ಈ ದೇವಾಲಯದ ಮುಂದೆ ಸುಮಾರು ಹತ್ತು ಅಡಿ ಎತ್ತರದ ದೀಪಸ್ತಂಭವಿದ್ದು ಅದರ ಕೆಳಗೆ ಬಲಭಾಗದಲ್ಲಿ ಬಸವಣ್ಣ ಮತ್ತು ಮುಂದಿನ ಭಾಗದಲ್ಲಿ ಶಿವಲಿಂಗಕ್ಕೆ ಹಾಲು ಹರಿಸುತ್ತಿರುವ ಕಾಮದೇನುವಿನ ಶಿಲ್ಪವಿದೆ. ಹಾಗೂ ಈ ದೇವಾಲಯದ ಹಿಂಭಾಗದಲ್ಲಿ ಪ್ರಾಚೀನ ಬಾವಿಯೂ ಸಹ ಇದೆ.

೧೬. ಬಕ್ಕರವಳ್ಳಿ

ಬೇಲೂರಿನಿಂದ ಬಿಕ್ಕೋಡಿಗೆ ಹೋಗುವ ಮಾರ್ಗ ಮಧ್ಯದಲ್ಲಿ ಬಲಕ್ಕೆ ತಿರುಗಿ ಕ್ರಮಿಸಿದರೆ ಸುಮಾರು ೫ ಕಿ. ಮೀ. ದೂರದಲ್ಲಿ ಅರಣ್ಯ ಮತ್ತು ಕಾಫಿ ತೋಟದ ಮಧ್ಯೆ ಈ ಗ್ರಾಮವು ಕಂಡುಬರುತ್ತದೆ. ಈ ಊರಿನಲ್ಲಿ ವೀರಭದ್ರ ದೇವಾಲಯ ಇತ್ತೆಂದು ಹೇಳಲಾಗಿದ್ದರೂ ಸಹ ಇಂದು ಅದು ಕಂಡುಬರುವುದಿಲ್ಲ. ಬಹುಶಃ ಅದು ಕಾಲಾನಂತರ ಅವನತಿ ಹೊಂದಿರಬಹುದು. ಆದರೆ ಅಲ್ಲಿದ್ದ ವೀರಭದ್ರನ ಮೂರ್ತಿ ಆ ಊರಿನ ಹೊರಭಾಗದ ಬಸವಣ್ಣನ ದೇವಾಲಯದ ಹತ್ತಿರವಿರುವ ಒಂದು ಮರದ ಕೆಳಗೆ ಚಿಕ್ಕ ಗುಡಿಯಲ್ಲಿದೆ. ಈ ಗುಡಿಯನ್ನು ಇತ್ತೀಚೆಗೆ ನಿರ್ಮಿಸಲಾಗಿದೆ.

ಸಮಭಂಗಿಯಲ್ಲಿರುವ ವೀರಭದ್ರನ ಶಿಲ್ಪಕ್ಕೆ ಕೇವಲ ಎರಡು ಕೈಗಳಿದ್ದು, ಬಲಗೈಯಲ್ಲಿ ಕತ್ತಿ ಮತ್ತು ಎಡಗೈಯಲ್ಲಿ ತ್ರಿಶೂಲವಿದೆ. ಕೊರಳಲ್ಲಿ ಹಾರಗಳಿದ್ದು ಕೆಳಗಿನ ಎರಡೂ ಭಾಗದಲ್ಲಿ ಗಣಗಳಿರುವುದನ್ನು ಕಾಣಬಹುದು. ಈ ಗುಡಿಯಲ್ಲಿ ಬಸವಣ್ಣ ನಾಗಶಿಲ್ಪ ಮತ್ತು ಗಣಪತಿಯ ಶಿಲ್ಪಗಳೂ ಇವೆ.

೧೭. ವೀರಭದ್ರೇಶ್ವರ ದೇವಾಲಯ–ಹಲ್ಮಿಡಿ

ಬೇಲೂರು ತಾಲೂಕಿನ ಯಗಚಿನದಿಯ ಬಲದಂಡೆಯಲ್ಲಿರುವ ಹಲ್ಮಿಡಿ ಗ್ರಾಮಕ್ಕೆ ಇತಿಹಾಸದಲ್ಲಿ ವಿಶಿಷ್ಟ ಸ್ಥಾನವಿದೆ. ಕನ್ನಡದ ಪ್ರಥಮ ಗದ್ಯಶಾಸನ ದೊರಕಿದ್ದು ಹಲ್ಮಿಡಿಯಲ್ಲಿಯೇ ಈ ಶಾಸನ ಇದೇ ಊರಿನ ವೀರಭದ್ರ ದೇವಾಲಯದಲ್ಲಿದ್ದಿತು. ೧೯೩೦ ರಲ್ಲಿ ಶಾಸನತಜ್ಞರಾದ ಎಂ.ಎಚ್. ಕೃಷ್ಣರವರು ಈ ಶಾಸನವನ್ನು ಬೆಳಕಿಗೆ ತಂದರು. ಸುಮಾರು ಒಂದು ಮೀಟರ್ ಉದ್ದವಿರುವ ಈ ಶಾಸನದ ಮೇಲ್ಭಾಗದಲ್ಲಿ ಒಂದು ಸುದರ್ಶನ ಚಕ್ರವಿದೆ. ಪ್ರಾರಂಭದಲ್ಲಿ ವಿಷ್ಣು (ಅಚ್ಯುತ) ಕುರಿತು ಮಂಗಳಾಚರಣ ಶ್ಲೋಕವನ್ನು ಬಿಟ್ಟರೆ ಉಳಿದ ೧೫ ಪಂಕ್ತಿಗಳಲ್ಲಿ ಕನ್ನಡದ ಗದ್ಯ ಬರಹ ಇದೆ.

ಈ ವೀರಭದ್ರೇಶ್ವರ ದೇವಾಲಯವು ಹಲ್ಮಿಡಿ ಗ್ರಾಮದ ಮಧ್ಯಭಾಗದಲ್ಲಿದ್ದು ಚೌಕಾಕಾರವಾಗಿದೆ. ಇದು

ಪ್ರಾಚೀನವಾದುದೇ ಆದರೂ ಸಹ ವಿಜಯನಗರೋತ್ತರ ಕಾಲದಲ್ಲಿ ಪುನರ್ ನಿರ್ಮಾಣ ಮಾಡಲಾಗಿದೆ. ಪೂರ್ವಾಭಿಮುಖವಾಗಿರುವ ಈ ದೇವಾಲಯವು ಸಾಮಾನ್ಯವಾದ ಅದಿಷ್ಠಾನ ಅಲಂಕಾರ ರಹಿತವಾದ ಭಿತ್ತಿ ಮತ್ತು ಇತ್ತೀಚೆಗೆ ನಿರ್ಮಾಣಗೊಂಡ ಶಿಖರವನ್ನು ಹೊಂದಿದೆ. ಗರ್ಭಗುಡಿಯ ಬಲಭಾಗದ ಗೋಡೆಯಲ್ಲಿ ಉರಗದ ಕೆತ್ತನೆಯಿರುವುದರಿಂದ ಬಹುಶಃ ಪಾಳೆಗಾರರ ಕಾಲದಲ್ಲಿ ಮೂಲ ದೇವಾಲಯವನ್ನು ಕೆಡವಿ ಈ ಆಲಯವನ್ನು ಕಟ್ಟಿರಬಹುದು.

ಗರ್ಭಗುಡಿ, ಅರ್ಧಮಂಟಪ, ನವರಂಗ ಹಾಗೂ ಮುಖಮಂಟಪವನ್ನು ಹೊಂದಿದ್ದು, ಇದರ ಕಂಬಗಳು ಗಟ್ಟಿಯಾದ ಕಲ್ಲುಗಳಿಂದ ರಚಿತವಾಗಿದ್ದು ಸಾಧಾರಣವಾಗಿ ಅಲಂಕರಗೊಳಿಸಲಾಗಿದೆ. ಗರ್ಭಗುಡಿಯ ಒಳಗೆ ವೀರಭದ್ರೇಶ್ವರ ಸ್ವಾಮಿಯ ವಿಗ್ರಹವಿದ್ದು ಪಾಣಿಪೀಠದ ಮೇಲೆ ನಿಂತಿದೆ. ಹಿಂದೆ ಪ್ರಭಾವಳಿಯಿರುವ ಇದಕ್ಕೆ ನಾಲ್ಕು ಕೈಗಳಿದ್ದು ಬಲಭಾಗದ ಕೈಗಳಲ್ಲಿ ತ್ರಿಶೂಲ ಮತ್ತು ಕತ್ತಿ ಇದೆ. ಹಾಗೂ ಎಡಭಾಗದ ಮೇಲಿನ ಕೈಯಲ್ಲಿ ಡಮರುಗವನ್ನು ಹಿಡಿದಿದ್ದರೆ ಕೆಳಗಿನ ಕೈಯನ್ನು ಉದ್ದವಾದ ಗುರಾಣಿಯ ಮೇಲೆ ಇಟ್ಟುಕೊಂಡಿದೆ. ಮುಂದಿನ ಭಾಗದ ಅರ್ಧಮಂಟಪ ಹಾಗೂ ನವರಂಗ ಹೆಚ್ಚಿನ ಅಲಂಕರಣವನ್ನೇನು ಹೊಂದಿಲ್ಲ. ನವರಂಗದ ವಿತಾನಗಳಲ್ಲಿ ಅಷ್ಟ ಕೋನಾಕೃತಿಯ ಸಾಧಾರಣ ರಚನೆಯ ನಾಭಿಚ್ಛಂದವಿದೆ. ಮುಂಭಾಗದ ಮುಖಮಂಟಪವು ತೆರೆದುಕೊಂಡಿದ್ದು ಮುಂದೆ ನಾಲ್ಕು ಕಂಬಗಳಿವೆ ನೆಲಮಟ್ಟದಿಂದ ಎತ್ತರದಲ್ಲಿರುವ ಈ ದೇವಾಲಯಕ್ಕೆ ಇತ್ತೀಚೆಗೆ ಮೆಟ್ಟಲುಗಳನ್ನು ನಿರ್ಮಿಸಲಾಗಿದೆ.

೧೮. ದೇವಿಹಳ್ಳಿ ವೀರಭದ್ರೇಶ್ವರ ದೇವಾಲಯ

ಬೇಲೂರು ಪಟ್ಟಣದಿಂದ ೧೨ ಕಿ.ಮೀ ದೂರದಲ್ಲಿರುವ ದೇವಿಹಳ್ಳಿ ಗ್ರಾಮವು ವೀರಭದ್ರನ ಆಚರಣೆ ಮಾಡುವುದರಲ್ಲಿ ವಿಶಿಷ್ಟತೆಯನ್ನು ಪಡೆದಿದೆ. ಕಾರಣ ಇಲ್ಲಿ ವೀರಭದ್ರನ ತಲೆಯನ್ನು (ಮೊಗವಾಡ) ವನ್ನು ಮಾತ್ರ ಪೂಜಿಸಲಾಗುತ್ತದೆ. ಊರಿನ ಮಧ್ಯಭಾಗದಲ್ಲಿ ಈ ದೇವಾಲಯವಿದ್ದು ಇದನ್ನು ಅಂಚುಗಳನ್ನು ಹೊದಿಸಿ ಮನೆಯ ರೀತಿಯಲ್ಲಿ ನಿರ್ಮಿಸಲಾಗಿದೆ. ಗರ್ಭಗೃಹ, ಅರ್ಧಮಂಟಪವನ್ನು ಹೊಂದಿರುವ ಈ ಗುಡಿಯ ಒಳಗೆ ನೆಲಕ್ಕೆ ಹಾಸಿದಂತಹ ಪಾಣಿಪೀಠವಿದ್ದು ಅದರ ಮೇಲೆ ವೀರಭದ್ರನ ಮುಖಮಾತ್ರ ಇದೆ. ಈ ಗ್ರಾಮದಲ್ಲಿ ಇತಿಹಾಸ ಪ್ರಸಿದ್ಧ ಮೆಣಸಿನಮ್ಮನ ದೇವಾಲಯವಿದ್ದು ದೇವಿಯ ಅಡ್ಡೆ ಎಲ್ಲೇ ಹೋಗಬೇಕಾದರು ಮೊದಲು ಈ ದೇವರಿಗೆ ನಮಿಸಿ ನಂತರ ಹೊರಡುತ್ತದೆ. ಹಾಗೂ ವೀರಭದ್ರನ ಆಲಯದ ಮುಂಭಾಗದಲ್ಲಿ ಗೂಡುಮಂಟಪವಿದ್ದು ಅದರ ಒಳಗೆ ರುಂಡ ಶಿಲ್ಪವಿದೆ. ಪುರಾಣದಲ್ಲಿ ವೀರಭದ್ರ ದಕ್ಷನ ತಲೆ ಕತ್ತರಿಸಿದ ಪ್ರತಿರೂಪವಾಗಿ ಈ ದೇವಾಲಯದ ನಿರ್ಮಾಣ ಮಾಡಲಾಗಿದೆ ಎಂದು ಹೇಳಬಹುದು.

೧೯. ಕಣದೂರು:

ಬೇಲೂರು ಪಟ್ಟಣದಿಂದ ಮೂಡಿಗೆರೆಗೆ ಹೋಗುವ ಮಾರ್ಗಮಧ್ಯದಲ್ಲಿ ನಾಗೇನಹಳ್ಳಿ ಗ್ರಾಮವಿದೆ. ಅಲ್ಲಿಂದ ಬಲಕ್ಕೆ ತಿರುಗಿ ಕಾಫಿ ತೋಟದ ಒಳಗೆ ಮೂರು ಕಿ.ಮೀ ಕ್ರಮಿಸಿದರೆ ಕಣದೂರು ವೀರಭದ್ರಸ್ವಾಮಿ ದೇವಾಯಲ ಸಿಗುತ್ತದೆ. ಇತ್ತೀಚೆಗೆ ನಿರ್ಮಿಸಿರುವ ಈ ದೇವಾಲಯದ ಪ್ರಾಚೀನತೆ ತಿಳಿದು ಬಂದಿಲ್ಲ. ಗರ್ಭಗೃಹ ಮತ್ತು ಮುಂಭಾಗದಲ್ಲಿ ವಿಶಾಲ ಮಂಟಪವನ್ನು ಹೊಂದಿರುವ ಇದರ ಒಳಗೆ ಸುಮಾರು

ನಾಲ್ಕು ಅಡಿ ಎತ್ತರದ ವೀರಭದ್ರನ ಮೂರ್ತಿ ಶಿಲ್ಪವಿದೆ. ಇಲ್ಲಿನ ವೀರಭದ್ರ ದೇವರಿಗೂ ಕೂಡ ಅತೀ ಹೆಚ್ಚು ಭಕ್ತರಿದ್ದು ಸ್ಥಳೀಯ ಪ್ರದೇಶದಲ್ಲಿ ಹೆಚ್ಚು ಪ್ರಸಿದ್ಧಿಯಾಗಿದೆ.

೪.೨ ವೀರಗಲ್ಲುಗಳು: ಮತ್ತು ಶಾಸನಗಳು

ವೀರನ ನೆನಪಿಗಾಗಿ ನಿರ್ಮಿಸಿದ ಸ್ಮಾರಕಗಳನ್ನು ವೀರಗಲ್ಲು ಎಂದು ಕರೆಯಲಾಗುತ್ತದೆ. ಯುದ್ಧದಲ್ಲಿ ಹೋರಾಡಿ ಮಡಿದ ಅಥವಾ ಹಸುಗಳನ್ನು ಕಳ್ಳರು ಕರೆದೊಯ್ಯುವಾಗ ಅಥವಾ ಸ್ತ್ರೀಯರ ಮಾನಭಂಗಕ್ಕೆ ಯಾರಾದರೂ ಪ್ರಯತ್ನಿಸುವಾಗ ಹೀಗೆ ಯಾವುದೇ ಸಂದರ್ಭದಲ್ಲಾಗಲಿ ರಕ್ಷಿಸಲು ಹೋರಾಡಿ ಮಡಿದ ವೀರರ ಸ್ಮಾರಕ ಶಿಲೆಗಳನ್ನು ವೀರಗಲ್ಲು ಎಂದು ಕರೆಯಲಾಗುತ್ತದೆ.[೬] ಯುದ್ಧದಲ್ಲಿ ಭಾಗವಹಿಸುವುದೇ ವೀರರಿಗೆ ಪ್ರತಿಷ್ಠೆಯಾಗಿರುತ್ತಿತ್ತು. ಯುದ್ಧಕ್ಕೆ ಅವರೆಂದೂ ಹೆದರುತ್ತಿರಲಿಲ್ಲ. ಯುದ್ಧವೆಂಬುದು ಅವರ ಅವಿಭಾಜ್ಯ ಅಂಗವಾಗಿತ್ತು ಯುದ್ಧಕ್ಕೆ ಹೋರಾಡುವ ಪ್ರತಿಯೊಬ್ಬ ವೀರನ ಮನಸ್ಸಿನಲ್ಲೂ.

'ಜೀತನ ಲಭ್ಯತೆ ಲಕ್ಷ್ಮೀಮೃತೆನಾಪೆ
ಸುರಂಗನ ಕ್ಷಣ ವಿದ್ವಾಂಸನ
ಕಾಯಿಕಾ ಚಿಂತಾ ಮರಣೆ ರಹೇ'

ಎಂಬ ಭಾವನೆ ಇರುತ್ತಿತ್ತು.[೭] ಆದ್ದರಿಂದಲೇ ವೀರರೆಲ್ಲರೂ ಧೈರ್ಯದಿಂದ ಹೋರಾಡಿ ಗೆಲ್ಲುತ್ತಿದ್ದರು ಇಲ್ಲವೆ ಮರಣಿಸುತ್ತಿದ್ದರು. ಹೇಡಿಯಂತೆ ಹಿಂದೆಗೆಯುವ ಅಥವಾ ಸಾವಿಗೆ ಹೆದರಿಕೊಳ್ಳುವ ಸ್ವಭಾವ ಅವರದಾಗಿರಲಿಲ್ಲ, ಗೆದ್ದರೆ ಜಯಲಕ್ಷ್ಮೀ ಸಿಗುವಳು ಸೋತು ಮಡಿದರೆ ಸುರಾಂಗನೆಯರು ಒಲಿಯುವರು ಕ್ಷಣದಲ್ಲಿ ನಾಶವಾಗುವ ಆಶಾಶ್ವತವಾದ ಈ ದೇಹಕ್ಕೆ ಚಿಂತಿಸಿ ವ್ಯಥೆ ಪಡೆಬಾರದು ಎಂಬುದು ಅವರ ಧ್ಯೇಯವಾಗಿರುತ್ತಿತ್ತು.[೮] ಯುದ್ಧದಲ್ಲಿ ಗೆದ್ದರೆ ವೀರನ ಗೆಲುವಾಗಿದ್ದಂತೆ ಮರಣವು ಸಹ ವೀರನ ಮರಣವಾಗಿರುತ್ತಿತ್ತು. ಅದು ಎಂದಿಗೂ ಹೇಡಿಯ ಸಾವಾಗಿರುತ್ತಿತಲಿಲ್ಲ. ಈ ರೀತಿ ಧೈರ್ಯದಿಂದ ಅಂಜದೆ ಹೋರಾಡಿದ ವೀರನನ್ನು ಮೆಚ್ಚಿ ಗೌರವಿಸುವುದು ರಾಜನ ಕರ್ತವ್ಯ ಹಾಗೂ ಧರ್ಮವಾಗಿತ್ತು. ವೀರನನ್ನು ಹೋರಾಟವನ್ನು ಮತ್ತು ಅವನ ಗೆಲುವನ್ನು ಹೀಗೆ ಮೆಚ್ಚಿ ಹೊಗಳಿ ಕೊಂಡಾಡುತ್ತಿದ್ದರೆ ಅದೇ ರೀತಿ ವೀರನ ಮರಣವನ್ನು ಸಹ ಅಷ್ಟೇ ಆದರದಿಂದ ಗೌರವಿಸುತ್ತಿದ್ದರು.

ಹೀಗೆ ಹೋರಾಟದಲ್ಲಿ ಗೆದ್ದ ಅಥವಾ ವೀರಮರಣವನ್ನಪ್ಪಿದ ವೀರನ ನೆನಪಿಗಾಗಿ ಅವನ ತ್ಯಾಗ ಬಲಿದಾನದ ಸ್ಮಾರಕಗಳಂತೆ ಶಾಸನಗಳನ್ನು ಬರೆಸಿ ಹಾಕುತ್ತಿದ್ದರು ಇವುಗಳೇ ವೀರಗಲ್ಲುಗಳು. ಇದಕ್ಕೆ ಪೂರಕವಾಗಿ ಬೇಲೂರು ತಾಲೂಕಿನಲ್ಲಿ ಕಂಡುಬರುವ ಕೆಲವು ವೀರಭದ್ರ ದೇವಾಲಯಗಳಲ್ಲಿ ಇಂತಹ ವೀರಗಲ್ಲುಗಳಿರುವುದನ್ನು ಕಾಣಬಹುದಾಗಿದೆ. ಅವುಗಳ ವಿವರಣೆ ಈ ರೀತಿ ಇವೆ.

ಸಂಖ್ಯೆ : ೧

ಗ್ರಾಮ : ಹಳೆಬೀಡು

ಸ್ಥಳ : ಕರಗಲ್ಲು ವೀರಭದ್ರೇಶ್ವರ ದೇವಾಲಯದ ಮುಂಭಾಗದ ಗುಡಿಯಲ್ಲಿ

ಹೆಸರು : ವೀರಗಲ್ಲು

ಪ್ರಸುತ್ತ ವೀರಗಲ್ಲು ಸೈನಿಕರೊಂದಿಗೆ ಅಥವಾ ಶತ್ರುಗಳೊಂದಿಗೆ ಒಬ್ಬ ವೀರ ಹೋರಾಡಿ ಮಡಿದಂತಹ ದೃಶ್ಯಗಳನ್ನು ಕೆತ್ತನೆಯಲ್ಲಿ ಚಿತ್ರಸಲಾಗಿದೆ. ಈ ವೀರಗಲ್ಲು ಒಟ್ಟು ನಾಲ್ಕು ಹಂತಗಳನ್ನು ಒಳಗೊಂಡಿದೆ. ಕೆಳಗಿನ ಒಂದು ಮತ್ತು ಎರಡನೇ ಹಂತದಲ್ಲಿ ಹೋರಾಟವನ್ನು ಚಿತ್ರಿಸಿದರೆ ಮೂರನೇ ಹಂತದಲ್ಲಿ ಮಡಿದ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕರೆದೋಯ್ಯತ್ತಿರುವಂತೆ ಇವೆ. ಹಾಗೂ ಮೇಲಿನ ಹಂತದಲ್ಲಿ ವೀರನು ಶಿವನ ಸಾನಿಧ್ಯವನ್ನು ಸೇರಿದಂತೆ ಚಿತ್ರಿಸಲಾಗಿದೆ.

ಈ ವೀರಗಲ್ಲಿನ ಮೊದಲನೇ ಭಾಗವಾದ ಕೆಳಗಿನ ಹಂತ ಮತ್ತು ಅದರ ಮೇಲಿನ ಹಂತದಲ್ಲಿ ವೀರ ತನ್ನ ಆಯುಧಗಳನ್ನು ಹಿಡಿದುಕೊಂಡು ಶತ್ರುಗಳೊಡನೆ ಹೋರಾಡುತ್ತಿದ್ದಾನೆ. ಮೂರನೇ ಹಂತದಲ್ಲಿ ಧ್ಯಾನ ಮಗ್ನನಾಗಿ ಕುಳಿತು ಕೊಂಡಿದ್ದಾನೆ. ಅವರನ್ನು ಹೊತ್ತು ಅಪ್ಸರೆಯರು ಸ್ವರ್ಗಕ್ಕೆ ಹಾರುತ್ತಿದ್ದರೆ ನಾಲ್ಕನೇ ಹಂತದಲ್ಲಿ ಶಿವಲಿಂಗಕ್ಕೆ ನಮಿಸುತ್ತಿರುವಂತೆ ಇರುವ ವೀರನಶಿಲ್ಪನ ಶಿಲ್ಪವನ್ನು ಚಿತ್ರಿಸಲಾಗಿದೆ.

ಸಂಖ್ಯೆ : ೨

ಗ್ರಾಮ : ಹಳೆಬೀಡು

ಸ್ಥಳ : ಕರಗಲ್ಲು ವೀರಭದ್ರೇಶ್ವರ ದೇವಾಲಯದ ಮುಂಭಾಗದ ಗುಡಿಯಲ್ಲಿ

ಹೆಸರು : ವೀರಗಲ್ಲು

ಈ ವೀರಗಲ್ಲು ವಿಶಿಷ್ಟವಾಗಿದ್ದು ವೀರನು ಆನೆಯೊಂದಿಗೆ ಹೋರಾಡಿ ಮಡಿದ ಕಾರಣಕ್ಕಾಗಿ ಹಾಕಿಸಿದ ಶಾಸನೋಕ್ತ ವೀರಗಲ್ಲಾಗಿದೆ. ಇದು ಮೂರು ಹಂತಗಳನ್ನು ಒಳಗೊಂಡಿದ್ದು ಮೊದಲನೇ ಹಂತದಲ್ಲಿ ವೀರನು ಆನೆಯೊಂದಿಗೆ ಹೋರಾಡುತ್ತಾ ಕೆಳಗೆ ಬಿದ್ದಿದ್ದಾನೆ. ಆನೆ ಅಲಂಕಾರ ಸಹಿತವಾದ ಆ ಆನೆ ತನ್ನ ಕೋರೆ ಮತ್ತು ಸೊಂಡಿಲಿನಿಂದ ಅವನನ್ನು ತಿವಿಯುತ್ತಿವೆ. ಅದರ ಮೇಲಿನ ಭಾಗದ ಎರಡನೇ ಹಂತದಲ್ಲಿ ಮಡಿದ ವೀರನನ್ನು ಅಪ್ಸರೆಯರು ಸ್ವರ್ಗಕ್ಕೆ ಕರೆದೊಯ್ಯುತ್ತಿರುವಂತೆ ಮತ್ತು ಮೂರನೇ ಹಂತದಲ್ಲಿ ವೀರನು ಶಿವನ ಸಾನಿಧ್ಯವನ್ನು ಸೇರಿದಂತೆ ಚಿತ್ರಿಸಲಾಗಿದೆ. ಈ ಮೇಲಿನ ಹಂತದಲ್ಲಿ ಶಿವಲಿಂಗವಿದ್ದು ಅದರ ಎರಡು ಭಾಗದಲ್ಲಿ ಶಿವ ಪಾಲಕರು ನಿಂತಿದ್ದರೆ ಲಿಂಗದ ಬಲಭಾಗದಲ್ಲಿ ನಂದಿಯು ಕುಳಿತಿರುವ ರಚನೆಯಿದೆ. ಈ ವೀರಗಲ್ಲಿನ ಮೂರು ಪಟ್ಟಿಕೆಗಳಲ್ಲಿ ಬರವಣಿಗೆಯಿದ್ದು (ಶಾಸನ) ಅದು ಆ ವೀರನ ಕುರಿತು ಮಾಹಿತಿ ಒಳಗೊಂಡಿರುವ ಸಾಧ್ಯತೆ ಇದೆ. ಆದರೆ ಇದು ಅಪ್ರಕಟಿತವಾಗಿರುವುದರಿಂದ ಅದರ ಪ್ರಕಟಣೆಗೆ ಹೆಚ್ಚಿನ ಒತ್ತು ಕೊಡಬೇಕಾಗಿದೆ.

ಸಂಖ್ಯೆ : ೩

ಗ್ರಾಮ : ಘಟ್ಟದಹಳ್ಳಿ

ಸ್ಥಳ : ಸಿದ್ದೇಶ್ವರ ದೇವಾಲಯ

ಹೆಸರು : ವೀರಗಲ್ಲು (ಸ್ಥಾನ ಪಲ್ಲಟವಾಗಿದೆ)

ಈ ವೀರಗಲ್ಲಿ ಸಹ ಶಾಸನೋಕ್ತವಾಗಿದ್ದು ಮೂರು ಹಂತಗಳನ್ನು ಒಳಗೊಂಡಿದೆ. ಕೆಳಗಿನ ಹಂತದಲ್ಲಿ ಮೂರು ವ್ಯಕ್ತಿಗಳು ಹೋರಾಡುತ್ತಿರುವ ಚಿತ್ರವಿದೆ. ಬಹುಶಃ ಅದು ಕಳ್ಳರೊಂದಿಗೆ ವೀರನು ಹೋರಾಡುತ್ತಿರಬಹುದು. ಎರಡನೇ ಅಥವಾ ಮಧ್ಯದ ಹಂತದಲ್ಲಿ ಆ ವೀರನ್ನು ಅಪ್ಸರೆಯರು ಸ್ವರ್ಗಕ್ಕೆ ಕರೆದೊಯ್ಯುತ್ತಿದ್ದಾರೆ. ಮೇಲಿನ ಮೂರನೇ ಹಂತದಲ್ಲಿ ವೀರನು ಶಿವನ ಸಾನಿಧ್ಯವನ್ನು ಸೇರಿದಂತೆ ಇದೆ. ಈ ಭಾಗದ ಮಧ್ಯದಲ್ಲಿ ಶಿವಲಿಂಗವಿದ್ದು ಅದರ ಎಡಭಾಗದಲ್ಲಿ ವೀರನ ಶಿವನಿಗೆ ಒಂದು ಮಂಡಿಯನ್ನೂರಿ ನಮಿಸುತ್ತಿರುವಂತೆ ಇರುವ ನಂದಿಯನ್ನು ಚಿತ್ರಸಲಾಗಿದೆ. ಇದರ ಪಟ್ಟಿಕೆಯಲ್ಲಿರುವ ಶಾಸನವು ಪ್ರಕಟವಾಗಿದ್ದು ಇದರಲ್ಲಿ.

೧. ನಮಸ್ತುಂಗಶಿರಸ್ತುಂಬಿ ಚಂದ್ರ ಚಾಮರಚಾರವೇ ತ್ರೈಲೋ

೨. ಕ್ಯನೆಗರಾರಂಭ ಮೂಲಸ್ತಂಭಾಯ ಸಂಭವೇ ॥ ೩ ಭೂ ಪತಿ

೩. ನಾಯಕರು ಚಂಡೆಮನಾಯಕಂಗೆ ಪರೋಕ್ಷವಿನೆಯಂ ಮಾ

ಎಂದಷ್ಟೇ ಇದ್ದು ಇದರ ಮುಂದಿನ ಅಕ್ಷರಗಳು ಅಸ್ಪಷ್ಟವಾಗಿದೆ.

ಸಂಖ್ಯೆ : ೪

ಗ್ರಾಮ : ಇಂಟಿತೊಳಲು

ಸ್ಥಳ : ವೀರಭದ್ರೇಶ್ವರ ದೇವಾಲಯದ ಮುಂಭಾಗದ

ಹೆಸರು : ಶಾಸನೋಕ್ಷ ವೀರಗಲ್ಲು

ಮೂರು ಪಟ್ಟಿಕೆಗಳಲ್ಲೂ ಸಹ ಬರವಣಿಗೆಯನ್ನು ಹೊಂದಿರುವ ಮೂರು ಹಂತಗಳ ಶಾಸನೋಕ್ತ ವೀರಗಲ್ಲು ಇದಾಗಿದೆ. ಇದರ ಕೆಳಗಿನ ಮೊದಲನೇ ಹಂತದಲ್ಲಿ ನಾಲ್ಕು ಜನ ವ್ಯಕ್ತಿಗಳಿದ್ದು ಅದರ ಮಧ್ಯಭಾಗದಲ್ಲಿರುವವರಿಗೆ ಹಿಂಭಾಗದ ವ್ಯಕ್ತಿಗಳು ಚಾಮರವನ್ನು ಹಿಡಿದಿದ್ದಾರೆ. ಇಲ್ಲಿ ಯಾವ ಉದ್ದೇಶಕ್ಕೆ ವೀರನು ಮರಣ ಹೊಂದಿದ್ದಾನೆ ಎಂದು ತಿಳಿದು ಬಂದಿಲ್ಲ ಇದೊಂದು ಅಪ್ರಕಟಿತ ವೀರಗಲ್ಲಾಗಿದ್ದು ಕೆಳಗಿನ ಹಂತದಲ್ಲಿ ಒಬ್ಬ ವ್ಯಕ್ತಿ ಪಲ್ಲಕ್ಕಿಯ ಮೇಲೆ ಕುಳಿತರೆ ಮತ್ತೊಬ್ಬ ನಿಂತು ಕೊಂಡಿರುವುದರ ಅರ್ಥವೇನು ಎಂಬುವುದು ಸಂಶಯಕ್ಕೀಡುಮಾಡಿದೆ. ಆದರೆ ಮೇಲಿನ ಹಂತದಲ್ಲಿ ಅಪ್ಸರೆಯರು ಆ ವೀರನನ್ನು ಸ್ವರ್ಗಕ್ಕೂ ಕರೆದೊಯ್ಯತ್ತಿದ್ದಾರೆ. ಕೊನೆಯ ಹಂತದಲ್ಲಿ ಶಿವಲಿಂಗವಿದ್ದು ಅದರ ಹಿಂದೆ ಬಲಭಾಗದಲ್ಲಿ ಅಪ್ಸರೆ ಮತ್ತು ಲಿಂಗಕ್ಕೆ ಸಮಿಸುತ್ತಿರುವ ವೀರನನ್ನು ಚಿತ್ರಸಲಾಗಿದೆ. ಹಾಗೂ ಲಿಂಗದ ಎಡಭಾಗದಲ್ಲಿ ನಂದಿಯೂ ಸಹ ಇದೆ.

ಸಂಖ್ಯೆ : ೮

ಗ್ರಾಮ : ಇಂಟಿತೊಳಲು

ಸ್ಥಳ : ವೀರಭದ್ರೇಶ್ವರ ದೇವಾಲಯದ ಮುಂಭಾಗದ

ಹೆಸರು : ವೀರಗಲ್ಲು

ಈ ವೀರಗಲ್ಲು ಸದ್ಯದ ಪರಿಸ್ಥಿತಿಯಲ್ಲಿ ಮೂರು ಹಂತಗಳನ್ನು ಹೊಂದಿದೆ. ಶಿವಲಿಂಗವಿರುವ ಮೇಲಿನ ಹಂತವು ನಾಶವಾಗಿದ್ದು ಕೆಳಗಿನ ಮೊದಲನೇ ಹಂತದಲ್ಲಿ ವೀರನು ಗುರಾಣಿ ಮತ್ತು ಕತ್ತಿ ಹಿಡಿದು ಹೋರಾಡುತ್ತಿದ್ದಾನೆ. ಕುದುರೆ ಮೇಲಿರುವ ಮತ್ತಿಬ್ಬರು ಶತ್ರುಗಳು ಅವನನ್ನು ಸಂಹರಿಸಲು ಕತ್ತಿ ಎತ್ತಿದ್ದಾರೆ. ಆದರೆ ಮೇಲಿನ ಎರಡನೇ ಹಂತದಲ್ಲೂ ಸಹ ಇದೇ ರೀತಿಯ ಕೆತ್ತನೆಯಿದ್ದು ವೀರನ ಹಿಂಭಾಗದಲ್ಲಿ ಮತ್ತೊಬ್ಬನು ಬಿಲ್ಲನ್ನು ಹಿಡಿದುಕೊಂಡಿದ್ದಾನೆ. ಈ ಹಂತದಲ್ಲಿ ಮೂರು (ಹಂತದಲ್ಲಿ) ಕುದುರೆಯ ಮೇಲೆ ಶತ್ರುಗಳಿದ್ದಾರೆ. ಅವರೊಂದಿಗೂ ಕೂಡ ಆ ವೀರ ಕತ್ತಿ ಹಿಡಿದು ಹೋರಾಡುತ್ತಿದ್ದಾನೆ. ಈ ವೀರಗಲ್ಲಿನ ಮೂರನೇ ಹಂತದಲ್ಲಿ ಇಬ್ಬರು ಅಪ್ಸರೆಯರು ವೀರನನ್ನು ಸ್ವರ್ಗಕ್ಕೆ ಕರೆದೊಯ್ಯುತ್ತಿರುವಂತೆ ಚಿತ್ರಿಸಲಾಗಿದೆ.

೪.೩ ಶಾಸನಗಳು

ಒಂದು ನಾಡಿನ ಸಂಸ್ಕೃತಿ ಸಂಪ್ರದಾಯ ಜನಜೀವನ ಮತ್ತು ಸಮಾಜ ವ್ಯವಸ್ಥೆಯ ಇತಿಹಾಸವನ್ನು ಅರಿಯಲು ಹಾಗೂ ಆ ನಾಡಿನ ಗರ್ಭದಲ್ಲಿ ಅಡಗಿರುವ ಹಲವಾರು ವಿಷಯಗಳನ್ನು ಹೆಕ್ಕಿ ಹೊರತೆಗೆದು ಅನಾವರಣಗೋಳಿಸಲು ನಮಗೆ ಸಹಾಯಕ ಆಕರಗಳಾಗಿ ಆ ನಾಡಿನ ಶಾಸನಗಳು ಪ್ರಮುಖ ಪಾತ್ರವಹಿಸುತ್ತವೆ. ಶಾಸನಗಳೆಂದರೆ ಶಿಲೆ ಹಾಗೂ ವಿವಿಧ ಲೋಹಗಳ ಮೇಲೆ ಬರೆದ ಬರವಣಿಗೆಯಾಗಿದೆ. ಶಾಸನಗಳು ಮುಖ್ಯವಾಗಿ ಸಮಕಾಲಿನ ಸಾಮಾಜಿಕ ಪರಿಸರ ಸಾಂಸ್ಕೃತಿಕ ಜೀವನ ಧಾರ್ಮಿಕ ಪರಿಸ್ಥಿತಿ ಹಾಗೂ ಆಗಿನ ರಾಜಕೀಯ ಆಡಳಿತದ ಬಗ್ಗೆ ಬೆಳಕನ್ನು ಚೆಲ್ಲುತ್ತಾ ಆ ನಾಡಿನ ಜನರ ವ್ಯಕ್ತಿತ್ವವನ್ನು ಮತ್ತು ಶೌರ್ಯ ಪ್ರತಾಪಗಳನ್ನು ಧೈರ್ಯ ಸಾಹಸಗಳನ್ನು ಉದಾರ ವ್ಯಕ್ತಿತ್ವವನ್ನು ದಾನಗುಣವನ್ನು ಪ್ರತಿಬಿಂಬಿಸುತ್ತದೆ.[೧೧] ಆಧಾರವಿಲ್ಲದೆ ಇತಿಹಾಸವಿಲ್ಲ ಎಂಬ ಮಾತಿನಂತೆ ಇತಿಹಾಸದ ರಚನೆಯಲ್ಲಿ ಆಧಾರಗಳು ಪ್ರಮುಖ ಪಾತ್ರ ವಹಿಸುತ್ತವೆ. ಅದರಲ್ಲೂ ಪ್ರಾಚೀನ ಕಾಲದ ಅಂದರೆ ಇತಿಹಾಸದ ಕಾಲದಿಂದೀಚೆಗಿನ ಮಾಹಿತಿ ತಿಳಿಯಲು ಶಾಸನಗಳು ಪ್ರಮುಖ ಆಕರಗಳಾಗಿವೆ.

ಪ್ರಸ್ತುತ ಬೇಲೂರು ತಾಲೂಕಿನ ವೀರಭದ್ರ ಪರಂಪರೆಗೆ ಸಂಬಂಧಿಸಿದಂತೆ ಈ ಪ್ರದೇಶದಲ್ಲಿ ೮ ಶಾಸನಗಳು ಲಭ್ಯವಾಗಿದ್ದು ಅದರಲ್ಲಿ ಹೆಚ್ಚು ವೀರಭದ್ರನಿಗೆ ನೀಡಿದ ದಾನಶಾಸನಗಳಾಗಿವೆ. ಅಂತಹ ಪ್ರಮುಖ ಶಾಸನಗಳೆಂದರೆ.

ಶಾಸನ ಸಂಖ್ಯೆ : ೦೧

ಗ್ರಾಮ : ಅಡಗೂರು

ಸ್ಥಳ : ವೀರಭದ್ರ ದೇವಸ್ಥಾನದೊಳಗಿರುವ ಕಲ್ಲು

ಕಾಲ : ಕ್ರಿ.ಶ ೧೪೨೨

ಈ ಶಾಸನವು ದಾನಶಾಸನವಾಗಿದ್ದು ೧೪೨೨ ಕಾಲಮಾನ ವನ್ನೊಳಗೊಂಡಿದೆ ಸಿಂಗಿರಾಜ ಅಯ್ಯಗಳು ಈ ವಡುಗೂರು (ಅಡಗೂರು) ವೀರಭದ್ರನ ದೀಪದೂಪ ನೈವೇದ್ಯಕ್ಕೆ ಎರಡು ವರಹ ಹೊನ್ನು ಹಣವನ್ನು ಭಕ್ತರ ಸಮ್ಮುಖದಲ್ಲಿ ದಾನ ನೀಡಿದ ಮಾಹಿತಿಯನ್ನು ಇದು ಒಳಗೊಂಡಿದೆ.

ಶಾಸನದ ಸಾರಾಂಶ

ವಿಜಯಾಬ್ಯುದಯ ಶಕ ವರ್ಷ ೧೩೪೫ ನೆಯ ಶುಭಕ್ರುತು ಸಂವತ್ಸರದ ಕಾರ್ತಿಕ ಶುಕ್ಲ ಪಕ್ಷ ೧೫ ಗುರುವಾರದಂದು (ಅಂದರೆ ಕ್ರಿಶ ೧೪೨೨ ಅಕ್ಟೋಬರ ೨೯) ಪರ್ವತ ಸ್ವಯಂಭು ಶ್ರೀ ಲಿಂಗಚಕ್ರವರ್ತಿಯಾದ ಶ್ರೀ ಮಲ್ಲಿಕಾರ್ಜುನ ದೇವರ ಪಾದಪದ್ಮಾರಾಧಕರಾದ ಅವಧಾನ್ಯದ ಅಯ್ಯಗಳ (ಮಠಾದ್ಯಕ್ಷ) ಆಜ್ಞಾರಾಧಕರಾದ ಸಿಂಗಿರಾಜ ಅಯ್ಯಗಳು ವಡಗೂರ (ಅಡಗೂರು) ಶ್ರೀ ವೀರಭದ್ರ ದೇವರಿಗೆ ದೀಪ ನೈವೇದ್ಯಕ್ಕೆ ಎರಡು ವರಹ ಹೊನ್ನನು ಕೊಡಲೂಗಿ ಈ ಧರ್ಮವನ್ನು ಕಲಿದೇವ ಅಯ್ಯಗಳ ಭಕ್ತರ ಮುಂತಿತ್ತು ಅಚಂದ್ರಾರ್ಕಸ್ಥಾಯಿ (ಅಥವಾ ಚಂದ್ರನ ಆಣೆಯುಗಿ) ಆಗಿ ದೇವರ ದೀಪ್ತಿ ನೈವೇದ್ಯಕ್ಕೆ ಎರಡು ಹೊನ್ನು ಕೊಡಲಾಗಿದೆ ಎಂದು ಉಲ್ಲೇಖವಾಗಿದೆ. ಮತ್ತು ಈ ಧರ್ಮಕ್ಕೆ ಯಾರಾದರೂ ತಪ್ಪಿದವರ ತಮ್ಮ ತಂದೆ ತಾಯಿಯನ್ನು ವಾರಣಾಸಿಯಲ್ಲಿ ಕೊಂದ ಪಾಪಕ್ಕೆ ಹೋಗುವರು ಎಂದು ಶಾಪಶಯದೊಂದಿಗೆ ಶಾಸನವನ್ನು ಬರೆಸಲಾಗಿದೆ.[೧೧]

ಶಾಸನ ಸಂಖ್ಯೆ – ೦೨

ಪುಷ್ಪಗಿರಿ ಬೆಟ್ಟ

ಸ್ಥಳ – ಬೆಟ್ಟದ ಉತ್ತರ ಭಾಗದ ವೀರಭದ್ರ ದೇವಾಲಯದ ಸೋಪಾನದ ಬಳಿ ಮಂಟಪದಲ್ಲಿರುವ ಈಶಾನ್ಯ ಕಂಬದ ಪಶ್ಚಿಮ ಮುಖದಲ್ಲಿನ ಶಾಸನ.

ಕಾಲ – ಕ್ರಿ.ಶ ೧೪ ನೇ ಶತಮಾನ

ಈ ಶಾಸನವು ಮಲ್ಲಿಕಾರ್ಜುನ ದೇವಾಲಯದ ಪಕ್ಕದ ಗುಡಿಯಲ್ಲಿನ ವೀರಭದ್ರ ದೇವರಿಗೆ ಸಂಬಂದಿಸಿದ್ದು ವಿಜಯ ನಗರದ ಅರಸ ಹರಿಹರ ಮಹಾರಾಯರ ಅಳಿಯನಿಂದ ಬರೆಯಿಸಲ್ಪಟ್ಟಿದೆ.

ಶಾಸನದ ಸಾರಾಂಶ

ಶ್ರೀ ನಖರೇಶ್ವರ ವೋರುಂಗಲ್ಲಿ ಎಂದು ಕರೆಯಲ್ಪಡುವ ಶ್ರೀ ವೀರಭದ್ರ ದೇವರಿಗೆ ವೀರಹರಿಹರರಾಯರ ಅಳಿಯ ಪುಲ್ಲ ಘಂಡಸಿದ ರಾಜರು ಪಂಡಿತನ ಹಳ್ಳಿಯ ಕೆರೆಯ ಕೆಳಗೆ ಗದ್ದೆ ಕೊಳಗ ಮತ್ತು ಜಾಚಿಗೆರೆಯ ಕೆಳಗಿನ ಗದ್ದೆ ೧೨ ನ್ನು ದಾನ ನೀಡಲಾಗಿದೆ. ಈ ಧರ್ಮಕ್ಕೆ ತಪ್ಪಿದವರು ವಾರಣಾಸಿಯಲ್ಲಿ ಗುರುವನ್ನು ಕೊಂದು ಕಪಿಲೆಯನ್ನು (ಗೋವು) ಕ್ಕೊಂದೆ ಪಾಪಕ್ಕೆ ಹೋಗುವರು ಎಂಬ ಶಾಪಾಶಯವನ್ನು ಹೊಂದಿದೆ.[೧೨]

ಶಾಸನ ಸಂಖ್ಯೆ–೦೩

ಪುಷ್ಪಗಿರಿ ಬೆಟ್ಟ

ಸ್ಥಳ – ಅದೇ ಮಂಟಪದ ವಾಯುವ್ಯ ಕಂಬದ ಪೂರ್ವ ಮುಖದಲ್ಲಿನ ಶಾಸನ

ಕಾಲ – ೧೪ ನೇ ಶತಮಾನ

ಇದು ದಾನ ಶಾಸನವಾಗಿದ್ದು ವೀರಭದ್ರ ದೇವರಿಗೆ ಬೆಟ್ಟದಹಳ್ಳಿಯ ಸಿಂಗಿದೇವರಸನ ಮಕ್ಕಳು ದಾನ ನೀಡಿದ ಮಾಹಿತಿಯನ್ನು ಒಳಗೊಂಡಿದೆ.

ಶಾಸನದ ಸಾರಾಂಶ

ಶ್ರೀ ನಖರೇಶ್ವರ ವೋರುಂಗಲ್ಲ ವೀರಭದ್ರ ದೇವರಿಗೆ ಬೆಟ್ಟದಹಳ್ಳಿಯ ಸಿಂಗದೇವರನ ಸಮಸ್ತ ಉಡುಗಜಕ್ಕಾಗಿ ೫ ವರಹಗಳನ್ನು ಗೆಯ್ಯುಕೆಯ್ಯನು ಅನುಕ್ರಮವಾಗಿಸಿಕೊಂಡು ಚರ್ತುಸೀಮೆಯಲ್ಲಿ ಅಂದರೆ ನಾಲ್ಕು ಸೀಮೆಯಲ್ಲೂ ಕಲ್ಲನ್ನು ಅಥವಾ ಶಾಸನವನ್ನು ನಡೆಸಿಕೊಟ್ಟೆವು ಹಾಗೂ ಆ ಧರ್ಮವನ್ನು ಯಾರಾದರೂ ಪಾಲಿಸಬಹುದು. ಪಾಲಿಸದವರು ವಾರಣಾಸಿಯಲ್ಲಿ ಹಸುವನ್ನು ಮತ್ತು ಗುರುವನ್ನು ಕೊಂದ ಪಾಪಕ್ಕೆ ಹೋಗುವರು ಎಂದು ಈ ಶಾಸನದಲ್ಲಿ ಉಲ್ಲೇಖವಾಗಿದೆ.೧೩

ಶಾಸನ ಸಂಖ್ಯೆ-೦೪

ಪುಷ್ಪಗಿರಿ ಬೆಟ್ಟ:

ಸ್ಥಳ – ಅದೇ ಮಂಟಪದ ನೈಋತ್ಯ ಕಂಬದ ದಕ್ಷಿಣ ಮುಖ

ಕಾಲ – ೧೫ ನೇ ಶತಮಾನ

ಈ ಶಾಸನವು ಬೆಳೆಯ ನಾಯಕನು ಈ ವೀರಭದ್ರ ದೇವಾಲಯಕ್ಕೆ ನಂದಾದೀಪಗೆಯ ಕಲ್ಲನ್ನು ನೆಡಿಸಿಕೊಟ್ಟ ಮಾಹಿತಿಯನ್ನು ಒಳಗೊಂಡಿದೆ.

ಶಾಸನದ ಸಾರಾಂಶ

ಶ್ರೀ ನಖರೇಶ್ವರ ವೋರುಂಗಲ್ಲಿ ವೀರಭದ್ರ ದೇವರಿಗೆ ತ್ರಿಭುಜಯಂಕರ ಮೇದಿನಿಯ ಮೀಸೆಯರ ಗಂಡ ಹಾಗೂ ಮೂರುರಾಯರ ಗಂಡ ಎಂಬ ಬಿರುದುಗಳನ್ನು ಹೊಂದಿದ್ದ ಇಮ್ಮಡಿ ದೇವರಾಯರು ಈ ನಾಡನ್ನು ಆಳ್ವಿಕೆ ಮಾಡುತ್ತಿದ್ದಾಗ ಕೆಂಮ್ಮಯ್ಯ ನಾಯಕರ ಮಕ್ಕಳ ಬೆಳೆಯ ನಾಯಕನು ಈ ವೀರಭದ್ರ ದೇವರ ನಂದಾದೇವಿಗೆಗೆ ಕಲ್ಲನ್ನು ನೆಡಿಸಿಕೊಟ್ಟ ನೆನಪಿಗಾಗಿ ಈ ಶಾಸನವನ್ನು ಹಾಕಿಸಲಾಗಿದೆ.೧೪

ಶಾಸನ ಸಂಖ್ಯೆ-೦೫

ಪುಷ್ಪಗಿರಿ ಬೆಟ್ಟ:

ಸ್ಥಳ – ಅದೇ ಮಂಟಪದ ಈಶಾನ್ಯ ಕಂಬದ ಮೇಲೆ:

ಇದೊಂದು ಅಸ್ಪಷ್ಟವಾದ ದಾನಶಾಸನವಾಗಿದ್ದು ಬೀರದೇವನ ಹಳ್ಳಿಯ ದಕ್ಷಿಣ ದಿಕ್ಕಿಗಿರುವ ಕೆರೆಯ ಕೆಳಗಿನ ಭೂಮಿಯನ್ನು ಶ್ರೀ ವೀರಭದ್ರ ದೇವರಿಗೆ ದಾನ ನೀಡಿದ ಉಲ್ಲೇಖವಿದೆ ಮತ್ತು ಇದನ್ನು ಹಾಳುಮಾಡಿದವರು ಗೋಹತ್ಯೆ ಮಾಡಿದಂತೆ ಆಗುತ್ತದೆ. ಎಂಬ ಶಾಪಾಶಯವನ್ನು ಹೊಂದಿದೆ. ಪ್ರಾರಂಭದ ಕೆಲ ಅಕ್ಷರಗಳು ಅಳಿಸಿರುವುದರಿಂದ ಶಾಸನದ ಸಾರಾಂಶ ಹೇಳಲಾಗುವುದಿಲ್ಲ.೧೫

ಶಾಸನ ಸಂಖ್ಯೆ-೦೬

ಹಳೆಬೀಡು:

ಸ್ಥಳ – ವೀರಭದ್ರ ದೇವಸ್ಥಾನದಲ್ಲಿ ವೀರಶೈವ ಯತಿ ಮೂರ್ತಿಯ ಬಳಿ ನಂದಿ ಸೋಮನ ಹತ್ತಿರದಲ್ಲಿರುವ ಶಾಸನ.

ಶಾಸನದ ಪಾಠ

೧. ಶ್ರೀ ಗುರುಲಿಂಗ ಆದಿ ಲಿಂಗದೇವರ ಕಾರುಂಣ್ಯವ ಸಿಸ್ತರವಾಗಿ ಈ ಹಸ್ತಕಲಗಣಗಳು ಸಹಿತ ಮುಖ್ಯವಾಗಿ ಇಹ ವೀರೇಶ್ವರ

೨. ಲಿಂಗದ ಕಾರುಂಣ್ಯವ ಸಿಸ್ತರವಾಗಿ ಇಸ್ವರಿದಯ ಅಂದ್ಪು ದೇವರ ಮಗ ವೀರಂಣನು

೩. ನಿರಿಸದರ್ ಚಲ೧೬

ಶಾಸನ ಸಂಖ್ಯೆ-೦೭

ಗ್ರಾಮ – ಸಿದ್ದಾಪುರ

ಸ್ಥಳ – ವೀರಭದ್ರೇಶ್ವರ ದೇವಾಲಯದ ಬಲಭಾಗದಲ್ಲಿರುವ ಶಾಸನ

ಕಾಲ – ಕ್ರಿಶ ೧೨೮೫

ಇದೊಂದು ದಾನಶಾಸನವಾಗಿದ್ದು ವೀರಭದ್ರ ಮತ್ತು ಮಹಾಲಿಂಗ ಮಲ್ಲಿನಾಥ ದೇವರ ಪೂಜೆ ಮತ್ತು ಮುಂತಾದ ಕೆಲಸಗಳಿಗಾಗಿ ಹಲವು ಜನರ ಭೂಮಿ, ಮನೆ, ತೋಟ ಮತ್ತು ಹಣವನ್ನು ನೀಡಿದ ಮಾಹಿತಿಯನ್ನು ಪ್ರಸ್ತುತ ಶಾಸನ ಒಳಗೊಂಡಿದೆ.

ಶಾಸನದ ಸಾರಾಂಶ

ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರಚಾರವೇ ತ್ರೈಲೋಕ್ಯ ನಗರಾರಂಭ ಮೂಲ ಸ್ಥಂಭಾಯ ಸಂಭವೇ ಎಂಬ ಶ್ಲೋಕದಿಂದ ಪ್ರಾರಂಭವಾಗುವ ಈ ಶಾಸನವನ್ನು ಸ್ವಸ್ತಿ ಶ್ರೀ ಜಯೊಬ್ಯುದಯ ಶಕವರುಷ ೧೨೦೭ ನೇಯ ಪಾರ್ತೀವ ಸಂವತ್ಸರದ ಭಾದ್ರಪದ ಮಾಸದಲ್ಲಿ ೧೦ ಆದಿವಾರ ಅಂದರೆ ಕ್ರಿಶ ೧೨೮೫ ಆಗಸ್ಟ್ ೨೬ ಭಾನುವಾರದಂದು ಹಾಕಿಸಲಾಯಿತು. ಅಂದು ಹೊಯ್ಸಳರ ಭುಜಬಲ ಪ್ರತಾಪ ಚಕ್ರವರ್ತಿಯಾದ ಶ್ರೀ ವೀರನರಸಿಂಹ ಅರಸರು ದೋರಸಮುದ್ರ ಅಂದರೆ ಈಗಿನ ಹಳೆಬೀಡು ನಗರದಲ್ಲಿ ಸುಖಸಂಪನ್ನವಾಗಿ ವಿನೋದದಿಂದ ರಾಜ್ಯವಾಳುತ್ತಿದ್ದರು. ಆ ಸಮಯದಲ್ಲಿ ವೀರಶೈವ ಮಠಾದೀಶರಾದ ಶಿವರಾತ್ರಿಯ ಮಹದೇವ ಅವರು ಪುರನಾಥ ಮಾಹಿದೇವ ಪಂಡಿತ ಅವರ ಅನುಯಾಯಿ ಅಥವಾ ಶಿಷ್ಯರಾಗಿದ್ದರು. ಹಾಗೂ ಹುಲಿಗೆರೆಯ ಸೋಮನಾಥ ಎಂಬಲ್ಲಿ ದೇವಾಲಯದ ಅಗ್ರಹಾರದ

ಧಾರ್ಮಿಕ ಕೇಂದ್ರದಲ್ಲಿ ವಾಸವಾಗಿದ್ದರು. ಹಾಗೂ ಇದು ಹೊಯ್ಸಳರ ವೀರನರಸಿಂಹ ಮತ್ತು ಪಾರ್ಥಿವ ಭದ್ರವಾದ ಇವರ ಆಡಳಿತದ ಬಗ್ಗೆ ಉಲ್ಲೇಖಿಸುತ್ತದೆ. ಪಾಂಚಜನ್ಯಪುರ ಅಗ್ರಹಾರದ ಮಹಾಜನಸರವರು ಸ್ಥಿರೆಗೊಳಿಸಿದ ಆದಾಯ ನಿಧಿ ಹಾಗೂ ಭೂಮಿಯನ್ನು ಮುಂದಿನ ಮೂರು ವರ್ಷಗಳಿಗೆ ನಿಗದಿಯಾಗಿ ವ್ಯಯ ಸರ್ವಜಿತ್ ಮತ್ತು ಸರ್ವದಿನ್ ಹೀಗೆ ಮುಂತಾದವುಗಳನ್ನು ಕೊಡುಗೆಯಾಗಿ ನೀಡಿದ್ದಾರೆ. ಈ ಶಾಸನವನ್ನು ಅಕ್ಕಪ್ಪ ಸೇನಭೋವನ ಮಗ ಗೋವಣ್ಣ ಬರೆದಿದ್ದಾನೆ. ಹಾಗೆಯೇ ಹಿಡುವಳಿದಾರರಿಂದ ಪಡೆದುಕೊಂಡ ದಾನಿಗಳ ಹೆಸರಲ್ಲಿ ಮಾದಪ್ಪ ಮೂರು ಗದ್ಯಾಣವೆ ಭಾನುವಾರದಂದು ಬಚಯ್ಯ ಮಾಯಪ್ಪ ಮತ್ತು ಅಂಕಪ್ಪನೂ ದಾನ ನೀಡಿದ್ದರು. ಇವರುಗಳು ನಾಲ್ಕು ಮನೆಯನ್ನು ದಾನವಾಗಿ ನೀಡಿದ್ದರು ಎಂದು ಸೇನೆಭೋವ ಕಲ್ಲಯ್ಯ ಅವರು ಬರೆದಿದ್ದಾರೆ. ನಂತರ ದಾಖಲೆಯಲ್ಲಿ ಹೂವಿನ ತೋಟವನ್ನು ಗೋಪಯ್ಯ ಸೀನದೇವ ಎಂಬುವರ ಮಗನಾದ ಅಂಘರಿಕ ಮಾಯಿಅಯ್ಯಗಳ ಅವರ ನಾಮಾಲೆಯ ಬಸವದೇವ ಎಂಬುವರಿಗೆ ಖರೀದಿಸಿ ದಾನ ನೀಡಿದ್ದಾರೆ. ಎಂದು ಸೇನಭೂವ ವೀರಯ್ಯ ಎಂಬುವವರು ಬರೆದಿದ್ದಾರೆ. ಇದನ್ನು ಕ್ರಿ.ಶ ೧೨೮೫ ಫೆಬ್ರವರಿ ೧೪ ಬುಧವಾರದಂದು ಬರೆಸಿದ್ದಾರೆ. ಈ ಎಲ್ಲಾ ಕೊಡುಗೆಗಳನ್ನು ವೀರಭದ್ರ, ಮಹಾಲಿಂಗ ದೇವ ದೇವರ ಪೂಜೆ ಮತ್ತು ಮುಂತಾದ ಕೆಲಸಗಳಿಗಾಗಿ ದಾನಿಗಳು ದಾನವಾಗಿ ನೀಡಿದ್ದಾರೆ.೧೭

ಶಾಸನ ಸಂಖ್ಯೆ–೦೮

ಹಲ್ಮಿಡಿ ಗ್ರಾಮ

ಸ್ಥಳ – ವೀರಭದ್ರೇಶ್ವರ ದೇವರ ಹೊಲದಲ್ಲಿ ಬಿದ್ದಿರುವ ಕಲ್ಲು

ಕಾಲ –ಕ್ರಿ.ಶ ೧೭೦೭ ಸೆಪ್ಟೆಂಬರ್ ೨೨

ಈ ಶಾಸನವು ಅಸ್ಪಷ್ಟವಾಗಿದ್ದು.

೧. ಸರ್ವಜಿತು ಸಂವಚರ

೨. ಆಸೀಜ ಸು(೮) ಸೋಮವರ

೩. ಮದಿಗ ಉಡನ ಮದಿ ಎಂದಷ್ಟೇ ಉಲ್ಲೇಖವಿದೆ.೧೮

ಶಾಸನ ಸಂಖ್ಯೆ–೦೯

ಹಲ್ಮಿಡಿ ಗ್ರಾಮ

ಸ್ಥಳ – ವೀರಭದ್ರ ದೇವಾಲಯದ ಮುಂದೆ ನೆಟ್ಟಿದ್ದ ಕಲ್ಲು ಈಗ ಇದು ಮೈಸೂರಿನ ಪುರಾತತ್ವ ಹಾಗೂ ಪ್ರಾಚ್ಯವಸ್ತುಗಳ ಸಂಗ್ರಹಾಲಯಗಳಲ್ಲಿದೆ. ಈ ಶಾಸನದಲ್ಲಿ ವೀರಭದ್ರನ ಕುರಿತು ಯಾವುದೇ ಉಲ್ಲೇಖಗಳಿಲ್ಲದ ಕಾರಣ ಈ ಶಾಸನದ ಪಾಠ ಹೇಳಲಾಗಿಲ್ಲ.೧೯

ಶಾಸನ ಸಂಖ್ಯೆ–೧೦

ಗ್ರಾಮ – ಕ್ಯಾತಲಾಪುರ

ಸ್ಥಳ – ವೀರಭದ್ರ ದೇವಾಲಯದ ಮುಂದಿರುವ ಕಲ್ಲು

ಕಾಲ – ಕ್ರಿ.ಶ ೧೧೬೨

ಈ ಶಾಸನವು ವೀರಭದ್ರ ದೇವಸ್ಥಾನ ಮುಂಭಾಗದಲ್ಲಿ ದಕ್ಕಿಣ ದಿಕ್ಕಿಗೆ ಮುಖ ಮಾಡಿದ್ದು ಇದರಲ್ಲೂ ಸಹ ವೀರಭದ್ರನ ಕುರಿತು ಉಲ್ಲೇಖಗಳು ಕಂಡುಬರುವುದಿಲ್ಲ.೨೦

ಕೊನೆಟಿಪ್ಪಣಿ

೧. ಪ್ರಭಾಕರ್ ಎಂ.ಎನ್, ದೇವಾಲಯದ ವಾಸ್ತು, ಪು. ಸಂ, ೧೫೫.

೨. ಪ್ರಭಾಕರ್ ಎಂ.ಎನ್, (ಲೇ) ೨೦೧೦, ಇತಿಹಾಸದರ್ಶನ, ಸಂ, ೨೫ ಪು. ಸಂ, ೧೩೬.

೩. ಶ್ರೀಕಂಠಶಾಸ್ತ್ರಿ ಎಸ್, ಹೊಯ್ಸಳ ವಾಸ್ತುಶಿಲ್ಪ, ಪು. ಸಂ, ೪೫.

೪. ಸ್ಥಳೀಯರ ನಂಬಿಕೆಯಂತೆ

೫. ಅಲ್ಲ ಚಿರಂಜೀವಿ (ಲೇ), ಇತಿಹಾಸ ದರ್ಶನ, ಸಂ–೮(೧೯೯೩), ಪು, ಸಂ, ೭೮–೮೧.

೬. ಶೇಷಾಶಾಸ್ತ್ರಿ, ಕರ್ನಾಟಕದ ವೀರಗಲ್ಲುಗಳು, ಪು. ಸಂ, ೧೮.

೭. ರಾಜಣ್ಣ ಟಿ.ಡಿ, ಕನ್ನಡ ಶಾಸನ ಮತ್ತು ಸಾಹಿತ್ಯದಲ್ಲಿ ಶಾಪ, ಪು. ಸಂ, ೨೨.

೮. ಅದೇ ಪು. ಸಂ, ೨೨.

೯. ಭಟ್ ಸೂರಿ ಕೆ.ಜಿ, ಶಾಸನಶಾಸ್ತ್ರ, ಲಿಪಿಶಾಸ್ತ್ರ ಪರಿಚಯ, ಪು. ಸಂ, ೨.

೧೦. ಪರಮಶಿವಮೂರ್ತಿ ಡಿ. ವಿ, ಶಾಸನ ಅಧ್ಯಯನ, ಪು. ಸಂ, ೬.

೧೧. ಎಪಿಗ್ರಾಫಿಯಾ ಕರ್ನಾಟಕ, ಸಂ ೯, (ಪರಿಷ್ಕೃತ), ಶಾಸನ ಸಂಖ್ಯೆ, ೪೬೪. ಪು, ಸಂ, ೪೩೦.

೧೨. ಅದೇ, ಶಾಸನ ಸಂಖ್ಯೆ ೪೪೮, ಪು, ಸಂ, ೪೧೮.

೧೩. ಅದೇ, ಶಾಸನ ಸಂಖ್ಯೆ ೪೪೯, ಪು, ಸಂ, ೪೧೯.

೧೪. ಅದೇ, ಶಾಸನ ಸಂಖ್ಯೆ ೪೫೦, ಪು, ಸಂ, ೪೧೯.

೧೫. ಅದೇ, ಶಾಸನ ಸಂಖ್ಯೆ ೪೫೧, ಪು, ಸಂ, ೪೧೯.

೧೬. ಅದೇ, ಶಾಸನ ಸಂಖ್ಯೆ ೩೬೦, ಪು, ಸಂ, ೩೩೦.

೧೭. ಅದೇ, ಶಾಸನ ಸಂಖ್ಯೆ ೪೩೯, ಪು, ಸಂ, ೪೧೨.

೧೮. ಅದೇ, ಶಾಸನ ಸಂಖ್ಯೆ ೨೩೭, ಪು, ಸಂ, ೨೨೨.

೧೯. ಅದೇ, ಶಾಸನ ಸಂಖ್ಯೆ ೨೩೬, ಪು, ಸಂ, ೨೨೨.

೨೦. ಅದೇ, ಶಾಸನ ಸಂಖ್ಯೆ ೪೫೬, ಪು, ಸಂ, ೪೨೨.

ಅಧ್ಯಾಯ - ಐದು

ನಂಬಿಕೆ ಮತ್ತು ಆಚರಣೆಗಳು

ಅಧ್ಯಾಯ-೫

ನಂಬಿಕೆ ಮತ್ತು ಆಚರಣೆಗಳು

ಧರ್ಮದ ಮೂಲ ಅಂಶವೇ ನಂಬಿಕೆ ಮತ್ತು ಆಚರಣೆ. ನಂಬಿಕೆ ಎಂದರೆ ಒಂದು ಭಾವನಾತ್ಮಕ ಅನುಭವದ ರೂಪ ನಂಬಿಕೆಗಳಿಗೆ ಇಂತಹದೇ ಆದಂತಹ ನಿರೂಪಣೆಗಳಿಲ್ಲ. ಮನುಷ್ಯನ ಮನಸ್ಥಿತಿ ಬೌದ್ಧಿಕತೆ ಮತ್ತು ಮನಸ್ಸಿನ ಇಚ್ಚಾತ್ಮಕ ಕ್ರಿಯೆಗಳನ್ನು ಆಧರಿಸಿ ಅವನು ನಂಬಿಕೆಯ ದೃಷ್ಟಿಕೋನವನ್ನು ಅರ್ಥ ಮಾಡಿಕೊಂಡಿರುತ್ತಾನೆ. ಪ್ರಸ್ತುತ ಸಂಶೋಧನೆಯ ಈ ಅಧ್ಯಾಯವು ಧಾರ್ಮಿಕ ನಂಬಿಕೆ ಮತ್ತು ಆಚರಣೆಗಳಿಗೆ ಸಂಬಂಧಿಸಿದ್ದು, ನಾವು ಆ ನೆಲೆಗಟ್ಟಿನಲ್ಲಿಯೇ ಇದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಪ್ರಪಂಚದಲ್ಲಿರುವ ಯಾವುದೇ ಧರ್ಮಗಳು ಈ ನಿಯಮದ ಆಧಾರದ ಮೇಲೆ ನಿಂತುಕೊಂಡಿವೆ. ಯಾವುದೇ ಧರ್ಮವಾದರೂ ಅದು ತನ್ನದೇ ಆದ ನಂಬಿಕೆಗಳನ್ನು ರೂಢಿಸಿಕೊಂಡು ಅದಕ್ಕೆ ತಕ್ಕ ಆಚರಣೆಗಳನ್ನು ನೆರವೇರಿಸುತ್ತಾ ಬಂದಿದೆ. ಧರ್ಮವನ್ನು ಒಂದು ರೀತಿಯಲ್ಲಿ ನಂಬಿಕೆಗಳ ಸಮೂಹ ಎಂದು ಕರೆಯಬಹುದು. ಇಂತಹ ಧರ್ಮಗಳು ತಮ್ಮದೇ ಆದ ನಂಬಿಕೆಗಳನ್ನು ಸೃಷ್ಟಿಸಿರುತ್ತವೆ. ಕೆಲವು ಅತಿಮಾನುಷ ಭಯವೇ ಈ ನಂಬಿಕೆಗಳ ಉಗಮಕ್ಕೆ ಕಾರಣ ಎನ್ನಬಹುದು. ಪ್ರಕೃತಿಯ ಮಧ್ಯೆ ವಾಸಿಸಬೇಕಾಗಿದ್ದ ಮಾನವನು ಕಾಲಾನಂತರ ಧರ್ಮದ ಕಪಿಮುಷ್ಠಿಗೆ ಸಿಲುಕಿ ಹಲವಾರು ಶಕ್ತಿಗಳನ್ನು ದೇವರು ಎಂದು ನಂಬಿ ಪೂಜಿಸಲು ಪ್ರಾರಂಭಿಸಿ ಅವುಗಳನ್ನು ಒಲಿಸಿಕೊಳ್ಳಲು ಮುಂದಾದಾಗ ಮತ್ತೆ ಕೆಲವೊಂದು ನಂಬಿಕೆಗಳು ರೂಪುಗೊಂಡವು.

ಮತಧರ್ಮಗಳಿಗೆ ಸಂಬಂಧಿಸಿದಂತೆ ಅಗೋಚರ ದೈವಶಕ್ತಿಗಳ ಪ್ರೀತ್ಯಾರ್ಥವಾಗಿ ಮಾನವ ನಡೆಸುತ್ತಾ ಬಂದಿರುವ ಮತಾಚಾರಗಳಿಗೆ ಕರ್ಮ ವಿಧಿಗಳಿಗೆ ಈ ಹೆಸರಿದೆ. ಪ್ರಾದಿಮ ಜನಪದ ಗುಂಪು ನಿಸರ್ಗದಲ್ಲಿ ಜೀವಿಸುತ್ತಿದ್ದುದರಿಂದ ನಿಸರ್ಗದ ವ್ಯಾಪಾರಗಳನ್ನು ವಿಸ್ಮಯ, ಭಯದಿಂದ ನೋಡಿ ನಿಸರ್ಗವನ್ನು ತನ್ನದೇ ರೀತಿಯಲ್ಲಿ ಅರಿಯುವ ಪ್ರಯತ್ನ ಮಾಡಿತು. ಪ್ರತಿನಿತ್ಯ ಉದಯಿಸುವ ಸೂರ್ಯ, ಬೀಸುವ ಗಾಳಿ, ಉರಿಯುವ ಬೆಂಕಿ, ಸುರಿಯುವ ಮಳೆಯ ಬಗ್ಗೆ ಜನಪದ ಗುಂಪು ವಿಸ್ಮಯಗಳನ್ನು ತೋರಿ ಅವುಗಳಲ್ಲಿ ಅತಿ ಮಾನುಷ ಶಕ್ತಿ ಇದೆ ಎಂದು ಅವುಗಳನ್ನು ಒಲಿಸಿಕೊಳ್ಳುವ ಪ್ರಯತ್ನ ಮಾಡಿತು. ಇಂತಹ ಅನುಭವಗಳು ವ್ಯಕ್ತಿಗತವಾಗಿ ಮತ್ತು ಸಾಮೂಹಿಕವಾಗಿ ಒಂದೇ. ಆದುದರಿಂದ ಇಡೀ ಜನಪದ ವೃಂದ ತನ್ನ ರಕ್ಷಣೆಗಾಗಿ ಒಳಿತಿಗಾಗಿ ಅಗೋಚರ ಶಕ್ತಿಯನ್ನು ಗಾಢವಾಗಿ ನಂಬಿ ದೈವೀಕರಣಗೊಳಿಸಿ ಪೂಜಿಸುವ, ಆರಾಧಿಸುವ ಪರಂಪರೆ ಜಗತ್ತಿನ ಅನೇಕ ಮಾನವ ಸಮೂಹದ ಗುಂಪುಗಳಲ್ಲಿ ರೂಢಿಗೆ ಬಂದಿತು. ಈ ನಂಬಿಕೆಗಳು ಕ್ರಿಯೆ ಮೂಲಕ ಆಚರಣೆಗಳಾಗಿ ಜನಪದ ಸಮುದಾಯದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡವು.[೧]

ಆಚರಣೆ ಎಂಬುದು ಪ್ರಾದಿಮ ಧಾರ್ಮಿಕ ಕ್ರಿಯೆಯ ಮುಂದುವರಿದು ರೂಪ. ಅತೀಂದ್ರಿಯ ಶಕ್ತಿ ಅಥವಾ ಶಕ್ತಿಗಳಿಂದ ಅನುಗ್ರಹಲೋಸುಗ ಕೈಗೊಂಡ ಕ್ರಿಯೆ ಇದಾಗಿದೆ ಎಂದು ಮೋನಿಕಾ ವಿಲ್ಸನ್ ಹೇಳಿತ್ತಾರೆ. ಕ್ರಮವತ್ತಾದ ವಿಧಿಪೂರ್ವಕವಾದ ಪರಂಪರಾನುಗತವಾಗಿ ನಡೆದು ಬಂದ ರೀತಿಯಲ್ಲಿ ನಡೆಸುವ ಇಂತ ಕ್ರಿಯೆಗಳ ಹಿನ್ನೆಲೆಯಲ್ಲಿ ನಂಬಿಕೆ ಅಳುವಾಗಿ ಬೇರು ಬಿಟ್ಟಿರುತ್ತದೆ. ಧರ್ಮ ಇದರ ಅಡಿಗಲ್ಲು ಧಾರ್ಮಿಕ ವಿಧಿಗಳಿಂದ ತಾನು ನಂಬಿದ ಪವಿತ್ರ ವಸ್ತುಗಳ ಪ್ರೀತಿಯನ್ನು ಸಂಪಾದಿಸಬಹುದುದೆಂದು ಮನುಷ್ಯ ಎಣಿಸುತ್ತಾನೆ. ಇದು ಕ್ರಮವತ್ತಾದ ಅರ್ಚನಾ ಕ್ರಮವೂ ಹೌದು. ಲೌಕಿಕ ಹಿನ್ನಲೆಗಳಲ್ಲಿ ಸಂಪ್ರದಾಯ ನಿಷ್ಠ ರೀತಿಯಲ್ಲಿ ನಡೆಸುವ ಕ್ರಿಯೆಯೂ ಹೌದು.

ಧಾರ್ಮಿಕ ಪಾವಿತ್ರ್ಯದ ಜೊತೆಗೆ ಅತಿಮಾನುಷ ಶಕ್ತಿಗಳ ಭಯವೂ ಮಿಗಿಲಾದುದೇ ಆದುದರಿಂದ ಆಚರಣೆಗಳನ್ನು ಅತ್ಯಂತ ಶ್ರದ್ದೆಯಿಂದ ನಡೆಸಲಾಗುತ್ತದೆ. ನಡೆ – ನುಡಿಯಲ್ಲಿ ಸಣ್ಣ ತಪ್ಪಾದರು ಅನರ್ಥವಾದಿತೆಂಬ ಅಂಜಿಕೆ ಪ್ರತಿಯೊಂದು ಆಚರಣೆಯ ಹಿನ್ನಲೆಯಲ್ಲಿ ಇದ್ದೇ ಇರುತ್ತದೆ. ಉಪವಾಸವಿರುವುದು, ಮೀಸಲು ವಸ್ತುವನ್ನು ತೆಗೆದಿಡುವುದು ಹಿಂದಿನಿಂದ ನಡೆದು ಬಂದ ಪದ್ದತಿಯಲ್ಲಿ ಸ್ವಲ್ಪವೂ ಲೋಪಬರದಂತೆ ವಹಿಸುವುದು ಸಂಬಂದ ಪಟ್ಟ ವ್ಯಕ್ತಿಯಿಂದಲೇ ಕ್ರಿಯೆಗಳನ್ನು ನಡೆಸುವುದು ಈ ಮುಂತಾದ ಕ್ರಮಗಳನ್ನು ಗಮನಿಸಿದಾಗ ಮತದ ಬಾಹ್ಯಾಚರಣೆಗಳಾದ ಇವು ಬದುಕಿನಲ್ಲಿ ಎಷ್ಟು ಪ್ರಮುಖ ಪಾತ್ರ ವಹಿಸುತ್ತವೆ ಎಂಬುದು ವೇದ್ಯವಾಗುತ್ತದೆ.[೨]

ಆಚರಣೆಯ ಸಂದರ್ಭದಲ್ಲಿ ಕತ್ತಿ, ಭಲ್ಲೆ, ಬೆತ್ತ, ತ್ರಿಶೂಲ ಮುಂತಾದ ಗೊತ್ತಾದ ವಸ್ತುಗಳು ಆಯುಧ ವಿಶೇಷಗಳು ಹಾಗೂ ಆಚರಣೆಯ ಸಾಧನಗಳು ಹೌದು. ಸಾಮಾನ್ಯವಾಗಿ ಆಚರಣೆಯಲ್ಲಿ ಮೂರು ಮಜಲುಗಳನ್ನು ಕಾಣಬಹುದು ೧ ಪ್ರಾರ್ಥನೆ ೨ ಅರ್ಪಣೆ ೩ ದೈಹಿಕ ಸಂಜ್ಞೆಗಳು ಮತ್ತು ಇತರೆ ಕ್ರಿಯೆಗಳು. ಭಾರತೀಯ ಸಂಸ್ಕೃತಿಯ ಹಿಂದೂ ಪರಂಪರೆಗಳಲ್ಲಿ ನಂಬಿಕೆಯು ಅಗಾಧವಾಗಿದ್ದು ಇದು ಪೂರ್ವಿಕರಿಂದ ನಮಗೆ ಬಂದಿರುವ ಅಭಿಪ್ರಾಯವಾಗಿದೆ. ಪರಂಪರೆ ನಿರ್ಮಾಣದಲ್ಲಿ ವೇದ, ಪುರಾಣ, ರಾಮಾಯಣ ಮಹಾಭಾರತಾದಿಗಳ ಪಾತ್ರವೂ ಮಹತ್ತರವಾದುದು. ಇಂದಿನ ನಾಗರಿಕತೆ ಜಗತ್ತಿನಲ್ಲಿ ಅವು ತಮ್ಮ ಸ್ಥಾನವನ್ನು ಕಳೆದುಕೊಳ್ಳಲು ತೊಡಗಿದ್ದರೂ ಜನಪದರ ನಂಬಿಕೆ, ಶ್ರದ್ದೆ, ಆ ಮೂಲಕ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬರುವಲ್ಲಿ ಅದೇ ಬಲವಾದ ಆ ಕಾರಣಗಳಾದವು. ಹಾಗೆಯೇ ಕಲ್ಲು, ಬಂಡೆ, ಕೋಟೆ, ಕೊತ್ತಲ, ಗುಡ್ಡ, ಗಿಡಮರಗಳ ಬಗ್ಗೆ ಹುಟ್ಟಿಕೊಂಡ ಅದೆಷ್ಟೋ ಐತಿಹ್ಯ ದಂತಕಥೆಗಳು ಮೂಲತಃ ನಂಬಿಕೆಗಳೆ ಆಗಿವೆ. ಭಾವುಕ ಸಮಾಜ ಜೀವಿಗಳಿಗೆ ತಮ್ಮ ಅರಿವಿಗೆ ನಿಲುಕದ್ದೆಲ್ಲವೂ ಅಗಮ್ಯಶಕ್ತಿಯ ಪ್ರತೀಕವಾದವು.

ಪರಂಪರೆಯು ಯಾವುದೇ ಸಂಸ್ಕೃತಿಯ ಅಂಶಗಳನ್ನು ಮುಂದಿನ ಸಂಸ್ಕೃತಿಗೆ ತಗೆದುಕೊಂಡು ಹೋಗುವ ಬಲವಾದ ಚಲನಾತ್ಮಕ ಮೊತ್ತ. ಸಂಸ್ಕೃತಿಯಲ್ಲಿರುವ ಧರ್ಮ, ನೈತಿಕ ನಿಯಮಗಳು, ನುಡಿಗಟ್ಟುಗಳು, ನೀತಿ ಮತ್ತು ಸಾಮಾಜಿಕ ವರ್ತನೆ ಮುಂತಾದವುಗಳನ್ನು ಮುಂದಿನ ಸಂಸ್ಕೃತಿಗೆ ಸಾಗಿಸುವ ಒಂದು ಸಾಧನವಾಗಿದೆ. ಪರಂಪರೆ ಅದು ಒಂದು ಮುಂದಿನ ಜನಾಂಗದ ರಾಷ್ಟ್ರೀಯತೆ, ಭ್ರಾತೃತ್ವ, ಜನರ ಐಕ್ಯತೆ, ಮುಂತಾದ ಅಂಶಗಳನ್ನು ಮುಂದಿನ ಜನಾಂಗಕ್ಕೆ ಒಯ್ಯುವ ಸಾಧನವಾಗಿದೆ.

ಪ್ರತಿಯೊಂದು ಜನಾಂಗವು ತನ್ನ ಧರ್ಮ ಸಂಪ್ರದಾಯ ಆಚರಣೆಯಲ್ಲಿ ಎದ್ದು ಕಾಣುವ ಅಂಶವೆಂದರೆ ವರ್ಷದ ನಿರ್ದಿಷ್ಟ ಕಾಲದ ಅರ್ಚನೆ, ಪೂಜೆ, ಉತ್ಸವ, ಆರಾಧನೆ ಮತ್ತು ಆರಾಧನೆಯ ಅಂಗವಾಗಿ ದೈವಕ್ಕೆ ಸಂಬಂಧಿಸಿ ತಾವು ಹೊತ್ತಹರಕೆಗಳನ್ನು ಪೂರೈಸಲು ಆಚರಣೆಗಳನ್ನು ಜರುಗಿಸುವುದುದು. ವಿವಿಧ ಹಬ್ಬ ಹರಿದಿನಗಳಲ್ಲಿ ವಿಶೇಷ ಪೂಜೆ ಮಾಡುವುದು, ಅಭಿಷೇಕ ಉತ್ಸವಗಳನ್ನು ಮಾಡುವುದು, ಕೆಂಡ ಹಾಯುವದು ಮುಂತಾದವು ಕೆಲವೊಂದು ದೇವರ ಆಚರಣೆಗಳ ಮುಖ್ಯ ಲಕ್ಷಣ. ಇದರಲ್ಲಿ ವೀರಭದ್ರನ ಆಚರಣೆಯು ಸಹ ಒಂದಾಗಿದೆ. ಕರ್ನಾಟಕದ ವಿವಿಧ ಪ್ರದೇಶಗಳ ವ್ಯಾಪ್ತಿಯನ್ನು ಪಡೆದ ದೇವತೆ ವೀರಭದ್ರ ಅಖಿಲ ಭಾರತ ಮಟ್ಟದಲ್ಲಿ ಈ ದೇವತೆಯ ಆರಾಧನೆ ನಡೆಯುತ್ತಿರುವುದನ್ನು ಗುರುತಿಸುತ್ತ ನಮ್ಮ ನಾಡಿನ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮ ಪ್ರದೇಶಗಳಲ್ಲಿ ವೀರಭದ್ರನ ಆರಾಧನೆ ಮತ್ತು ಅದರ ಅಂಗವಾಗಿ ನಡೆಯುವ ಆಚರಣೆಗಳು ನಮಗೆ ಕಾಣುವ ರೀತಿ ವೈವಿದ್ಯ ಪೂರ್ಣ, ಇದನ್ನು ವೀರಶೈವ ಜನಾಂಗದವರೇ ನಡೆಸಿಕೊಂಡು ಬರುತ್ತಾರೆ.

ಕರ್ನಾಟಕ ವೀರಶೈವ ಜನಾಂಗದ ಕೆಲವರ ಮನೆ ದೇವತೆಯಾದ ವೀರಭದ್ರ ಹಲವು ರೀತಿಯಲ್ಲಿ ಆರಾಧನೆಗೊಳ್ಳುತ್ತಿದ್ದಾರೆ. ವೀರಭದ್ರನ ಪ್ರೀತ್ಯರ್ಥವಾಗಿ ಗುಗ್ಗಳ ಸೇವೆಯನ್ನು ನಡೆಸುವ ಭಕ್ತರು ವೀರಗಾಸೆ, ಪುರವಂತರ ಕುಣಿತ, ಮುಂತಾದ ಕಲಾ ಸೇವೆಯನ್ನು ಅರ್ಪಿಸುತ್ತಾರೆ. ವೀರಭದ್ರನ ಹಾವಭಾವಗಳನ್ನು ಅಭಿನಯಿಸಿ ಅವನ ಪುರಾಣವನ್ನು ನಿರೂಪಿಸುವ ವೀರಭದ್ರನ ಕುಣಿತವೂ ರೂಢಿಯಲ್ಲಿದೆ. ಉತ್ತರ ಕರ್ನಾಟಕದ ಪುರವಂತರ ವಿವಿಧ ಶಸ್ತ್ರಗಳನ್ನು ಮೈತುಂಬಾ ಚುಚ್ಚಿಕೊಳ್ಳುವ ಮೂಲಕ ತಮ್ಮನ್ನೆ ದೃಢೀಕರಿಸಿಕೊಳ್ಳುತ್ತಾ ವೀರಭದ್ರನನ್ನು ಸ್ತುತಿಸುತ್ತಾರೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ಈ ವೀರಭದ್ರನ ಪರಂಪರೆಯಿದ್ದು ಅದರಲ್ಲಿ ವೀರಭದ್ರ ಕುಣಿತ, ವೀರಗಾಸೆ, ಕಾಸೆಕುಣಿತ, ಪುರವಂತಿಕೆಯ ಆಚರಣೆಗಳನ್ನು ಮಾಡುತ್ತಾರೆ. ಆದರೆ ಬೇಲೂರು ತಾಲೂಕಿನಲ್ಲಿ ಈ ರೀತಿಯ ಆಚರಣೆಗಳನ್ನು ಮಾತ್ರ ಕಂಡುಬರುವುದಿಲ್ಲ ಆದರೆ ಇಲ್ಲೂ ಸಹ ಕೆಲವೊಂದು ಸಾಮಾನ್ಯ ಆಚರಣೆಗಳನ್ನು ಸತ್ಯ ಮತ್ತು ನಿಷ್ಠೆಯಿಂದ ನಡೆಸುತ್ತಾರೆ. ಹೀಗೆ ವೀರಭದ್ರನಿಗೆ ಸಂಬಂಧಪಟ್ಟ ನಂಬಿಕೆಗಳು ಮತ್ತು ಆಚರಣೆಗಳು ಬೇಲೂರು ತಾಲೂಕಿನಲ್ಲು ಇದ್ದು ದೇವಾಲಯಗಳ ಪೂಜೆ, ಅಭಿಷೇಕ ಸೇರಿದಂತೆ ಇತ್ಯಾದಿ ಧಾರ್ಮಿಕ ಕಾರ್ಯಗಳನ್ನು ಲಿಂಗಾಯತರು ಮಾತ್ರ ನಡೆಸಿಕೊಂಡು ಹೋಗುತ್ತಾರೆ.

ಪೂಜೆ ಅಭಿಷೇಕ

ಎಲ್ಲಾ ಗ್ರಾಮಗಳಲ್ಲೂ ಸಹ ವೀರಭದ್ರ ದೇವರಿಗೆ ಪ್ರತಿನಿತ್ಯ ಪೂಜೆ ನಡೆಯುತ್ತದೆ. ಹಾಗೂ ವಿಶೇಷ ಸಂದರ್ಭಗಳಲ್ಲಿ ಮಾತ್ರ ಅಂದರೆ ಕಾರ್ತಿಕ ಮಾಸದಲ್ಲಿ ಹಬ್ಬ ಹರಿದಿನಗಳಲ್ಲಿ ಕೆಲವೊಂದು ಗ್ರಾಮಗಳಲ್ಲಿ ವಾರಕೊಮ್ಮೆ ಈ ಅಭಿಷೇಕವನ್ನು ಸ್ವಾಮಿಗೆ ಮಾಡಲಾಗುತ್ತದೆ. ಈ ಅಭಿಷೇಕವನ್ನು ಪಂಚಾಮೃತದಿಂದ ಮಾಡಲಾಗುತ್ತದೆ ಹಾಗೂ ವೀರಭದ್ರ ಶಿವನ ಇನ್ನೊಂದು ಅವತಾರವಾಗಿರುವುದರಿಂದ ಹೆಚ್ಚಾಗಿ ರುದ್ರಾಭಿಷೇಕವನ್ನು ಮಾಡಲಾಗುತ್ತದೆ. ರುದ್ರಾಭಿಷೇಕ ಎಂದರೆ ರುದ್ರಪಠಣ ಮಾಡುತ್ತಾ ಅರ್ಘ್ಯವಾದ್ಯಗಳಿಂದ ನೆರವೇರಿಸುವ ಅಭಿಷೇಕವಾಗಿದೆ. ಹಾಗೂ ತಾಲೂಕಿನಲ್ಲಿ ದೇಹವನ್ನು ದಂಡಿಸುವ ಆಚರಣೆಗಳನ್ನು ಮಾಡುವುದಿಲ್ಲ. ಈ ವೀರಭದ್ರನ ಪೂಜೆ ಅಭಿಷೇಕಗಳು ಸೂಕ್ಷ್ಮತೆಯಿಂದ ಇರಬೇಕು ಸ್ವಲ್ಪ ವ್ಯತ್ಯಾಸವಾದರೂ ಕೂಡ ಅದು ಊರಿಗೆ ಕೆಡುಕಾಗುತ್ತದೆ ಅನ್ನೋ ನಂಬಿಕೆ ಅಲ್ಲಿನ ಜನಗಳಿಗಿದೆ.

ಜಾತ್ರೆಗಳು

ತಾಲ್ಲೂಕಿನ ವೀರಭದ್ರನಿರುವ ಹಲವು ಗ್ರಾಮಗಳಲ್ಲಿ ಪ್ರತಿವರ್ಷ ಜಾತ್ರೆ ನಡೆಯುತ್ತದೆ. ಕೆಲವೊಂದು ಗ್ರಾಮಗಳಲ್ಲಿ ಮೂರುವರ್ಷಕ್ಕೊಮ್ಮೆ ಆಗುತ್ತದೆ. ಈ ಜಾತ್ರೆಯಲ್ಲಿ ಅಗ್ನಿಕುಂಡವು, ಉತ್ಸವಗಳನ್ನು ಮಾಡುವುದು, ಗುಗ್ಗಳ ಹಿಡಿದು ದೇವರ ಮೆರವಣಿಗೆ ಮಾಡುವುದು, ಎಡೆಸೇವೆ ಮಾಡುವುದು, ಕಟ್ಟಳೆ ಕಟ್ಟುವುದು, ಕೆಂಡ ಹಾಯುವುದು. ಸೇರಿದಂತೆ ಮುಂತಾದ ಧಾರ್ಮಿಕ ಕಾರ್ಯಗಳನ್ನು ಮಾಡಲಾಗುತ್ತದೆ. ಇದಕ್ಕೆ ಸುತ್ತಮುತ್ತಲಿನ ಭಕ್ತಾದಿಗಳೆಲ್ಲರೂ ಆಗಮಿಸಿ ಸ್ವಾಮಿಯ ದರ್ಶನ ಪಡೆಯುತ್ತಾರೆ. ಈ ಜಾತ್ರಾದಿನಗಳಲ್ಲಿ ಸ್ವಾಮಿಗೆ ಹೆಚ್ಚು ಅಲಂಕಾರ ಮಾಡಲಾಗುತ್ತದೆ.

ಕೆಂಡ ಹಾಯುವುದು

ಕೆಂಡ ಹಾಯುವುದೇ ವೀರಭದ್ರ ದೇವರ ಹಲವು ಗ್ರಾಮಗಳಲ್ಲಿ ಜಾತ್ರೆ ಎನಿಸಿಕೊಳ್ಳುತ್ತದೆ. ಸತಿಯ ಆತ್ಮಾಹುತಿ, ವೀರಭದ್ರನ ಹುಟ್ಟು ಮತ್ತು ದಕ್ಷನ ಸಂಹಾರದ ಪೌರಾಣಿಕ ಅಂಶಗಳಲ್ಲಿ ಬೆಂಕಿಯೇ ಪ್ರಧಾನ ಪಾತ್ರವಹಿಸಿತು. ಅದ್ದರಿಂದ ವೀರಭದ್ರನ ಜಾತ್ರೆಗಳಲ್ಲಿ ಕೆಂಡವನ್ನು ಹಾಯಲಾಗುತ್ತದೆ. ಕೆಲವು ಗ್ರಾಮಗಳಲ್ಲಿ ಇದು ಪ್ರತಿವರ್ಷ ಯುಗಾದಿ, ನಂತರ ಶ್ರಾವಣ ಮಾಸದಲ್ಲಿ ನಡೆದರೆ ಮತ್ತೆ ಕೆಲವು ಗ್ರಾಮಗಳಲ್ಲಿ ಮೂರು ವರ್ಷಕ್ಕೊಮ್ಮೆ ನಡೆಯುತ್ತದೆ. (ಉದಾ: ಕ್ಯಾತರಾಮರ) ಹಾಗೂ ನಾರಾಯಣಪುರ, ಹೊಸಹಳ್ಳಿಯಲ್ಲಿ ಇಪ್ಪತ್ತೈದು ವರ್ಷದ ಹಿಂದೆ ಕೆಂಡವಾಗಿತ್ತು ಎಂದು ಹೇಳಲಾಗುತ್ತದೆ. ಮೊದಲೇ ಹೇಳಿದಂತೆ ವೀರಭದ್ರನ ಪೂಜೆಯ ಕೋಪದೊಷದಿಂದ ಈ ರೀತಿ ಕೆಂಡವನ್ನು ನಿರ್ಮಿಸಲಾಗಿರುತ್ತದೆ. ದೇವರಿಗೆ ಹರಕೆಹೊತ್ತ ಭಕ್ತರು ಅದರ ಈಡೇರಿಕೆಗಾಗಿ ಸುಡುವ ಕೆಂಡದ ಮೇಲೆ ಓಡುವ ಧಾರ್ಮಿಕ ಆಚರಣೆ ರಾಜ್ಯದ ಹಲವು ಗ್ರಾಮಗಳಲ್ಲಿ ಆಚರಣೆಯಲ್ಲಿ ಭಕ್ತಿಯ ಪರಾಕಾಷ್ಠೆಯಲ್ಲಿ ಭೀತಿಯನ್ನು ಬದಿಗೊತ್ತಿ ಕೆಂಡದ ಮೇಲೆ ಓಡುವ ಈ ದೇವಾತಾರ್ಚನೆಯ ಆಚರಣೆಯನ್ನು ಕೊಂಡ ಹಾಯುವುದು ಅಥವಾ ಕೆಂಡ ಹಾಯುವುದು ಎಂದು ಕರೆಯಲಾಗುತ್ತದೆ.

ಈ ರೀತಿಯ ವೀರಭದ್ರ ದೇವರ ಕೊಂಡ ಹಾಯುವವರಲ್ಲಿ ಹೆಚ್ಚಾಗಿ ಲಿಂಗಾಯಿತರು, ಒಕ್ಕಲಿಗರು, ಶೆಟ್ಟರ ಸಮೂಹದವರು ಸೇರಿರುತ್ತಾರೆ. ಕೆಲವೊಂದು ಗ್ರಾಮಗಳಲ್ಲಿ ಉಪವಾಸ ವ್ರತ ಮಾಡಿ ಈ ಕೊಂಡವನ್ನು ಹಾಯಲಾಗುತ್ತದೆ. ಕುದಿಯುತ್ತಿರುವ ಕೊಂಡದ ಮೇಲೆ ಮೊದಲಿಗೆ ಸ್ವಾಮಿಯ ಅಡ್ಡೆಯನ್ನು ಹೊತ್ತು ಸಾಗುತ್ತಾರೆ. ನಂತರ ಒಂದೇ ಬಾರಿಗೆ ಮೂವತ್ತು, ನಲವತ್ತು ಜನರು ಈ ಕೊಂಡದ ಮೇಲೆ ಓಡುತ್ತಾರೆ. ಜಾತ್ರೆಗೆ ಬಂದ ಶೇಕಡ ೬೦% ರಷ್ಟು ಜನರು ಈ ಕೊಂಡ ಹಾಯುತ್ತಾರೆ. ಹರಕೆ ಹೊರುವವರು ಹೆಚ್ಚಾಗಿ ಯುವಕರು, ಮಹಿಳೆಯರು ಮತ್ತು ಮಧ್ಯ ವಯಸ್ಕ ಪುರುಷರಾಗಿರುತ್ತಾರೆ. ಚಿಕ್ಕ ಮಕ್ಕಳು ಹಾಗೂ ಈ ಮುದುಕರು ಹೆಚ್ಚಾಗಿ ಈ ಕೊಂಡ ಹಾಯುವುದಿಲ್ಲ.

ಹಬ್ಬಗಳು

ವೀರಭದ್ರ ದೇವರಿಗೆ ಪ್ರತಿ ಹಬ್ಬಗಳಲ್ಲೂ ಸಹ ವಿಶೇಷವಾದ ಪೂಜೆ ಅಭಿಷೇಕ ಮಾಡಲಾಗುತ್ತದೆ. ಕಾರ್ತಿಕ ಪೂಜೆ, ವಿಜಯದಶಮಿ, ಆಯುಧ ಪೂಜೆ, ಶಿವರಾತ್ರಿ, ಮಹಾನವಮಿ, ಮಕರಸಂಕ್ರಾಂತಿ

ಮುಂತಾದ ಹಬ್ಬಗಳಲ್ಲಿ ಈ ಧಾರ್ಮಿಕ ಕಾರ್ಯಗಳು ಮತ್ತು ದೇವರ ಉತ್ಸವಗಳು ಹೆಚ್ಚಾಗಿ ಜರುಗುತ್ತವೆ. ಹಾಗೂ ಈ ಸಂದರ್ಭಗಳಲ್ಲಿ ಗ್ರಾಮಸ್ಥರೆಲ್ಲರಿಗೂ ಸಹ ಅನ್ನ ಸಂತರ್ಪಣೆ ಮಾಡಲಾಗುತ್ತದೆ. ವಿಶೇಷವಾಗಿ ಪೌರ್ಣಮಿಯ ದಿನ ಅಡಗುರು ಗ್ರಾಮದಲ್ಲಿ ಕಟ್ಟಲೆಯನ್ನು ಕಟ್ಟಲಾಗುತ್ತದೆ. ಮತ್ತು ೧೦೧ ಎಡೆಸೇವೆಯನ್ನು ಸಹ ಮಾಡಲಾಗುತ್ತದೆ. ಬೇಲೂರು ತಾಲೂಕು ಹಳೇಬೀಡು ಅಡಗೂರು ಗ್ರಾಮದ ಶ್ರೀ ವೀರಭದ್ರೇಶ್ವರ ದೇವಾಲಯವು ದುಷ್ಟಶಕ್ತಿಯನ್ನು ಬಿಡಿಸುವ ಕೇಂದ್ರವು ಸಹವಾಗಿದೆ. ವಿಶೇಷ ದಿನಗಳಲ್ಲಿ ಆತ್ಮಗಳು ಸೇರಿಕೊಂಡಿರುವ ವ್ಯಕ್ತಿಗಳನ್ನು ಇಲ್ಲಿಗೆ ಕರೆದುಕೊಂಡು ಬಂದು ವಾರಗಟ್ಟಲೇ ಇಲ್ಲಿಯೇ ಇದ್ದು ತಮ್ಮ ಶಕ್ತಿಗಳನ್ನು ತಮ್ಮ ಕಷ್ಟಗಳನ್ನು ನಿವಾರಣೆ ಮಾಡಿಕೊಂಡು ಹೋಗುತ್ತಾರೆ. ದೆವ್ವ-ಭೂತಗಳಿಂದ ವ್ಯಕ್ತಿಗಳನ್ನು ಈ ವೀರಭದ್ರ ಬಿಡಿಸುವುದರಿಂದ ಮತ್ತು ಈ ದೇವರಿಗೆ ನಡೆದುಕೊಂಡರೆ ಒಳ್ಳೆಯದಾಗುತ್ತದೆ ಎಂಬ ಕಾರಣದಿಂದ ಈ ಕ್ಷೇತ್ರದ ಪ್ರಸಿದ್ಧಿ ಪಡೆದಿದೆ ಎಂದು ಇಲ್ಲಿನ ಗ್ರಾಮಸ್ಥರು ಹೇಳುತ್ತಾರೆ.

ಗುಗ್ಗಳ ಸೇವೆ

ಬೇಲೂರು ತಾಲೂಕಿನ ಹಲ್ಮಿಡಿ ಗ್ರಾಮದಲ್ಲಿ ಮಾತ್ರ ಈ ವೀರಭದ್ರನಿಗೆ ಸಂಬಂಧಿಸಿದ ಗುಗ್ಗಳ ಸೇವೆ ಮೂರು ವರ್ಷಕೊಮ್ಮೆ ನಡೆಯುತ್ತದೆ. ಈ ಸೇವೆ ಆ ಗ್ರಾಮದ ಕೆಂಡದಾರ್ಚನೆಯ ಕುರಿತಾಗಿದ್ದು ಅದರ ಆಚರಣೆ ಹಿಗಿದೆ. ಗ್ರಾಮಸ್ಥರೆಲ್ಲಾ ಸೇರಿ ಕೆಂಡದಾರ್ಚನೆಗೆ ಬೇಕಾಗುವ ಸೌದೆಯನ್ನು ತರಲು ಮನೆಗೊಬ್ಬರಂತೆ ತೆರಳುವುದು ಮುಳ್ಳಯ್ಯನಗಿರಿಗೆ. ಗ್ರಾಮದಿಂದ ಇಬ್ಬರು ಉಪವಾಸ ವ್ರತ ಆಚರಿಸಿ ಶುದ್ಧನೀರು ತರಲು ಹೊರಡುವುದು. ಹಿರಿಯರ ಆಚಾರ ವಿಚಾರಗಳನ್ನು ಇಂದಿಗೂ ಉಳಿಸಿಕೊಂಡು ಬಂದ ದ್ಯೋತಕವಾಗಿದೆ. ಮಹೋತ್ಸವದ ವಿಶೇಷವೆಂದರೆ ಕೆಂಡದಾರ್ಚನೆಯ ಗುಡಿಯ ಮುಂದೆ ಗುಂಡಿತೆಗೆದು ೨೫ ಅಡಿಗಳಷ್ಟು ಎತ್ತರಕ್ಕೆ ಸೌದೆಯನ್ನು ಸೇರಿಸಿ ಸುಮಾರು ೧೫ ಅಡಿಗಳಷ್ಟು ಸೌದೆಯನ್ನು ರಾತ್ರಿಯಿಂದ ಬೆಳಗಿನವರೆಗೂ ಉರಿಸಿ ಕೆಂಡವನ್ನು ಮಟ್ಟಮಾಡುತ್ತಾರೆ. ಗುಂಡಿಯೊಳಗೆ ಮೊದಲೆ ಇಟ್ಟಿದ್ದ ಗುಗ್ಗುಳ ಕಂಬವನ್ನು ಹೊರತೆಗೆದು ನೋಡಿದರೆ ಅದರೊಳಗಿದ್ದ ತಾವರೆ ಮೊಗ್ಗುಗಳು ಅರಳಿರುತ್ತವೆ. ನಂತರ ಈ ಹೂವುಗಳನ್ನು ಗ್ರಾಮಸ್ಥರಿಗೆ ಹಂಚಲಾಗುತ್ತದೆ.೩ ನಂತರ ಕೆಂಡದ ಗುಂಡಿಯ ಸುತ್ತ ಎಡೆಗಳನ್ನು ಇಟ್ಟು ಪೂಜೆಯ ನಂತರ ಯಗಚಿ ನದಿಯಿಂದ ತಂದ ಕಳಶಗಳನ್ನು ಇರಿಸಿ ಕೆಂಡದಾರ್ಚನೆ ಮತ್ತು ಪಂಚಕಳಶಾದಿ ಮಹೋತ್ಸವ ನೆರವೇರಿಸಲಾಗುವದು. ತಾಲೂಕಿನಲ್ಲಿ ವೀರಭದ್ರ ದೇವಾಲಯಗಳಿಗೆ ಇತರೆ ಸಮುದಾಯದವರು ಭಕ್ತರಷ್ಟೇ ಆಗುತ್ತಾರೆ. ಆದರೆ ಯಾವುದೇ ಧಾರ್ಮಿಕ ವಿಧಿ-ವಿಧಾನಗಳಲ್ಲಿ ಅವರು ಪಾಲ್ಗೊಳ್ಳುವುದಿಲ್ಲ.

ಕೊನೆ ಟಿಪ್ಪಣಿ

೧. ಮಂಜುನಾಥ ಬೇವಿನಕಟ್ಟಿ, ಕನ್ನಡ ಜನಪದ ನಂಬಿಕೆಗಳು, ಪು, ಸಂ, ೧೩೫.

೨. ಅದೇ ಪು. ಸಂ, ೧೩೬.

೩. ಗೊರೂರು ಅನಂತರಾಜು, ಹಾಸನ ಜಿಲ್ಲೆಯ ದೇವಾಲಯಗಳ ದರ್ಶನ, ಪು, ಸಂ, ೧೩೬-೧೩೮.

ಅಧ್ಯಾಯ – ಆರು

ಸಮಾರೋಪ

ಅಧ್ಯಾಯ – ಆರು

ಸಮಾರೋಪ

ಭಾರತೀಯ ಸಂಸ್ಕೃತಿಯಲ್ಲಿ ಕರ್ನಾಟಕದ ಪಾತ್ರ ಅಪಾರವಾಗಿದೆ. ಕರ್ನಾಟಕವನ್ನು ಪ್ರಾದೇಶಿಕವಾಗಿ ವಿಂಗಡಿಸಿ ಅಧ್ಯಯನ ಕೈಗೊಂಡರೆ. ಆಯಾ ಜಿಲ್ಲೆ ತಾಲೂಕುಗಳಲ್ಲಿರುವ ಪ್ರಾಚೀನ ನೆಲೆಗಳು, ಶಾಸನ, ವೀರಗಲ್ಲು, ದೇವಾಲಯ, ಮೂರ್ತಿಶಿಲ್ಪ, ಕೋಟೆ ಕೊತ್ತಲ, ಕೆರೆ–ಬಾವಿಗಳು, ನಂಬಿಕೆ ಮತ್ತು ಆಚರಣೆಗಳು ಮುಂತಾದವುಗಳಲ್ಲಿ ಸಾಂಸ್ಕೃತಿಕ ವೈವಿದ್ಯತೆ ಹಾಗೂ ವೈಶಿಷ್ಟ್ಯತೆಯನ್ನು ಗುರುತಿಸಬಹುದಾಗಿದೆ. ಇಂತಹ ಪ್ರಾದೇಶಿಕ ಅಧ್ಯಯನದಿಂದ ನಾಡಿನ ಸಾಂಸ್ಕೃತಿಕ ಕ್ಷೇತ್ರದಲ್ಲಿ ಬಿಟ್ಟು ಹೋಗಿರುವ ಕೆಲವು ಅಂಶಗಳನ್ನು ಸೇರಿಸಲು ಸಾಧ್ಯವಾಗುತ್ತದೆ. ಇತಿಹಾಸದಲ್ಲಿ ರಾಜಧಾನಿ ಪಟ್ಟಣಗಳನ್ನು ಮುಖ್ಯವಾಗಿರಿಸಿಕೊಂಡು ಕೇವಲ ರಾಜಕೀಯ ಕ್ಷೇತ್ರಕ್ಕೆ ಸಂಬಂಧಿಸಿದಂತ ಅಧ್ಯಯನಗಳೇ ಹೆಚ್ಚಾಗಿ ನಡೆದು ಬಂದವು. ಆದರೆ ಇತ್ತೀಚಿನ ದಿನಗಳಲ್ಲಿ ಈ ಕ್ಷೇತ್ರವು ವಿಸ್ತಾರ ರೂಪವನ್ನು ಪಡೆದಿದ್ದರಿಂದ ಸ್ಥಳೀಯ ಅಧ್ಯಯನದ ಕಡೆಗೆ ಹೆಚ್ಚು ಮಹತ್ವವನ್ನು ನೀಡಲಾಗುತ್ತಿದೆ.

ಬೇಲೂರು ತಾಲೂಕಿನ ವೀರಭದ್ರ ಪರಂಪರೆಯ ಕುರಿತು ಪ್ರಸ್ತುತ ಸಂಪ್ರಬಂಧದಲ್ಲಿ ಚರ್ಚಿಸುವ ಪ್ರಯತ್ನ ಮಾಡಲಾಗಿದೆ. ಅಧ್ಯಯನದ ಅನುಕೂಲಕ್ಕಾಗಿ ಈ ವಿಷಯವನ್ನು ಆರು ಅಧ್ಯಯಗಳನ್ನಾಗಿ ಮಾಡಿಕೊಳ್ಳಲಾಗಿದೆ. ಪ್ರತಿಯೊಂದು ಅಧ್ಯಾಯದಲ್ಲಿ ನಿರ್ದಿಷ್ಟ ವಿಷಯಗಳ ಕುರಿತು ಆಕರಗಳು ಮತ್ತು ಕ್ಷೇತ್ರಕಾರ್ಯದ ಮಾಹಿತಿಗಳನ್ನು ಬಳಸಿಕೊಂಡು ವಿಶ್ಲೇಷಣೆ ಮಾಡುವ ಪ್ರಯತ್ನ ಮಾಡಲಾಗಿದೆ.

ಬೇಲೂರು ಪ್ರದೇಶದಲ್ಲಿ ಪ್ರಾಗಿತಿಹಾಸದಿಂದ ಮೈಸೂರು ಒಡೆಯರ ಕಾಲದ ವರೆಗಿನ ಸುದೀರ್ಘವಾದ ಸಾಂಸ್ಕೃತಿಕ ಘಟ್ಟಗಳಲ್ಲಿ ಮಾನವನ ಅಲೆಮಾರಿ ಜೀವನದಿಂದ ಹಿಡಿದು ಕ್ರಮೇಣ ಒಂದು ಸುಸಂಬದ್ಧವಾದ ಸಾಮಾಜಿಕ ವ್ಯವಸ್ಥೆ ನಿರ್ಮಾಣವಾಗುವಲ್ಲಿ ಅನೇಕ ಕ್ರಾಂತಿಕಾರಿ ಬದಲಾವಣೆಗಳಾಗಿರುವುದನ್ನು ಕಾಣುತ್ತೇವೆ. ಈ ಪ್ರದೇಶ ಮಲೆನಾಡು ಭಾಗಕ್ಕೆ ಸೇರಿರುವುದರಿಂದ ಭೌಗೋಳಿಕವಾಗಿ ಸಮೃದ್ದಿಯನ್ನು ಹೊಂದಿದೆ. ಅಲ್ಲದೆ ಪ್ರಾಗಿತಿಹಾಸ ಕಾಲದಿಂದ ಬೃಹತ್ ಶಿಲಾಯುಗದ ವರೆಗಿನ ಅವಶೇಷಗಳು ಈ ಪರಿಸರದಲ್ಲಿ ಸಿಕ್ಕಿವೆ. ಹಾಗೂ ರಾಜಕೀಯವಾಗಿ ಮೌರ್ಯ, ಕದಂಬ, ಗಂಗ, ರಾಷ್ಟ್ರಕೂಟ, ಬದಾಮಿ ಚಾಲುಕ್ಯ, ಕಲ್ಯಾಣ ಚಾಲುಕ್ಯ, ಹೊಯ್ಸಳರು, ವಿಜಯನಗರ, ಮೈಸೂರು ಒಡೆಯರು, ಕೆಳದಿ, ತಗರೆ ಮತ್ತು ಬೇಲೂರು ನಾಯಕರ ಆಡಳಿತಕ್ಕೆ ಈ ಪ್ರದೇಶ ಒಳಪಟ್ಟಿದ್ದನ್ನು ಶಾಸನಾಧಾರಗಳ ಸಹಿತ ಪ್ರಸ್ತುತ ಅಧ್ಯಯನದಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಹಾಗೂ ಬೇಲೂರಿನ ಹಿನ್ನೆಲೆ ಮತ್ತು ಈ ಸ್ಥಳದ ಬಗ್ಗೆ ಇರುವ ಐತಿಹ್ಯಗಳನ್ನು ದಾಖಲಿಸಲಾಗಿದೆ.

ಪ್ರಾಚೀನ ಕಾಲದಿಂದಲೂ ಸಹ ಬೇಲೂರು ಪ್ರಮುಖ ಧಾರ್ಮಿಕ ಕ್ಷೇತ್ರವಾಗಿ ಪ್ರಸಿದ್ಧಿ ಪಡೆದಿದೆ. ಅಭಿನವ ಕ್ಷೋಣಿವೈಕುಂಠ, ದಕ್ಷಿಣ ವಾರಣಾಸಿ ಎಂದೆಲ್ಲಾ ಕರೆಯಲಾಗುವ ಬೇಲೂರು ಇಂದು ಕೂಡ ಒಂದು ಪ್ರಸಿದ್ಧ ವೈಷ್ಣವ ಕ್ಷೇತ್ರವಾಗಿಯೇ ಮುಂದುವರೆದುಕೊಂಡು ಬರುತ್ತಿದೆ. ಅಷ್ಟಾದರೂ ಕೂಡ ಈ ಪ್ರದೇಶದಲ್ಲಿ ಶೈವದ ಪ್ರಭಾವವೇನು ಕಡಿಮೆಯಿಲ್ಲ. ಹಿಂದಿನ ಕಾಲದಲ್ಲಿ ರಾಜಮನೆತನಗಳ ಪ್ರೋತ್ಸಾಹದ ಫಲವಾಗಿ ಮತ್ತು ಇಂದು ಅತೀ ಹೆಚ್ಚಿನ ಶೈವ ಅನುಯಾಯಿಗಳಿಂದಾಗಿ ಹಲವಾರು ಶೈವ ದೇವಾಲಯಗಳು ತಾಲೂಕಿನಲ್ಲಿ ನಿರ್ಮಾಣವಾಗಿವೆ. ಅಂತಹ ಪ್ರಮುಖ ಶೈವದೇವಾಲಯಗಳಲ್ಲಿ ವೀರಭದ್ರನ ಆಲಯಗಳೂ ಸೇರಿವೆ.

ಈ ಪ್ರದೇಶದಲ್ಲಿ ವೀರಭದ್ರನ ಆರಾಧನೆ ಯತೇಚ್ಚವಾಗಿದ್ದು ಇವರನ್ನು ಶಿವನ ಪ್ರತಿರೂಪ ಎಂದೇ ಪೂಜಿಸಲಾಗುತ್ತಿದೆ. ಇಲ್ಲಿನ ಧರ್ಮಾಸಕ್ತರು ಈ ದೈವದ ಕುರಿತು ಅನೇಕ ನಂಬಿಕೆಗಳನ್ನು ಹೊಂದಿ ಇವರನ್ನು ಒಲಿಸಿಕೊಳ್ಳಲು ಅನೇಕ ಆಚರಣೆಗಳನ್ನು ಮಾಡುತ್ತಾ ಬಂದಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ನಿರ್ದಿಷ್ಟ ಅಧ್ಯಯನಗಳಾಗದ ಕಾರಣ ಕ್ಷೇತ್ರಕಾರ್ಯದ ಮೂಲಕ ದೇವಾಲಯಗಳಿಗೆ ಮತ್ತು ಆಚರಣೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಪ್ರಸ್ತಾಪಿಸಲಾಗಿದೆ.

ತಾಲೂಕಿನ ಹಲವು ಗ್ರಾಮಗಳ ವೀರಭದ್ರ ದೇವಾಲಯಗಳು ೭೦೦-೮೦೦ ವರ್ಷ ಪ್ರಾಚೀನವಾಗಿದ್ದರೂ ಕೂಡ ಅವುಗಳ ಬಗೆಗೆ ಸ್ಥಳೀಯರಾಗಲಿ ಅಥವಾ ಪುರಾತತ್ವ ಇಲಾಖೆಯಾಗಲಿ ಗಮನಹರಿಸಿಲ್ಲ. ಅವು ವಾಸ್ತುಶಿಲ್ಪ ರಚನೆಯಲ್ಲಿ ಶ್ರೀಮಂತಿಕೆಯನ್ನು ಹೊಂದಿದ್ದು. ಅವುಗಳ ಮಾಹಿತಿಯನ್ನು ಒಂದು ಕಡೆ ದಾಖಲಿಸುವ ಕೆಲಸವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗಿದೆ. ಉಳಿದ ದೇವಾಲಯಗಳು ಕಾಲಾ ನಂತರದಲ್ಲಿ ಜೀರ್ಣೋದ್ಧಾರಗೊಂಡಿವೆ. ಅವುಗಳಿಗಿರುವ ಪ್ರಾಚೀನತೆಯನ್ನು ಸ್ಥಳೀಯರಿಗೆ ಮನವರಿಕೆ ಮಾಡಿಕೊಡುವುದರ ಜೊತೆಗೆ ಸಂಶೋಧನೆಯ ಬರವಣಿಗೆಯಲ್ಲಿ ಅದನ್ನು ದಾಖಲಿಸುವ ಪ್ರಯತ್ನ ಮಾಡಲಾಗಿದೆ. ಮತ್ತು ಸ್ಥಳೀಯರಿಗೆ ಶಾಸನಗಳ ಬಗ್ಗೆ ಮಾಹಿತಿ ಇಲ್ಲದಿದ್ದರಿಂದ ಕೆಲವೊಂದು ವೀರಭದ್ರನ ಶಾಸನಗಳು ನಾಶ ಹೊಂದುವ ಹೊಸ್ತಿಲಿನಲ್ಲಿದ್ದವು. ಅವುಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಗ್ರಾಮಸ್ಥರಿಗೆ ಕ್ಷೇತ್ರಕಾರ್ಯ ಸಂದರ್ಭದಲ್ಲಿ ನೀಡಲಾಯಿತು. ಹಾಗೂ ಅಧ್ಯಯನದ ಉದ್ದೇಶಕ್ಕೆ ತಕ್ಕಂತೆ ಈ ಪ್ರದೇಶದ ವೀರಭದ್ರ ಪರಂಪರೆಯನ್ನು ದೇವಾಲಯ, ಶಾಸನ, ನಂಬಿಕೆ ಮತ್ತು ಆಚರಣೆಗಳಿಂದ ನಿರ್ದಿಷ್ಟವಾಗಿ ಕಟ್ಟಿಕೊಡಲಾಗಿದೆ. ಕೇವಲ ಬೇಲೂರು ತಾಲೂಕಿನ ವ್ಯಾಪ್ತಿಯನ್ನು ಮಾತ್ರ ಹೊಂದಿದ್ದ ಅಧ್ಯಯನದ ವಿಷಯವು ಪ್ರಾಥಮಿಕ, ಆನುಷಂಗಿಕ ಆಕರಗಳು ಮತ್ತು ಕ್ಷೇತ್ರ ಕಾರ್ಯದ ಮೂಲಕ ತನ್ನ ಉದ್ದೇಶವನ್ನು ಈಡೇರಿಸಿಕೊಂಡಿದೆ.

ಪ್ರಸ್ತುತ ಅಧ್ಯಯನದಲ್ಲಿ ಕಂಡುಕೊಂಡ ಫಲಿತಗಳು

ತಾಲೂಕಿನಲ್ಲಿನ ಕೆಲವು ವೀರಭದ್ರ ದೇವಾಲಯಗಳು ಸುಮಾರು ಎಂಟುನೂರು ವರ್ಷ ಪ್ರಾಚೀನವಾದವುಗಳೆಂದು ಕಂಡುಕೊಳ್ಳಲಾಯಿತು. ಈ ದೇವರಿಗೆ ನಿರ್ಮಿಸಿದ ದೇವಾಲಯಗಳನ್ನು ನೋಡಿದರೆ ಹೊಯ್ಸಳರು, ವಿಜಯನಗರ ಹಾಗೂ ನಂತರದ ಕಾಲದಲ್ಲಿ ವೀರಭದ್ರನ ಆರಾಧನೆ ಹೆಚ್ಚು ಪ್ರಸಿದ್ಧಿ ಪಡೆದಿತ್ತು ಎಂಬುದನ್ನು ಸಂಶೋಧನೆಯಿಂದ ತಿಳಿದುಕೊಳ್ಳಲಾಯಿತು.

ವೀರಭದ್ರನ ದೇವಾಲಯಗಳಲ್ಲಿ ಐದು ವೀರಗಲ್ಲುಗಳು ಸಿಕ್ಕಿದ್ದು ಅವುಗಳಲ್ಲಿ ನಾಲ್ಕು ಶಾಸನೋಕ್ತಗಳಾಗಿದ್ದು ಅಪ್ರಕಟಿತವಾಗಿವೆ. ಇದನ್ನು ಪ್ರಕಟ ಮಾಡಿದರೆ ಇತಿಹಾಸಕ್ಕೆ ಇನ್ನೂ ಹೆಚ್ಚಿನ ದಾಖಲೆಗಳನ್ನು ಒದಗಿಸಬಹುದಾಗಿದೆ.

ತಾಲೂಕಿನಲ್ಲಿ ವೀರಭದ್ರನಿಗೆ ಸಂಬಂಧಿಸಿದ ಎಂಟು ಶಾಸನಗಳು ಸಿಕ್ಕಿವೆ. ಅವು ಈ ದೇವರಿಗೆ ದಾನದತ್ತಿಗಳನ್ನು ನೀಡಿರುವ ಮಾಹಿತಿಗಳನ್ನು ತಿಳಿಸುತ್ತವೆ. ಇದನ್ನು ಗಮನಿಸಿದರೆ ಪ್ರಾಚೀನ ಕಾಲದಲ್ಲೆ ವೀರಭದ್ರನ ಆರಾಧನೆ ಬೇಲೂರು ಪರಿಸರದಲ್ಲಿ ಹೆಚ್ಚು ಪ್ರಸಿದ್ಧಿಯಾಗಿತ್ತೆಂದು ತಿಳಿದು ಬರುತ್ತದೆ. ಬೇಲೂರು ಪ್ರದೇಶದಲ್ಲಿ ವೀರಭದ್ರನ ಕುರಿತು ಇರುವ ಅನೇಕ ನಂಬಿಕೆ ಮತ್ತು ಆಚರಣೆಗಳನ್ನು ತಿಳಿದುಕೊಳ್ಳಲಾಗಿದೆ. ಅದರಲ್ಲೂ ಉತ್ತರ ಕರ್ನಾಟಕದಲ್ಲಿ ಪ್ರಚಲಿತವಿರುವ ಗುಗ್ಗಳ ಸೇವೆ ಹಲ್ಮಿಡಿ ಎಂಬ ಗ್ರಾಮದಲ್ಲಿ ವಿಭಿನ್ನವಾಗಿ ನಡೆಯುತ್ತದೆ.

ದೇವಿಹಳ್ಳಿ ಎಂಬ ಗ್ರಾಮದಲ್ಲಿ ಕೇವಲ ಮೊಗವಾಡವಿರುವ ವೀರಭದ್ರನ ದೇವಾಲಯವನ್ನು ಗುರುತಿಸಲಾಗಿದೆ. ಹಾಗೂ ಪುಷ್ಪಗಿರಿಯ ವೀರಭದ್ರನಿಗೆ ವೊರುಂಗಲ್ಲ ವೀರಭದ್ರನ ಖ್ಯಾತಿ ಇರುವುದನ್ನು ಪ್ರಸ್ತುತ ಸಂಶೋಧನೆಯಲ್ಲಿ ದೃಢಪಡಿಸಿಕೊಳ್ಳಲಾಗಿದೆ.

ಬೇಲೂರು ಧಾರ್ಮಿಕವಾಗಿ ಸಹಿಷ್ಣುತೆಯನ್ನು ಹೊಂದಿದ ಪ್ರದೇಶವಾಗಿತ್ತು. ಆದ ಕಾರಣ ವೀರಭದ್ರ ದೇವಾಲಯಕ್ಕೆ ಹೊಂದಿಕೊಂಡಂತ ಶೈವ ಮತ್ತು ವೈಷ್ಣವ ಧರ್ಮಕ್ಕೆ ಸಂಬಂಧಿಸಿದ ಮೂರ್ತಿ ಶಿಲ್ಪಗಳಿವೆ. ಪೌರಾಣಿಕ ಮತ್ತು ಜನಪದಿಯ ಶಿಲ್ಪಗಳನ್ನು ದೇವಾಲಯದ ಗೋಡೆ ಮತ್ತು ಕಂಬಗಳಲ್ಲಿ ಅಳವಡಿಸಲಾಗಿದೆ. ಅವುಗಳೊಂದಿಗೆ ಗ್ರಾಮದಲ್ಲಿ ವೀರಗಲ್ಲುಗಳು ಸಹ ಲಭ್ಯವಾಗಿವೆ. ಸಂಪ್ರದಾಯ ನಂಬಿಕೆಗಳನ್ನು ಉಳಿಸಿಕೊಂಡು ಬಂದಿರುವ ಗಜಲಕ್ಷ್ಮೀ ಶಿಲ್ಪಗಳು ಈ ಪ್ರದೇಶದಲ್ಲಿ ವಿಶೇಷವಾಗಿ ಕಂಡು ಬರುತ್ತವೆ. ಬೇಲೂರು ಪರಿಸರದ ವೀರಭದ್ರ ಪರಂಪರೆಯನ್ನು ಪುನರ್‌ರಚಿಸುವಲ್ಲಿ ಪ್ರಾಗಿತಿಹಾಸ ಕಾಲದ ಅವಶೇಷ, ಸ್ಮಾರಕ, ಶಾಸನ, ಸಾಹಿತ್ಯ, ಜಾನಪದ ಮತ್ತು ಮೌಖಿಕ ಆಕರಗಳು ಲಭ್ಯವಾಗಿರುವುದರಿಂದ ಅವುಗಳನ್ನು ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ.

ಅನುಬಂಧಗಳು

೧. ಪರಾಮರ್ಶನ ಗ್ರಂಥಗಳು
೨. ನಕ್ಷೆ ಮತ್ತು ತಲನಕ್ಷೆಗಳು
೩. ಛಾಯಾಚಿತ್ರಗಳು

೧. ಪರಾಮರ್ಶನ ಗ್ರಂಥಗಳು

೧. ಅಂಬಳಿಕೆ ಹಿರಿಯಣ್ಣ (ಸಂ)., ೨೦೦೯, **ಕನ್ನಡ ವಿಷಯ ವಿಶ್ವಕೋಶ ಇತಿಹಾಸ ಮತ್ತು ಪುರಾತತ್ವ**, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೨. ಅಪರ್ಣ. ಕೂ. ಸ., ೧೯೯೯, **ದೇವಾಲಯ ವಾಸ್ತುಶಿಲ್ಪ ಪರಿಚಯ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಉದಯ ರವಿ., ೨೦೧೦, **ಹಾಸನ ಜಿಲ್ಲಾ ವೈಶಿಷ್ಟ್ಯ**, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಹಾಸನ.

೪. ಕಡಪಟ್ಟಿ ಎಂ. ಎನ್., ೨೦೦೮, **ಪ್ರಾಚೀನ ಕರ್ನಾಟಕದಲ್ಲಿ ಶೈವಧರ್ಮ**, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಳಿ, ಧಾರವಾಡ.

೫. ಕಪಟರಾಳ ಕೃಷ್ಣರಾಯರು., ೧೯೫೫, **ಕರ್ನಾಟಕದ ಲಾಕುಳ ಶೈವರ ಇತಿಹಾಸ**, ಕನ್ನಡ ಸಂಶೋಧನ ಸಂಸ್ಥೆ, ಧಾರವಾಡ.

೬. ಕೊಟ್ಟೂರು ಬಸವೇಶ್ವರ ಶಿವಾಚಾರ್ಯರು ಜುಕ್ತಿ ಹಿರೇಮಠ (ಸಂ)., ೨೦೧೪, **ವೀರಭದ್ರ ಪರಂಪರೆ ಮತ್ತು ಸಂಸ್ಕೃತಿ**, ಪ್ರಸಾರಾಂಗ, ರಂಭಾಪುರಿ ಪೀಠ, ಬಾಳೆಹೊನ್ನೂರು.

೭. ಕುಮಾರ್ ಬಿ. ಡಿ., ೨೦೧೦, **ಹಾಸನ ಸೀಮೆಯ ಐತಿಹ್ಯಗಳು**, ಉನ್ನತಿ ಪ್ರಕಾಶನ, ಮೈಸೂರು.

೮. ಕೃಷ್ಣರಾಯ ಶಾ. ಮಂ., (ಪ್ರ.ಸಂ), ಗಿರಿಜಾ ದಿನಕರ (ಲೇ), ೨೦೧೩, **'ಬೇಲೂರು ಹಳೇಬೀಡು'**, ಹೇಮಂತ ಸಾಹಿತ್ಯ, ಬೆಂಗಳೂರು.

೯. ಗೊರೂರು ಅನಂತರಾಜು., ೨೦೦೮, **ಹಾಸನ ಜಿಲ್ಲೆಯ ದೇವಾಲಯ ದರ್ಶನ**, ವಾಸ್ತುಶಾಸ್ತ್ರ ಪೈಂಟಿಂಗ್ ಕಲೆ, ಹಾಸನ.

೧೦. ಗೋಪಾಲ್ ಆರ್., (ಸಂ) ೨೦೧೦, **ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ**, ಪ್ರಾಚ್ಯವಸ್ತು ಸಂಗ್ರಹಾಲಯಗಳ ಇಲಾಖೆ, ಮೈಸೂರು.

೧೧. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು., ೧೯೯೮, **ವೀರಶೈವ ಪಂಚಪೀಠ ಪರಂಪರೆ**, ಚೆನ್ನಚೇತನ ಪ್ರಕಾಶನ, ಗದಗ.

೧೨. ಚಿದಾನಂದಮೂರ್ತಿ ಎಂ., ೨೦೦೨, **ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ**, ಸಂ–೧, ಸಪ್ನ ಬುಕ್ ಹೌಸ್, ಬೆಂಗಳೂರು.

೧೩. ತಿಮ್ಮೇಗೌಡ ಹಂಪನಹಳ್ಳಿ., ೨೦೦೯, **ಹಿರಿಮೆಯ ಹಾಸನ**, ಸಂವೇಧನ ಪ್ರಕಾಶನ, ಹಾಸನ.

೧೪. ನಾಗರಾಜ ಎಂ,ಜಿ., ೨೦೧೦, **ಮಹಾವೀರಭದ್ರ**, ಶ್ರೀಮದ್ವೀರಶೈವ ಸದ್ಬೋದನಾ ಸಂಸ್ಥೆ, ಬಾಳೆಹೊನ್ನೂರು.

೧೫. ನಾಗರಾಜ ಎಂ,ಜಿ., ೨೦೧೦, **ಕಲ್ಯಾಣ ನಾಡಿನಲ್ಲಿ ವೀರಭದ್ರ**, ಶ್ರೀ ಚ. ಸಂ. ಹಿರೇಮಠ ಪ್ರಕಾಶನ, ಬೀದರ್.

೧೬. ನೀಲಾ ಮಂಜುನಾಥ., (ಮು.ಸಂ) ೨೦೧೨, **ಕರ್ನಾಟಕ ಕೈಪಿಡಿ-೨೦೧೨**, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.

೧೭. ಪರಮಶಿವಮೂರ್ತಿ., ೨೦೧೦, **ಶಾಸನ ಅಧ್ಯಯನ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮. ಪ್ರಭಾಕರ ಎಂ. ಎನ್., ೨೦೧೧, **ದೇವಾಲಯ ವಾಸ್ತು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೯. ಮನೋಜಿ. ಜಿ., ೨೦೧೫, **ದೇವಾಲಯ ವಾಸ್ತು** ವಿಜ್ಞಾನ, ಸುಬೋದಿನಿ ಬುಕ್ ಪಬ್ಲಿಷರ್, ಚಿತ್ರದುರ್ಗ.

೨೦. ರಾಜಣ್ಣ ಡಿ. ಟಿ., ೨೦೧೦, **ಕನ್ನಡ ಶಾಸನ ಮತ್ತು ಸಾಹಿತ್ಯದಲ್ಲಿ ಶಾಪ**, ಭಂಡಾರ ಪ್ರಕಾಶನ, ಮಸ್ಕಿ.

೨೧. ವಸಂತ ಲಕ್ಷ್ಮೀ ಕೆ., ೨೦೦೬, **ಹಾಸನ ಜಿಲ್ಲೆಯ ಹೊಯ್ಸಳರ ಬಸದಿಗಳು**, ಸುಮುಖ ಪ್ರಕಾಶನ, ಬೆಂಗಳೂರು.

೨೨. ವಾಸುದೇವ ಬಡಿಗೇರ.,೨೦೧೨, **ಬಳ್ಳಾರಿ ಪರಿಸರದ ಸಾಂಸ್ಕೃತಿಕ ಪರಂಪರೆ**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ

೨೩. ಶಾಂತವೀರಯ್ಯ ಹಿ.ಚಿ., ೨೦೧೦, **ಶ್ರೀ ಪುಷ್ಪಗಿರಿ ಮಹಾಸಂಸ್ಥಾನ**, ಪುಷ್ಪಗಿರಿ ಪ್ರಕಾಶನ, ಹಳೇಬೀಡು.

೨೪. ಶಿವತಾರಕ್ ಕೆ.ಬಿ., ೨೦೦೧, **ಕರ್ನಾಟಕ ಪುರಾತತ್ವ ನೆಲೆಗಳು**, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ

೨೫. ಶೇಷಶಾಸ್ತ್ರಿ ಆರ್., ೨೦೧೪, **ಕರ್ನಾಟಕದ ವೀರಗಲ್ಲುಗಳು**, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೨೬. ಸಕಲೇಶ ಮ., ೨೦೧೨, **ಹೊಯ್ಸಳೋದಯ ಸಂಶೋಧನೆ**, ಹಿಮಶೈಲ ಪ್ರಕಾಶನ, ಶಿವಮೊಗ್ಗ.

೨೭. ಸಿದ್ದೇಶ್ವರ ಶಾಸ್ತ್ರಿಗಳು ತೆಲ್ಲೂರು., ೨೦೧೨, **ವೀರಭದ್ರೇಶ್ವರ ಪುರಾಣ ಮತ್ತು ಚರಿತ್ರೆ**, ರಾಜೇಶ್ವರಿ ಪ್ರಕಾಶನ, ಗದಗ.

ಪಿ.ಎಚ್‌ಡಿ ಮಹಾಪ್ರಬಂಧಗಳು(ಅಪ್ರಕಟಿತ)

೧. ಆಚಾರಿ ಮಂಜುಳಾ.೨೦೧೫, **ಕಾಳಾಮುಖ ಪರಂಪರೆ ಮತ್ತು ಮೂರು ಜಾವಿಪೀಠ ಸಾಂಸ್ಕೃತಿಕ ಅಧ್ಯಯನ** (ಶಾಸನಗಳನ್ನು ಅನುಲಕ್ಷಿಸಿ), ಕನ್ನಡ ವಿಶ್ವವಿದ್ಯಾಲಯ ಹಂಪಿ ವಿದ್ಯಾರಣ್ಯ.

೨. ಮಹೇಂದ್ರ ಕುಮಾರ ಕೆ.ಸಿ.೨೦೧೧, **ಹಾಸನ ಜಿಲ್ಲೆಯ ಅರಸು ಮನೆತನಗಳು** (ಕ್ರಿ.ಶ ೧೫೦೦-೧೮೦೦) ಮಂಗಳೂರು ವಿಶ್ವವಿದ್ಯಾಲಯ ಮಂಗಳಗಂಗೋತ್ರಿ

ಲೇಖನಗಳು

೧. ಅಶ್ಲ ಚಿರಂಜೀವಿ. ೧೯೯೩, **ಯಮಸಂಧಿ ದೇವಿರಮ್ಮ**, ಸಂ.೦೮ ಇತಿಹಾಸ ದರ್ಶನ, ಇತಿಹಾಸ ಅಕಾಡೆಮಿ ಬೆಂಗಳೂರು.

೨. ಪುಟ್ಟಸ್ವಾಮಿ ಜಿ.ಎಸ್. ೨೦೧೧, **ಬೇಲೂರು ಪಾಳೇಗಾರರು**, ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೩. ಗೋವರ್ಧನ ಸುಂಕ. ೨೦೧೧, **ತಗರೆನಾಡು ಒಂದು ಅಧ್ಯಯನ**, ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

ಶಾಸನ ಸಂಪುಟಗಳು

೧. ಎಪಿಗ್ರಾಫಿಯ ಕರ್ನಾಟಿಕಾ ಸಂ-೯ (ಪರಿಷ್ಕೃತ) ೧೯೯೦, **ಹಾಸನ ಜಿಲ್ಲೆ-ಬೇಲೂರು ಮತ್ತು ಸಕಲೇಶಪುರ**, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

ಗೆಜೆಟಿಯರ್


೧. **ಹಾಸನ ಜಿಲ್ಲಾ ಗ್ಯಾಸೆಟಿಯರ್**, ೧೯೯೬, ಕರ್ನಾಟಕ ಗ್ಯಾಸೆಟಿಯರ್ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.

ಇಂಗ್ಲಿಷ್ ಗ್ರಂಥಗಳು

1. Dhaky m .a. 1996. **Encyclopaedia of Indian temple architecture**, adm publication.New Delhi.

2. Ali B sheik.(ed)., 1972. **The Hoysala Dynastry**, University of Mysore, Mysore.

ನಕ್ಷೆಗಳು ಮತ್ತು ತಲನಕ್ಷೆಗಳು





HASSAN DISTRICT
TO KADUR
ARASIKERE
TO TIPTUR
TO CHIKMAGALORE
TO MUDIGERE
BELUR
HASSAN
ALUR
SAKLESHPUR
TO MANGALORE
TO BANGALORE
CRPATHA
HNPURA
ARAKALGUD
TO SULIA
TO K.R.PETE
TO HUNSUR
PREPARED AT : NRDMS CENTRE/ZP/HASSAN.




BELUR TALUK
GRAMA PANCHAYATHS
0
4
8
kilometers


ಮುತ್ತಿನ ವೀರಭದ್ರೇಶ್ವರ ದೇವಾಲಯ, ಹಳೇಬೀಡು




ಕರಗಲ್ಲು ವೀರಭದ್ರೇಶ್ವರ ದೇವಾಲಯ, ಹಳೇಬೀಡು




ಯಮಸಂಧಿ ವೀರಭದ್ರೇಶ್ವರ ದೇವಾಲಯ




ಅಡಗೂರು ವೀರಭದ್ರೇಶ್ವರ ದೇವಾಲಯ



ಹಲ್ಮಿಡಿ ವೀರಭದ್ರೇಶ್ವರ ದೇವಾಲಯ



ವೀರಭದ್ರೇಶ್ವರ ದೇವಾಲಯ, ಕ್ಯಾತಲಾಪುರ



ಛಾಯಾಚಿತ್ರಗಳು




೧. ಮುತ್ತಿನ ವೀರಭದ್ರೇಶ್ವರ ದೇವಾಲಯ, ಹಳೇಬೀಡು



೧.೧ ದೇವಾಲಯದ ಭಿತ್ತಿ ಗೋಡೆ



೧.೨ ನವರಂಗ



೧.೩ ಮುತ್ತಿನ ವೀರಭದ್ರೇಶ್ವರ ಶಿಲ್ಪ



೧.೪ ಭದ್ರಕಾಳಿ ಅಮ್ಮನವರು



೨. ಕರಗಲ್ಲು ವೀರಭದ್ರ ದೇವಾಲಯ




೨.೧ ವೀರಭದ್ರ ವಿಗ್ರಹ



೨.೨ ದೇವಾಲಯದಲ್ಲಿರುವ ವೀರಗಲ್ಲು





೩. ಯಮಸಂಧಿ ವೀರಭದ್ರ ದೇವಾಲಯ





೪. ಹಲ್ಮಿಡಿ ದೇವಾಲಯ



೫. ವೀರಭದ್ರೇಶ್ವರ ದೇವಾಲಯ, ದೇವಿಹಳ್ಳಿ



೫.೧ ವೀರಭದ್ರನ ಮೊಗವಾಡ



೫.೨ ದೇವಾಲಯದ ಮುಂದಿರುವ ರುಂಡ ಶಿಲ್ಪ



೬. ವೀರಭದ್ರೇಶ್ವರ ದೇವಾಲಯ, ಅಡಗೂರು



೬.೧ ವೀರಭದ್ರ ಮೂರ್ತಿ



೬.೨ ದೇವಾಲಯದಲ್ಲಿರುವ ಶಾಸನ



೭. ಕ್ಯಾತಲಾಪುರ ದೇವಾಲಯ



೭.೧ ಸಭಾಮಂಟಪ



೮. ಪುಷ್ಪಗಿರಿ ಬೆಟ್ಟದ ವೀರಭದ್ರ ದೇವಾಲಯ
ಮಕರ ತೋರಣವಿರುವ ಬಾಗಿಲುವಾಡ



೮.೧ ವೀರಭದ್ರ ಶಿಲ್ಪ







೯. ಘಟ್ಟದಹಳ್ಳಿ ದೇವಾಲಯ

೯.೧ ನೂತನ ವಿಗ್ರಹ

೯.೨ ಹಳೆಯ ವಿಗ್ರಹ



೯.೩ ಸಪ್ತಮಾತೃಕೆಯರು



೯.೪ ವೀರಗಲ್ಲು



೧೦ ಬೆಣ್ಣೂರಿನ ವೀರಭದ್ರ ಮೂರ್ತಿ



೧೧. ಶೆಟ್ಟಿಹಳ್ಳಿ ವೀರಭದ್ರ ಮೂರ್ತಿ



೧೨. ಸಿದ್ಧಾಪುರ ವೀರಭದ್ರೇಶ್ವರ



೧೨.೧ ಸಿದ್ಧಾಪುರದ ದಾನ ಶಾಸನ



೧೩. ಮಾಳೆಗೆರೆ ದೇವಾಲಯ, ೧೩.೧ ವೀರಭದ್ರ ಶಿಲ್ಪ



೧೩.೨ ಶೂಲಬ್ರಹ್ಮಶಿಲ್ಪ



೧೪. ಇಂಟಿತೊಳಲು ದೇವಾಲಯ



೧೫.. ಬಕ್ಕರವಳ್ಳಿ ವೀರಭದ್ರ ಮೂರ್ತಿ

ಕನ್ನಡ ವಿಶ್ವವಿದ್ಯಾಲಯ